ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾನಿರ್ಣಯದ ಪ್ರಸ್ತಾವ

ಅಧ್ಯಕ್ಷರು.—ಶ್ರೀ ವೀರಪ್ಪ ಮೊಯಿಲಿಯವರೇ, ನೀವು ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಿನ್ನೆ ದಿವಸ ಪೌರ ಕಾರ್ಮಿಕರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆ ಎಂದು ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದ್ದರು. ಅವರು ಸಿದ್ಧವಾಗಿದ್ದಾರೆ,

ಅಧ್ಯಕ್ಷರು.—ಆಯಿತು.

† ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) —ಸನ್ಮಾನ್ಯ ಅಧ್ಯಕ್ಷರೇ, ಕೆಲವು ದಿವಸಗಳಿಂದ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಮರ್ಪಣೆ ಮಾಡಬೇಕೆಂದು ಹೇಳಿ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಂಡಿಸಿದ ನಿರ್ಣಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಚರ್ಚೆಯನ್ನು ಪ್ರಾರಂಭ ಮಾಡಿದ್ದುದು ಮಾನ್ಯ ಪ್ರಕಾಶ್‌ರವರು ಇದನ್ನು ಅನುಮೋದಿಸಿದ್ದುದು ಮಾಜಿ ಸಚಿವರಾದ ಶ್ರೀ ವೈ.ಕೆ. ರಾಮಯ್ಯನವರು. ಇಬ್ಬರೂ ಮಾಜಿ ಸಚಿವರೇ ಆಗಿದ್ದಾರೆ ಈ ಕೆಲಸ, ಯಾವ ಸನ್ಮಾನ್ಯ ಸದಸ್ಯರು, ಸುಮಾರು ೬೦–೬೨ ಜನ ಜನತಾಶಾಸಕರು ಈ ಸರ್ಕಾರದ ಇಮೇಜ್ ಅಂಡ್ ಪರ್‌ಫಾರ್ಮೆನ್ಸ್ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದರು, ಅವರಲ್ಲಿ ಯಾರಾದರೂ ಇಬ್ಬರನ್ನು ಆಯ್ಕೆ ಮಾಡಿ, ಈ ವಂದನಾನಿರ್ಣಯದ ಚರ್ಚೆ ಪ್ರಾರಂಭ ಮಾಡಿದ್ದರೆ ಅದಕ್ಕೆ ಒಂದು ಒಳ್ಳೆಯ ಲಕ್ಷಣ ಇರುತ್ತಿತ್ತು. ಈ ಬಗ್ಗೆ ಒಂದು ರೀತಿಯ ವ್ಯಾಪಕವಾದಂಥ ಮತ್ತು ನಿಷ್ಪಕವಾದಂಥ ಒಂದು ಚರ್ಚೆ ಕೂಡ ಇಲ್ಲಿ ಪ್ರಾರಂಭವಾಗುತ್ತಿತ್ತು ಸನ್ಮಾನ್ಯ ಬೇಳಗಿಯವರೂ ಕೂಡಸಹಿ ಹಾಕಿದ್ದರು. ಕಳೆದ ಬಾರಿ ಮಾನ್ಯ ವೇದಾಂತ ಹೆಮ್ಮಿಗೆ ಅವರಿಂದ ಪ್ರಾರಂಭ ಮಾಡಿಸಿದ್ದರು. ಯಾರು ಫರ್‌ಫಾರ್ಮೆನ್ಸ್ ಮತ್ತು ಇಮೇಜ್ ಮೇಲೆ, ಯಾವ ಮನವಿಯನ್ನು ಸ್ಪಂದಿಸಿ, ಸನ್ಮಾನ್ಯ ಮುಖ್ಯಮಂತ್ರಿಯವರು ೧೮ ಜನರನ್ನು ಮನೆಗೆ ಕಳುಹಿಸಿದರು ಅಥವಾ ಬದಲಾವಣೆ ಮಾಡಿದರು, ಅಂತಹ ಮಾಜಿ ಸಚಿವರನ್ನು ಇವತ್ತು ಆಯ್ಕೆ ಮಾಡಿ, ಈ ವಂದನಾ ನಿರ್ಣಯವನ್ನು ಮಂಡಿಸುವುದು ಮತ್ತು ಅದಕ್ಕೆ ಅನುಮೋದನೆ ಮಾಡುವ ಕೆಲಸ ಮಾಡಿದ್ದಾರೆ. ಇದು ಬಹುಶಃ ಸರಿಯಾಗಿ ಕಾಣಲಿಲ್ಲ, ಇಲ್ಲಿ ಚರ್ಚೆ ಕೂಡ ಅಂತಹ ಉಪಯುಕ್ತವಾಗಿಲ್ಲವೆಂದು ನನ್ನ ಅನಿಸಿಕೆ. ನಿಷ್ಪಕ್ಷಪಾತವಾಗಿ, ಆ ೬೦–೬೨ ಶಾಸಕರ ಪೈಕಿ ಯಾರಾದರೂ ಇಬ್ಬರಿಂದ ಈ ವಂದನಾನಿರ್ಣಯ ಮಾಡಿಸಿದ್ದರೆ ಅದಕ್ಕೆ ನಾವು ಬೆಂಬಲ ಕೊಡಬಹುದಿತ್ತು ಆದ್ದರಿಂದ ಇಲ್ಲಿ ಇವರು ಎಡವಿದ್ದಾರೆ. ಏಕೆಂದರೆ ಹೆಚ್ಚಿನ ಸದಸ್ಯರು, ಸರ್ಕಾರ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತಿಲ್ಲ, ಇದು ಅದಕ್ಷವಾಗಿದೆ, ಸಾಕಷ್ಟು ಅಕ್ರಮ ಮಾಡಿದವರು, ಭ್ರಷ್ಟಾಚಾರ ಮಾಡಿದವರು ಈ ಮಂತ್ರಿಮಂಡಲದಲ್ಲಿದ್ದಾರೆ, ಈ ಸರ್ಕಾರ ಈ ರೀತಿಯ ಕೆಲಸ ಮಾಡಿದೆ ಎಂದು ಒಂದು ಸರ್ಟಿಫಿಕೇಟ್ ಕೊಟ್ಟಮೇಲೆ ಇದು ಸರಿಯಲ್ಲವೆಂದು ಯಾರ ಮೇಲೆ ಆಪಾದನೆ ಇತ್ತೋ, ಅದು ಅಲ್ಲವೆಂದು ಸಾಬೀತು ಮಾಡುವುದಕ್ಕೆ ಒಂದು ದೊಡ್ಡ ಪ್ರಯತ್ನ ಮಾಡಿದ್ದಾರೆ, ಇದು ಹೇಗೋ ಇರಲಿ, ಅದು ಅವರ ಪಕ್ಷಕ್ಕೆ ಬಿಟ್ಟಿದ್ದು.

ಇವೊತ್ತು ರಾಜ್ಯಪಾಲರ ಭಾಷಣದ ಒಂದು ಚರ್ಚೆಯ ವಿಶ್ಲೇಷಣೆಯ ಸಂದರ್ಭದಲ್ಲಿ ಯಾವಾಗಲೂ ಒಂದು ವರ್ಷದ ಸರ್ಕಾರದ ರೀತಿನೀತಿ, ಸರ್ಕಾರ ನಡೆದುಕೊಂಡ ವಿಚಾರದಲ್ಲಿ ವಿಶ್ಲೇಷಣೆ, ಸಿಂಹಾವಲೋಕನ ನಡೆಯುತ್ತದೆ. ಸನ್ಮಾನ್ಯ ರಾಜ್ಯಪಾಲರು, ಸರಕಾರದ ಏನು ಧೋರಣೆ ಇದೆ, ಮುಂದೆ ಬರತಕ್ಕ ದಿನಗಳಲ್ಲಿ ಕರ್ನಾಟಕದ ರಾಜ್ಯದ ಜನತೆಗೆ ಏನು ಸಂದೇಶ ಕೊಡಬೇಕು, ಅದನ್ನು ಪ್ರತಿಬಿಂಬಿಸಬೇಕು, ಈ ಕೆಲಸ ಸಮರ್ಪಕವಾಗಿ, ಸರ್ಕಾರ ರಾಜ್ಯಪಾಲರ ಮುಖಾಂತರ ಮಾಡಿದೆಯೋ ಇಲ್ಲವೇ ಎಂಬ ಚರ್ಚೆ ಪ್ರಸಕ್ತ. ಇದನ್ನು ಮಾಡಬೇಕಾಗಿದೆ. ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಬರಗಾಲದಿಂದ ಪ್ರಾರಂಭ ಮಾಡಿ, ತಮ್ಮ ೧೪ನೇ ಚಾಪ್ಟರ್ ಸರ್ಕಾರಿ ನೌಕರರ ಯೋಗಕ್ಷೇಮದಲ್ಲಿ ಅಂತ್ಯ ಮಾಡಿದ್ದಾರೆ ಬರಗಾಲ, ಜನರ ಯೋಗಕ್ಷೇಮ ಇದು ಸರಿ, ಆದರೆ ಬರಗಾಲದ ಒಂದು ಚಿತ್ರ ನಮ್ಮ ಮುಂದೆ ಇರುವಾಗ, ಹೊಸ ಶುಭೋದಯದ ಆಸೆಗಳನ್ನು ಹುಟ್ಟಿಸಿ, ಕರ್ನಾಟಕ ರಾಜ್ಯದ ಜನತೆಯಲ್ಲಿ ಹೆಚ್ಚಿನ ಅಭಿವೃದ್ಧಿಯ ಬಗ್ಗೆ, ಅದು ಕೃಷಿ ಇರಬಹುದು, ಕೈಗಾರಿಕೆ ಇರಬಹುದು, ಇವುಗಳಲ್ಲಿ ಹೆಚ್ಚು ಮುನ್ನಡೆ, ಆಶಾದೀಪದ ಜ್ಯೋತಿ ಹೊತ್ತಿಸಿದ್ದರೆ ನಾವು ಅದನ್ನು ಸ್ವಾಗತ ಮಾಡಬಹುದಾಗಿತ್ತು. ಆ ರೀತಿ ಇದ್ದಿದ್ದರೆ ಬಹುಶಃ ನಾವು ಇದನ್ನು ಸ್ವಾಗತ ಮಾಡುತ್ತಿದ್ದೆವು. ಅದು ಆಗಿಲ್ಲ. ರಾಜ್ಯಪಾಲರು ತಮ್ಮ ಭಾಷಣವನ್ನು ಬರಗಾಲದಿಂದ ಪ್ರಾರಂಭ

ಮಾಡಿ ಸರಕಾರಿ ನೌಕರರ ಆಯೋಗ ಕ್ಷೇಮದಿಂದ ಅಂತ್ಯ ಮಾಡಿದ್ದಾರೆ. ಒಳಗಿನ ಪುಟಗಳಲ್ಲಿ ನಾವು ಕಾಣುವುದಾದರೂ ಏನು? ಅದನ್ನು ನಾನು ವಿವರವಾಗಿ ಹೇಳುತ್ತೇನೆ. ಒಳಗಿನ ಪುಟಗಳಲ್ಲಿ ಏನು ಬಂದಿದೆ ಎಂದರೆ ನಾಲ್ಕು ದಶಕಗಳಲ್ಲಿ ಕಾಣದಿರತಕ್ಕಂಥ ಕೋಮು ಸಂಘರ್ಷಣೆ ಕರ್ನಾಟಕ ರಾಜ್ಯದಲ್ಲಿ ಆಗಿದೆ ಎಂದು ಬಂದಿದೆ. ನಾಲ್ಕು ದಶಕಗಳಲ್ಲಿ ಕಾಣದ ಕೋಮು ಸಂಘರ್ಷಣೆ ತಮ್ಮ ಆಡಳಿತದಲ್ಲಿ ಆಗಿದೆ ಎಂದು ರಾಜ್ಯಪಾಲರ ಮುಖಾಂತರ ತಾವು ಹೇಳಿಸಿದ್ದೀರಿ. ಇದು ಭಾಷಣದಲ್ಲಿ ಬಂದಿದೆ. ಇನ್ನು ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ರಾಜ್ಯ ಕಲ್ಪನೆಗಳ ಬಗ್ಗೆ ಹೇಳಿದ್ದೀರಿ. ಅದೇ ಪ್ರಕಾರ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ, ಅಪಲೇಟ್ ಟ್ರಿಬ್ಯೂನಲ್ ಬಗ್ಗೆ ತಾವು ಹೇಳಿದ್ದೀರಿ. ಆದರೆ ಇದರಲ್ಲಿ ಒಂದು ದೊಡ್ಡ ಕೊರತೆ ಈ ಭಾಷಣದಲ್ಲಿ ಎಂದು ಹೇಳಿದರೆ, ಯಾವುದನ್ನು ಕರ್ನಾಟಕ ರಾಜ್ಯದ ಜನತೆ ಬಹಳ ಆಸಕ್ತಿಯಿಂದ ನಿರೀಕ್ಷೆ ಮಾಡಿರುತ್ತಾರೋ ಅದರ ಬಗ್ಗೆ ಯಾವ ರೀತಿಯಾದಂಥ ಒಂದು ಆಶಾದಾಯಕವಾದ ಸಂದೇಶ ಕೂಡಾ ಇಲ್ಲ. ಅದು ಏನು ಎಂದು ಹೇಳಿದರೆ, ಅಭಿವೃದ್ಧಿ, ಕೃಷಿ, ಕೈಗಾರಿಕೆ, ಸುಧಾರಣೆ, ದಕ್ಷ ಆಡಳಿತ ಇದರ ಬಗ್ಗೆ ಯಾವ ರೀತಿಯಾದ ಆಶಾದಾಯಕವಾದ ಸಂದೇಶ ಕೂಡಾ ಕೊಟ್ಟಿಲ್ಲ. ಯೋಜನೆ, ಆರ್ಥಿಕ ಪರಿಸ್ಥಿತಿ, ಸಾಮಾಜಿಕವಾಗಿ ಆರ್ಥಿಕವಾಗಿ ದುರ್ಬಲವರ್ಗದವರಿಗೆ ಕೊಡತಕ್ಕಂಥ ಸೌಲಭ್ಯಗಳು ಅವರಿಗೆ ಪುಷ್ಟಿ ಕೊಡತಕ್ಕಂಥ ಯಾವುದೇ ರೀತಿಯಾದಂಥ ಆಶಾದಾಯಕ ಭಾವನೆಗಳನ್ನು ಸರಕಾರ ರಾಜ್ಯಪಾಲರ ಭಾಷಣದ ಮುಖೇನ ವ್ಯಕ್ತಪಡಿಸಿಲ್ಲ. ಇದನ್ನು ಬಹಳ ಸೂಕ್ಷ್ಮವಾಗಿ ನಾವೆಲ್ಲಾ ಗಮನಿಸಿದ್ದೇವೆ. ಈಗ ಅವರು ಬರಗಾಲದ ಮುಖೇನ ಭಾಷಣವನ್ನು ಪ್ರಾರಂಭ ಮಾಡಿದುದರಿಂದ, ನಾನೂ ನನ್ನ ಭಾಷಣವನ್ನು ಬರಗಾಲದ ಮುಖೇನ ಪ್ರಾರಂಭ ಮಾಡುತ್ತೇನೆ. ಇದು ಅಪಲಕ್ಷಣವಾದರೂ ಪ್ರಾರಂಭ ಮಾಡಬೇಕಾಗಿದೆ. ಅಧ್ಯಕ್ಷರೇ ಬರಗಾಲದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೂಡಾ ಇದರ ಬಗ್ಗೆ ವರದಿ ಕೊಟ್ಟಿದೆ. ಅದರ ಪ್ರಕಾರ ೪೦ ಲಕ್ಷ ಮಂದಿ ಸಣ್ಣ, ಮಧ್ಯಮ ತರಗತಿಯ ಕೃಷಿಕಾರ್ಮಿಕ ಅಥವಾ ಕುಶಲಕರ್ಮಿಗಳು ಬರಗಾಲದ ಬವಣೆಯಿಂದ ತತ್ತರಿಸಿದ್ದಾರೆ. ಆದರೂ ಕೂಡ ೧೯೮೫-೮೬ನೇ ಸಾಲಿನವರೆಗೆ ಇವರು ಉದ್ಯೋಗವನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆ ಎಂದರೆ ೪ ಲಕ್ಷ ಮಂದಿಗೆ ಮಾತ್ರ ಉದ್ಯೋಗ ಕೊಟ್ಟಿದ್ದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೂಡ ಎತ್ತಿತೋರಿಸಿದೆ. ನಾನು ಆ ವರದಿಯನ್ನು ನೋಡಿದ ಪ್ರಕಾರ, ೪೦ ಲಕ್ಷ ಜನ ಯಾರು ಬರಗಾಲದ ಬವಣೆಗೆ ಒಳಗಾದವರಿಗೆ ಕೆಲಸ ಕೊಡಬೇಕಾಗಿತ್ತು, ೪೦ ಲಕ್ಷ ಮಂದಿಗೆ ಕೆಲಸ ಕೊಡುವುದು ಬೇಡ, ಕನಿಷ್ಠ ಪ್ರಮಾಣ ೧೦ ಲಕ್ಷ ಮಂದಿಗೆ ಕೆಲಸ ಕೊಡಬೇಕಾದುದು ಅಗತ್ಯವಾಗಿದೆ ಎಂದು. ಕಡೆಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳಿದ್ದಾರೆ, ಆದರೂ ಇವರು ಕೆಲಸ ಕೊಟ್ಟಿದ್ದು ಮಂದಿ. ನಾಲ್ಕು ಲಕ್ಷ ಮಂದಿಗೆ ಈಗಲೂ ೧೦ ಲಕ್ಷ ಮಂದಿಗೆ ಕೆಲಸ ಕೊಡಬೇಕಾದಾಗ ಕೇವಲ ೫-೬ ಲಕ್ಷ ಮಂದಿಗೆ ಮಾತ್ರ ಕೆಲಸ ಕೊಟ್ಟಿದ್ದು, ಉಳಿದ ೪೦ ಲಕ್ಷ ಮಂದಿ ಪರಮಾವಧಿ ಜನರು ಬರಗಾಲದಿಂದ ಬಾಧೆ ತಡತಕ್ಕದ್ದು ಇದೆ. ಇವೊತ್ತು ನೀವು ಅನೇಕ ಕಡೆಗಳಲ್ಲಿ ಭಾಷಣ ಮಾಡುತ್ತಿದ್ದೀರಿ, ದಿಲ್ಲಿಗೆ ಹೋದಾಗ ಹೇಳುತ್ತೀರಿ, ಅನೇಕಬಾರಿ ಸರಕಾರದವರು ಹೇಳುತ್ತಿರುವುದನ್ನು ನಾವು ಕಂಡಿದ್ದೇವೆ, ನಾವು ಬರಗಾಲಕ್ಕಾಗಿ ೫೩೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಕಳೆದ ನಾಲ್ಕು ವರ್ಷಗಳಲ್ಲಿ ಎಂದು ಹೇಳಿದ್ದೀರಿ. ಒಂದು ಪತ್ರಿಕೆಯಲ್ಲಿ ಒಂದೇ ವರ್ಷದಲ್ಲಿ ನಾವು ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಬಂದಿತ್ತು. ಅದು ದೆಹಲಿಯಲ್ಲಿ ಕೊಟ್ಟ ಹೇಳಿಕೆ. ಅದು ಸರಿ ಇರಲಿಕ್ಕಿಲ್ಲ ಎಂದು ಸನ್ಮಾನ್ಯ ರಾಚಯ್ಯನವರು ಹೇಳಿದರು. ನಿನ್ನೆ ಮೊನ್ನೆ ಇಲ್ಲಿ ನೋಡಿದಾಗ, ಕಳೆದ ನಾಲ್ಕು ವರ್ಷಗಳಲ್ಲಿ ೫೩೧ ಕೋಟಿ ರೂಪಾಯಿಗಳನ್ನು ಬರಗಾಲಕ್ಕೆ ಸೀಮಿತವಾಗಿ ಸರಕಾರ ಖರ್ಚು ಮಾಡಿದೆ ಎಂದು ಒಂದು ಹೇಳಿಕೆ ಕೂಡ ಕೊಟ್ಟಿದ್ದೀರಿ. ಇದರಲ್ಲಿ contribution from the centre 168 crores.

೧೬೮ ಕೋಟಿ ರೂಪಾಯಿಗಳನ್ನು ಮಾತ್ರ ತಾವು ಪ್ಲಾನ್ ಎಸ್ಟಿಮೇಟ್‌ನಲ್ಲಿ ಕೊಟ್ಟಿದ್ದೀರಿ. ಈ ಬಗ್ಗೆ ಈಗ ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಬಜೆಟ್ ಭಾಷಣದ ಮೇಲೆ ಹೆಚ್ಚು ವಿಶ್ಲೇಷಣೆ ಮಾಡುತ್ತೇನೆ. ಈಗ ವಿಪರೀತವಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಬರಗಾಲದ ಬಗ್ಗೆ ಪತ್ರಿಕೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಉಲ್ಲೇಖ ಮಾಡಿದ್ದಾರೆ. ಆದ್ದರಿಂದ ನಾನು ಕೆಲವೇ ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಕೌಂಟೆಂಟ್ ಜನರಲ್‌ರವರು ಒಪ್ಪಿಕೊಂಡಿರುವಂತಹ ಲೆಕ್ಕಪತ್ರಗಳು ಮತ್ತು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಕೊಟ್ಟಂತಹ ಲೆಕ್ಕಪತ್ರಗಳನ್ನು ಮಾತ್ರ ನಾನು ಉಲ್ಲೇಖ ಮಾಡುತ್ತೇನೆ. Estimated expenditure proposed originally by the State

Government. It is authenticated Account. ಆ ಪ್ರಕಾರ ನಾನು ಹೇಳುತ್ತಿದ್ದೇನೆ. ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತು. ಬರಗಾಲದ ಬಗ್ಗೆ ಒಂದು ವರ್ಷದ್ದು ಅಲ್ಲ, ಎರಡು ವರ್ಷದ್ದು ಅಲ್ಲ ಮೂರು ನಾಲ್ಕು ವರ್ಷದ ಲೆಕ್ಕ ಪತ್ರಗಳು ಇವೆ. ನಾನು ಏನಾದರೂ ಪತ್ರಿಕೆಗಳಲ್ಲಿ ಈ ವಿಚಾರ ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಮಾನ್ಯ ವೀರಪ್ಪಮೊಯ್ಲಿಯವರು ಕೊಟ್ಟ ಅಂಕಿಅಂಶಗಳು ಸರಿ ಇಲ್ಲವೆಂದು. ಈಗ ನಾನು ಈ ಸದನದಲ್ಲಿ ಕೊಡತಕ್ಕಂಥ ಅಂಕಿ ಅಂಶಗಳು ಅಕೌಂಟೆಂಟ್ ಜನರಲ್‌ರವರು ಆಡಿಟ್ ಮಾಡಿರುವಂತಹ ಲೆಕ್ಕ ಪತ್ರಗಳು. ನಾನು ಕೊಡುವ ಅಂಕಿಅಂಶಗಳು ಸರಿ ಇಲ್ಲ ಎಂದರೆ ಸರ್ಕಾರದವರು ಎದ್ದು ನಿಂತು ಸರಿ ಇಲ್ಲವೆಂದು ಹೇಳಲಿ. ಸರಿ ಇದ್ದಂತಹ ಲೆಕ್ಕಪತ್ರಗಳನ್ನು ನಾನು ಇಲ್ಲಿ ಕೊಡುತ್ತಿದ್ದೇನೆ. ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೊಟ್ಟಂತಹ ಲೆಕ್ಕಪತ್ರಗಳ ಮಾಹಿತಿಯ ಪ್ರಕಾರ ನಾನು ಇಲ್ಲಿ ಹೇಳುತ್ತಿದ್ದೇನೆ. ಅದಕ್ಕಿಂತ ಹೆಚ್ಚು ನಾನು ಇಲ್ಲಿ ಏನೂ ಹೇಳುವುದಿಲ್ಲ. ಅದರ ಪ್ರಕಾರ ತಾವು ೧೯೮೩–೮೪ರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ? Projected expenditure proposed estimated expenditure Rs. 33.45 crores. ತಾವು ಬರಗಾಲಕ್ಕೆ ಖರ್ಚು ಮಾಡಿದ್ದೇವೆಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದು ೨೫೦–೩೫೦ ಕೋಟಿ ರೂಪಾಯಿಗಳು ಆದರೆ actual expenditure by the State Government in that year is Rs. 28 37 crores. ಕೇಂದ್ರ ಸರ್ಕಾರದಿಂದ ೧೧.೭೮ ಕೋಟಿ ರೂಪಾಯಿಗಳು ಬಂದಿದೆ. ಇದರಲ್ಲಿ ೧.೨೩ ಕೋಟಿ ರೂಪಾಯಿಗಳು ಗ್ರಾಂಟ್ ಈ ಹಣ ಹಿಂದಕ್ಕೆ ಕೊಡಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ಲಾನ್ ಅಸಿಸ್ಟೆನ್ಸ್ ಬಗ್ಗೆ ಏನು ಕೇಂದ್ರ ಸರ್ಕಾರದ ವಿರುದ್ಧ ಹೇಳುತ್ತಾರೆ ಅದು ಸರ್ವಥಾ ಸರಿಯಾದುದು ಅಲ್ಲ. ಇನ್ನು ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ೧೯೮೪–೮೫ರ ಪ್ರಾಜೆಕ್ಟ್ ಆ ಪ್ರಕಾರ ೨೦೯.೫೦ ಕೋಟಿ ರೂಪಾಯಿಗಳು. ಇದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆಂದರೆ actual expenditure by the State Rs. 39.87 crores. as against the projected expenditure of Rs. 209 50 crores. ಇದರಲ್ಲಿ ಮಾರ್ಜಿನಲ್ ಮನಿ ಎಂದು ೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಹಣ ಕೇಂದ್ರ ಸರ್ಕಾರದ ಫೈನಾನ್ಸ್ ಕಮಿಷನ್‌ನಿಂದ ಬರುತ್ತದೆ. ಕೇಂದ್ರಸರ್ಕಾರ ರಾಜ್ಯ ಸರ್ಕಾರಗಳಿಗೆ ಎಷ್ಟು ಹಣ ಕೊಡಬಹುದೋ ಅಷ್ಟು ಹಣ ಕೊಡುತ್ತಾರೆ. difference of Rs. 10 crores is covered by major portion by the devolution of funds because of the Finance Commission. It is the margin money which is provided to each of the state to meet the drought conditions of drought contingency. Practically they have given everything ಇದರಲ್ಲಿ ಗ್ರಾಂಟ್ ೮.೯೧ ಕೋಟಿ ರೂಪಾಯಿಗಳು. ಲೋನ್ ೨೦.೮೧ ಕೋಟಿ ರೂಪಾಯಿಗಳು. ಇದು ಸರಿಯಲ್ಲವೆಂದು ಸರ್ಕಾರಕ್ಕೆ ಕಂಡು ಬಂದರೆ ತಕ್ಷಣ ಎದ್ದು ನಿಂತು ಹೇಳಿ, ಇಲ್ಲದಿದ್ದರೆ ವೆರಿಫೈ ಮಾಡಿ. ಮಾನ್ಯ ಮೊಯಿಲಿಯವರು ಏನಾದರೂ ಹೇಳಿದರೂ ಅದು ಸರಿಯಿಲ್ಲವೆಂದು ಹೇಳುತ್ತೀರಿ. I am repeating on the floor of the House so that you can say that it is not correct. ಇದರಲ್ಲಿ ಮತ್ತೇನು ಉಳಿದಿದ್ದು. ಇನ್ನು ೧೯೮೫–೮೬ನೇ ಸಾಲಿನ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಅದರಲ್ಲಿ estimated expenditure is Rs, 587.78 crores which was proposed by the State Government ತಾವು ಪತ್ರಿಕೆಗಳಿಗೆ ಹೇಳಿಕೆಗಳು ಕೊಡುವುದು ಒಂದು ಖರ್ಚು ಮಾಡುವುದು ಒಂದು. actual expenditure as against Rs. 587.78 crores is Rs. 144.39 crores expenditure by the State Government,

ಗ್ರಾಂಟ್ ೧೮.೯೭ ಕ್ರೋರ್ಸ್, ಲೋನ್ ೩೨.೫೫ ಕ್ರೋರ್ಸ್, By the State Government for the consumption of the press and the publicity, and the Government of India projected expenditure was 1,130.73 crores for these three years. ೮೫–೮೬ರಲ್ಲಿ ತಾವು ಖರ್ಚು ಮಾಡಿದ್ದುದು ಎಷ್ಟು ಎಂದರೆ as against 1,130 crores ೧೪೪.೩೯ ಕ್ರೋರ್ಸ್ ಡ್ರಾಟ್ ಕಂಡೀಷನ್‌ಗೆ ೩ ವರ್ಷಕ್ಕೆ ಖರ್ಚು ಮಾಡಿದ್ದುದು is it your case that you have spent 400 crores in 1986–87. ಆ ಲೆಕ್ಕಕ್ಕೆ ನಾನು

ಬರುವುದಿಲ್ಲ ತಮ್ಮ ಲೆಕ್ಕದ ಪ್ರಕಾರ ೮೫-೮೬ರಲ್ಲಿ ಡ್ರಾಟ್ ಅಷ್ಟು ಸಿವಿಯರ್ ಆಗಿರಲಿಲ್ಲ. ಆದ್ದರಿಂದ ಇದಕ್ಕಿಂತ ಕಡಿಮೆ ಖರ್ಚಾಗಿರಬಹುದು. ಇದಕ್ಕೆ Government of India has already given more than 65 crores. ಆದ್ದರಿಂದ ಇವತ್ತು ೧೪೪.೧೯ ಕೋಟಿಯನ್ನು ೩ ವರ್ಷಗಳಲ್ಲಿ ಖರ್ಚು ಮಾಡಿದ್ದೀರಿ. ಅದರಲ್ಲಿ ಕೇಂದ್ರ ಸರ್ಕಾರ ೧೦೯.೧೯ ಕೋಟಿ ಕೊಟ್ಟಿದೆ, ಅಥವಾ ಅದಕ್ಕಿಂತಲೂ ಹೆಚ್ಚಿಗೆ ಎಂದರೆ ಸುಮಾರು ೧೫೪.೫೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. You have got to account for 10 crores by the Central Government apart from each of the year. ಕೇಂದ್ರ ಸರ್ಕಾರದವರು about 7 to 8 crores margin money ಕೊಟ್ಟಿದ್ದಾರೆ. ಅಂದರೆ, ಒಟ್ಟು ೧೮೦ ಕೋಟಿ ರೂಪಾಯಿಗಳಾಯಿತು. as against expenditure which is shown in the accounts ೫೩೧ ಕೋಟಿ ರೂಪಾಯಿಗಳನ್ನು ಪ್ಲಾನಿಂಗ್‌ನಲ್ಲಿ ಖರ್ಚು ಮಾಡಿದ್ದೇವೆಂದು ಜನಗಳಿಗೆ ಮಿಸ್‌ಲೀಡ್ ಮಾಡತಕ್ಕಂಥ ಅಕೌಂಟ್ ಪ್ರೊಸೀಜರ್ ಯಾವುದನ್ನು ಮಾಡುತ್ತಿದ್ದೀರೋ ಅದು the hallowness of the claim made by you ಇದು ಪ್ಲಾನ್ ಸ್ಕೀಮ್‌ನಲ್ಲಿ ಮತ್ತು ನಾನ್ ಪ್ಲಾನ್ ಸ್ಕೀಮ್‌ನಲ್ಲಿ ಇದ್ದಂಥ ಹಣ. This is exclusively on the drought expenditure which is projected by you to the Accountant General and money spent by you. ತಾವು ಏನು ಖರ್ಚು ಮಾಡಿದ್ದೀರೋ ಅದನ್ನು ಅವರು ಕೊಡುತ್ತಾರೆಯೇ ಹೊರತು ತಾವು ಸಾರ್ವಜನಿಕ ಭಾಷಣದಲ್ಲಿ ಕೇಳಿದಷ್ಟು ಯಾರು ಕೊಡುವುದಕ್ಕಾಗುವುದಿಲ್ಲ. ತಾವು ಎಷ್ಟು ಖರ್ಚು ಮಾಡಲಿಕ್ಕೆ ಸಾಧ್ಯವಾಗುತ್ತದೆ for providing employment ? ತಾವು ಈ ಮೂರು ವರ್ಷದಲ್ಲಿ ಏನು ಖರ್ಚು ಮಾಡಿದ್ದೀರಿ ಎಂಬುದನ್ನು ತಾವು ದಯಮಾಡಿ ನೋಡಬೇಕು ನೀವು ಜನರಿಗೆ ಕೆಲಸ ಕೊಡುವುದಕ್ಕೆ ೮೩-೮೪ರಲ್ಲಿ ಖರ್ಚು ಮಾಡಿರುವುದು ೧೧.೪೩ ಕೋಟಿ ಮಾತ್ರ. ೮೪-೮೫ರಲ್ಲಿ ಕೆಲಸ ಕೊಡುವುದಕ್ಕೆ ೧೯.೪೫ ಕೋಟಿ ರೂಪಾಯಿಂಗಳು ಮಾತ್ರ. ೮೫-೮೬ರಲ್ಲಿ ೪೮.೨೮ ಕೋಟಿ ರೂಪಾಯಿಗಳನ್ನು ಮಾತ್ರ. ಆದ್ದರಿಂದ ತಾವು ಬರಗಾಲದ ನೆವದಲ್ಲಿ ಜನರನ್ನು ವಂಚಿಸತಕ್ಕ ಕೆಲಸ ಮಾಡಿದ್ದೀರಿ. ಬರಗಾಲದಲ್ಲಿ ೪೦ ಲಕ್ಷ ಜನರಿಗೆ ಕೆಲಸವನ್ನು ಕೊಡಬಹುದಾಗಿತ್ತು. ಆದರೆ, ನೀವು ಕೇವಲ ೧೫ ಲಕ್ಷ ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದೀರಿ. ಕಡಿಮೆ ಹಣ ಖರ್ಚು ಮಾಡಿ, ನಾವು ಬರಗಾಲಕ್ಕಾಗಿ ೫೩೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದರೆ ಅದು ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟ್ ಆಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಸರಿಯಾದ ಅಕೌಂಟ್‌ನ್ನು ಇಲ್ಲಿ ಕೊಡಿ. You take the entire House into confidence. ಜನರಿಗೆ ಕಾಸ್ಮೆಟಿಕ್ ಸ್ಕ್ರೀನ್ ಮಾಡುವುದಕ್ಕೆ ಹೋಗಬೇಡಿ ಜನರನ್ನು ಈ ರೀತಿ ಬಲಿಪಶುವನ್ನಾಗಿ ಮಾಡುವುದಕ್ಕೆ ಹೋಗಬೇಡಿ. ಬರಗಾಲಕ್ಕೆ ೫೩೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದರೆ, ಜನಗಳಿಗ ಕೆಲಸವನ್ನು ಒದಗಿಸಲಿಕ್ಕೆ ಎಷ್ಟರ ಮಟ್ಟಿಗೆ ಖರ್ಚು ಮಾಡಿದ್ದೀರಿ ? ಸಾರ್ವಜನಿಕರ ಅಭಿಪ್ರಾಯದಲ್ಲಿ ಹಾಗೂ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಇದರ ಬಗ್ಗೆ ಒಂದು ಅಪಾರ್ಥವನ್ನು ಕಲ್ಪಿಸುವುದಕ್ಕೆ ಅವಕಾಶವನ್ನು ದಯಮಾಡಿಟ್ಟು ಮಾಡಬೇಡಿ. I am prepared to give this account to you. I have prepared a table for it. ೪೦೦ ಕೋಟಿ ರೂಪಾಯಿಂಗಳನ್ನು ೧೯೮೬-೮೭ರಲ್ಲಿ ತಾವು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ, ನನಗನ್ನಿಸುತ್ತದೆ it is not your case. ೪೦೦ ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೇಜರ್ ಇರಿಗೇಷನ್‌ಗೆ ಖರ್ಚು ಮಾಡಿದ್ದನ್ನೆಲ್ಲಾ ಇದರಲ್ಲಿ ಹೇಳಿದ್ದಾರೆ.

ಈಗ ಏನಾಗಿದೆ ಎಂದರೆ ಈ ಬರಗಾಲ ಸಂದರ್ಭದಲ್ಲಿ ನಾವು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಎಷ್ಟರಮಟ್ಟಿಗೆ ಇವರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ ಎಂಬ ಬಗ್ಗೆ ಒಂದೆರಡು ಅಂಶಗಳನ್ನು ಹೇಳಬಯಸುತ್ತೇನೆ. ಬರಗಾಲ ಸಮಯದಲ್ಲಿ for instance, agricultural imputs ಮತ್ತು ಬಹಳ ಅವಶ್ಯಕವಾಗಿರತಕ್ಕಂಥ ಕೆಲಸ ಖಂಡಿತವಾಗಿ rescheduling of crop loan ಎಷ್ಟು ಅವಶ್ಯಕತೆಯೋ it is also equally important...ಅದಕ್ಕೆ ಎಷ್ಟು ಖರ್ಚುಮಾಡಿದ್ದಾರೆ ಗೊತ್ತೇ? ೧೯೮೩-೮೪ರಲ್ಲಿ ಸರಕಾರ ೮೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಒಂದು ಪೈಸೆಯನ್ನೂ ಇವರು ಖರ್ಚುಮಾಡಿಲ್ಲ. ಇನ್ನು ೧೯೮೪-೮೫ರಲ್ಲಿ ಕೇಂದ್ರ

ಸರ್ಕಾರದಿಂದ ೨ ಕೋಟಿ ೧೨ ಲಕ್ಷ ರೂಪಾಯಿಗಳನ್ನು ಪಡೆದಿದ್ದು ಅದರಲ್ಲಿ ಇವರು ಖರ್ಚು ಮಾಡಿರುವುದು ೨.೯ ಕೋಟಿ ರೂಪಾಯಿಗಳನ್ನು. ೧೯೮೫-೮೬ರಲ್ಲಿ ಇದಕ್ಕೆ for rescheduling the crop loan and agricultural inputs ೮ ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ಎಂದರೆ as against 8 crores, ೩.೮ ಕೋಟಿ ರೂಪಾಯಿಗಳು ಮಾತ್ರ. ಯಾವುದು ನಿಜವಾಗಿ ರೈತನ ಒಂದು ಪುನರ್ವಸತಿ ಮಾಡತಕ್ಕಂಥ ಕಾರ್ಯಕ್ರಮ ಇದೆ, ಅದರಲ್ಲಿಯೂ ೪ ಕೋಟಿ ರೂಪಾಯಿಗಳನ್ನು ಇವರು ಖಜಾನೆಯಲ್ಲಿ ಉಳಿಸಿಕೊಂಡಿದ್ದಾರೆ ಅಥವಾ ಕೇಂದ್ರ ಸರಕಾರ ಕೊಟ್ಟಿರಲಿಕ್ಕಿಲ್ಲ ಏಕೆಂದರೆ ಕೇಂದ್ರ ಸರಕಾರದವರು ನೀವು ಖರ್ಚುಮಾಡದಿದ್ದರೆ ಕೊಡುವುದಿಲ್ಲ. ಬರಗಾಲ ಪ್ರದೇಶದ ರೈತರ ಬಗ್ಗೆ ಇವರ ಕಳಕಳಿಯ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಉದಾಹರಣೆ ಬೇಕಾಗಿಲ್ಲ. I am telling you the very core sector. ಇವರುಗಳು ಮೊಯಿಲಿಯವರು ಪತ್ರಿಕೆಗಳಲ್ಲಿ ಏನೋ ಹೇಳಿಕೆ ಕೊಡುತ್ತಾರೆ ಎಂದು ನನ್ನ ಮೇಲೆ ಆಪಾದನೆಗಳನ್ನು ಮಾಡುತ್ತಾ ಇರುತ್ತಾರೆ. ಆದುದರಿಂದ ನಾನು ಇವರ ಆಪಾದನೆಗಳಿಗೆ ಗುರಿಯಾಗುವುದಿಲ್ಲ. ಅದಕ್ಕಾಗಿ ಈ ಅಂಕಿಅಂಶಗಳನ್ನು ಕೊಡುತ್ತಿದ್ದೇನೆ. ಇನ್ನೊಂದು, very important matter – ie. drinking water ಇದರ ಬಗ್ಗೆಯೂ ಕೂಡ ಕೇಂದ್ರ ಸರಕಾರ 5.53 crores ೧೯೮೩-೮೪ರಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ೧೫.೫೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೧೯೮೪-೮೫ ರಲ್ಲಿ ೭.೮೭ ಕೋಟಿ ರೂಪಾಯಿಗಳನ್ನು ಫಿಕ್ಸ್ ಮಾಡಿದ್ದಾರೆ, ಖರ್ಚುಮಾಡಿದುದು ೬.೫ ಕೋಟಿಗಳು. ೧೯೮೫-೮೬ರಲ್ಲಿ ೧೫.೬ ಕೋಟಿಗಳನ್ನು ಕೊಟ್ಟರೆ ೧೮.೩೮ ಖರ್ಚು ಮಾಡಿದ್ದಾರೆ. ೩ ಕೋಟಿ ರೂಪಾಯಿಗಳು ಮಾತ್ರ ಹೆಚ್ಚಿಗೆ ಖರ್ಚು ಮಾಡಲಾಗಿದೆ. ಮಾನ್ಯ ನಜೀರ್ ಸಾಹೇಬರಿಗೆ ಬೋರ್‌ವೆಲ್ ಸಾಹೇಬರು ಎಂದು ಹೇಳುತ್ತಾರೆ. Central Government has given 15.66 crores, they have spent 18.38 crores ೩ ಕೋಟಿ ರೂಪಾಯಿಗಳನ್ನು ಮಾತ್ರ ಜಾಸ್ತಿ ಖರ್ಚು ಮಾಡಿದ್ದಾರೆ. ಅದು ದೊಡ್ಡ ಮಹತ್ವ ಏನೂ ಅಲ್ಲ. ಅಂಥ ದೊಡ್ಡ ಕೆಲಸವೇನೂ ಮಾಡಿದಂತಾಗಲಿಲ್ಲ ಆದುದರಿಂದ ಇವೊತ್ತು ಬರಗಾಲ ಪರಿಸ್ಥಿತಿಯನ್ನು ದಯಮಾಡಿ ಜನರ ಪ್ರಯೋಜನಕ್ಕೆ ಉಪಯೋಗ ಮಾಡಿ. ಆ ನೊಂದ ಜನರ ನಿಜವಾದ ಸಂಕಷ್ಟಗಳನ್ನು ಅರಿತು ಅದಕ್ಕೆ ಸ್ಪಂದಿಸುವ ಕೆಲಸವನ್ನು ಮಾಡಿ. ಆ ಕಾರ್ಯದಲ್ಲಿ ಸರಕಾರಿ ಆಡಳಿತ ಯಂತ್ರವನ್ನು ಸಜ್ಜುಗೊಳಿಸುವ ಪ್ರಯತ್ನ ಮಾಡಿ. ಈ ಮಹತ್ಕಾರ್ಯಗಳನ್ನು ಮಾಡುವುದನ್ನು ಬಿಟ್ಟು ಕೇವಲ ಕೇಂದ್ರ ಸರ್ಕಾರವನ್ನು ದೂರುವುದಕ್ಕೆ ಈ ಪರಿಸ್ಥಿತಿಯನ್ನು ಒಂದು ವರದಾನ ಎಂದು ತಿಳಿದುಕೊಳ್ಳಬೇಡಿ. ಈ ಬರಗಾಲ ಪರಿಸ್ಥಿತಿಯನ್ನು, ಅದರ ಮೂಲಕ ಕೇಂದ್ರ ಸರಕಾರವನ್ನು ದೂರಲು, ಕರ್ನಾಟಕದಲ್ಲಿನ ಜನತಾಪಕ್ಷಕ್ಕೆ ರಾಜಕೀಯಕ್ಕೆ ಒಂದು ಅಸ್ತ್ರ ಎಂದು ತಿಳಿದುಕೊಳ್ಳಬೇಡಿ. ಮೇಲಿಂದ ಮೇಲೆ ಕೇಂದ್ರ ಸರಕಾರದವರ ಮೇಲೆ ಆಪಾದನೆ ಹಾಕುತ್ತಾ ಇರತಕ್ಕಂಥ ಕೆಲಸವನ್ನು ದಯಮಾಡಿ ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಹೆಚ್ಚಿನ ವಿವರಣೆಗಳನ್ನು ಕಂದಾಯ ಇಲಾಖೆಯ ಮೇಲೆ ಬಜೆಟ್ ಭಾಷಣ ಮಾಡುವಾಗ ಮಾತನಾಡುತ್ತೇನೆ. ಇನ್ನು ಇರಿಗೇಷನ್ ಮತ್ತು ಪವರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಏಕೆಂದರೆ ಇದರ ಬಗ್ಗೆ ಕೂಡ ಒಂದೆರಡು ಪ್ಯಾರಾಗಳನ್ನು ರಾಜ್ಯಪಾಲರ ಭಾಷಣದಲ್ಲಿ ತಾವು ಕೊಟ್ಟಿದ್ದೀರಿ. ಅಧ್ಯಕ್ಷರೇ, ಮಲಪ್ರಭಾ ಘಟಪ್ರಭಾ ಎರಡೂ ಕೃಷ್ಣಾ ಬೇಸಿನ್‌ಗೇ ಸೇರುತ್ತವೆ ಇವು ಬಹಳ ಪ್ರಾಮುಖ್ಯವಾದುವು. ಯುಕೆಪಿಯಲ್ಲಿ ಮಲಪ್ರಭಾ, ಘಟಪ್ರಭಾ ಮತ್ತು ಗುಲ್ಬರ್ಗಾ ಕಡೆಯ ಕೆಲವು ಮೇಜರ್ ಪ್ರೊಜೆಕ್ಟ್‌ಗಳು ಇವೆ. ಇವುಗಳ ಆದ್ಯತೆ ಬಗ್ಗೆ ಇವೊತ್ತಿಗೂ ಸ್ಪಷ್ಟವಾದ ನೀತಿಯನ್ನು ಪಡೆದುಕೊಳ್ಳಲಿಕ್ಕೆ ಈ ಸರಕಾರಕ್ಕೆ ಆಗಿಲ್ಲ. ಆ ವಿವರಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ವಿಶ್ಲೇಷಣೆ ಮಾಡುವುದಕ್ಕೆ ಮಾತ್ರ ಇಚ್ಛೆಪಡುತ್ತೇನೆ. ಯುಕೆಪಿಗೆ ೨೦೦ ಕೋಟಿಗಳನ್ನು ಕಾವೇರಿ ಬೇಸಿನ್‌ಗೆ ೧೦೦ ಕೋಟಿಗಳನ್ನು ಕೊಡಬೇಕೆಂದು ಇವರು ಏನು ಮಾಡಿಕೊಂಡಿದ್ದಾರೆ ಅದನ್ನು ಇವರು ಸದನದಲ್ಲಿ ಹೇಳುವುದಕ್ಕೆ ಹೋಗಲಿಲ್ಲ, ತಮ್ಮ ಪಕ್ಷದ ಸಭೆಯಲ್ಲಿ ನಿರ್ಣಯ ತೆಗೆದುಕೊಂಡರು, ಆದರೆ ಇಲ್ಲಿ ನಾವು ಒತ್ತಾಯ ಮಾಡಿದ್ದೆವು. ಏನೆಂದರೆ ದಯವಿಟ್ಟು ೩೦೦ ಕೋಟಿಗಳನ್ನು ಯುಕೆಪಿಗೂ ಉಳಿದ ೧೦೦ ಕೋಟಿಗಳನ್ನು ಕಾವೇರಿ ಬೇಸಿನ್‌ಗೂ ಕೊಡಿ ಎಂದಿದ್ದೆವು. ಒಂದು ಬೇಡಿಕೆಯಾದ ೧೦೦ ಕೋಟಿಗಳನ್ನು ಕಾವೇರಿ ಬೇಸಿನ್‌ಗೆ ಕೊಡುವುದನ್ನು ಈಡೇರಿಸಿದರು. ಆದರೆ ೩೦೦ ಕೋಟಿಗಳ ಬೇಡಿಕೆಯನ್ನು ಈಡೇರಿಸಲಿಲ್ಲ. ಏಕೆಂದರೆ ಇವರಿಗೆ ಅಷ್ಟು ಕೊಡಲು ಆಗುತ್ತಿಲ್ಲ. ಪಾಪ ಯುಕೆಪಿ ಪ್ರೊಜೆಕ್ಟ್ ಕಡೆಯ ಜನ ಕೆಲಸವಾಗಲಿಲ್ಲದೆ ಚಡಪಡಿಸುತ್ತಿದ್ದಾರೆ. ಆದರೆ ಇವರು ಮಲಪ್ರಭಾ, ಘಟಪ್ರಭಾ, ಅಪ್ಪರ್ ಕೃಷ್ಣಾ ಎಲ್ಲಾ

ಸೇರಿಸಿ ಇವರು ೨೦೦ ಕೋಟಿ ಕೊಟ್ಟಿದ್ದಾರೆ. ಕಾವೇರಿ ಬೇಸಿನ್ ಒಂದಕ್ಕೆ ೧೦೦ ಕೋಟಿ ಕೊಟ್ಟಿದ್ದಾರೆ. ನಾನು ಸುಮ್ಮನೆ ಹೇಳುತ್ತಿಲ್ಲ. ಪ್ಲಾನ್ ಡಾಕ್ಯುಮೆಂಟ್ಸ್ ನನ್ನ ಹತ್ತಿರ ಇವೆ ನಾನು ಯಾವುದನ್ನು ಕಂಟ್ರಾಡಿಕ್ಷನ್ ಮಾಡುವುದಿಲ್ಲ. ನಮ್ಮ ಊರಿನ ಕಡೆ ಈ ಸಗಣಿ ಸಾರಿಸಿದ ಹಾಗೆ ಎಂದು ಹೇಳುವ ರೀತಿ ಇವರು ಮಾಡಿದ್ದಾರೆ ಸಗಣಿ ಸಾರಿಸಿದ ಹಾಗೆ ಎಂಬುದನ್ನು ಒಳ್ಳೆಯ ಲಕ್ಷಣಕ್ಕೆ, ಶುದ್ಧೀಕರಣಕ್ಕೆ ಸೇರಿದ ಹಾಗೆ ಹೇಳುತ್ತಾರೆ. ನಾನು ಒಂದು ಭಾಗದ ಜನರನ್ನು ಇನ್ನೊಂದು ಭಾಗದ ಜನರ ವಿರುದ್ಧ ಎತ್ತಿಕಟ್ಟುವುದಕ್ಕೆ ಮಾತನಾಡುತ್ತಿದ್ದೇನೆಂದು ಯಾರೂ ದಯವಿಟ್ಟು ತಿಳಿದುಕೊಳ್ಳಬಾರದು ಈ ಎರಡೂ ಯೋಜನೆಗಳು ಕರ್ನಾಟಕ ರಾಜ್ಯದ ಜೀವಾಳ ಎಂಬುದನ್ನು ಯಾರೂ ಮರೆಯಬಾರದು. ಆದರೆ ಈ ಸದನದಲ್ಲಿ ನಾನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಏಕೆಂದರೆ ಪ್ರಾದೇಶಿಕ ಅಸಮಾನತೆಯನ್ನು ನಾವು ನಿಲ್ಲಿಸಿಬಿಡಬೇಕು ಅಂಥಾ ಭಾವನೆಗಳನ್ನು ಜನರಲ್ಲಿ ಉತ್ಪಾದಿಸಬಾರದು. ಬರೀ ಭಾಷಣದಲ್ಲಿ ಇಂಥ ಜನರಿಗೆ ಅಸಮಾನತೆಯಾಗಿದೆ ಅಥವಾ ಆಗಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆಯಾ ಪ್ರದೇಶಗಳ ಜ್ವಲಂತ ಸಮಸ್ಯೆಗಳನ್ನು ಪರಿಹಾರ ಮಾಡುವುದರಲ್ಲಿ ಆಯಾ ಸರ್ಕಾರಗಳು ಶ್ರಮಿಸುತ್ತವೆ ಎಂಬುದನ್ನು ನೋಡಿಕೊಂಡು ಜನ ಸರ್ಕಾರಗಳನ್ನು ಅರ್ಥಮಾಡುತ್ತಾರೆ. ರಾಷ್ಟ್ರದ ಸಮಗ್ರತೆ ಎನ್ನುವುದು ಬೇರೆ. ರಾಜ್ಯಗಳ ಮಟ್ಟಿಗೂ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಸಮಗ್ರತೆಗಳನ್ನು ಸ್ಥಾಪನೆ ಮಾಡುವುದಕ್ಕೆ ಆಯಾ ಜನ ಪ್ರಯತ್ನ ಮಾಡಬೇಕು

ಅಪ್ಪರ್ ಭದ್ರಾ ಕೂಡ ಇವತ್ತಿಗೂ ಬರೀ ಕನಸೇ ಆದು. ಇನ್ನೂ ಕೂಡ ಅದು ನನಸಾಗುವ ದಾರಿಯಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ದೇವೇಗೌಡರು ಎಲ್ಲೋ ಏನೋ ಹೇಳುತ್ತಾರೆ. ಆದರೆ ಇಲ್ಲಿ ಹೇಳಬೇಕು, ಪ್ಲಾನಿಂಗ್ ಕಮಿಷನ್‌ಗೆ ಹೇಳಬೇಕು. ಅಪ್ಪರ್ ಭದ್ರಾಕ್ಕೆ ಇಷ್ಟು ಹಣ ನಾವು ಕೊಡುತ್ತೇವೆಂಬ ಪ್ರಪೋಸಲ್ ಮಾಡಿ ಕಳುಹಿಸಬೇಕು. You must argue your case before the Planning Commission ಏಕೆಂದರೆ ಯಾವ್ಯಾವ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡಬೇಕೆಂಬುದು ರಾಜ್ಯ ಸರ್ಕಾರಕ್ಕೆ ಸೀಮಿತವಾದ ವಿಚಾರ. ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ವಾಟರ್ ಡಿಸ್‌ಪ್ಯೂಟ್ ಇದ್ದರೆ ಅದು ಪ್ರತ್ಯೇಕ. ಈ ಅಪ್ಪರ್‌ಭದ್ರಾಕ್ಕೆ ಇದ್ಯಾವುದೂ ಇಲ್ಲ. ನಮ್ಮ ಕೃಷ್ಣಾ ಬೇಸಿನ್‌ಗೆ ಆ ತೆರಹದ ಅಡಚಣೆಗಳಿವೆ.

ಅಧ್ಯಕ್ಷರು —ಟೈಮ್ ಕೊಟ್ಟಿರುವುದು ಒಬ್ಬೊಬ್ಬ ಸದಸ್ಯರಿಗೆ ೪೫ ನಿಮಿಷ. ನಿಮ್ಮದಿ ಈಗಾಗಲೇ ಆಗಿದೆ. ನಿಮ್ಮಲ್ಲೇ ಯಾರದಾದರೂ ಒಬ್ಬರಿಂದ ಟೈಮ್ ನಿಮಗೆ ಸಿಕ್ಕಿದರೆ ನೀವು ಅದನ್ನು ಬಳಸಿಕೊಳ್ಳಬಹುದು

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ತಾವು ಮಾತನಾಡುವುದಿಲ್ಲವೆಂದೂ, ಅವರ ವೇಳೆಯನ್ನೂ ನಾನೇ ಬಳಸಿಕೊಳ್ಳಬಹುದೆಂದು ಹೇಳಿದ್ದಾರೆ. ನಾನೇ ಆದ್ದರಿಂದ ಮಾತಾಡುತ್ತೇನೆ.

ಅಪ್ಪರ್ ಭದ್ರಾ ಪ್ರೊಜೆಕ್ಟನ್ನು ಕೇಂದ್ರ ಕ್ಲಿಯರ್ ಮಾಡುವ ಪ್ರಶ್ನೆ ಬರುವುದಿಲ್ಲ. ತಾವು ಪ್ರಪೋಸಲ್ ಮಾಡಿದ್ದಿದ್ದರೆ ಕೇಂದ್ರದವರು ಕ್ಲಿಯರೆನ್ಸ್ ಕೊಡುತ್ತಿದ್ದರು. ಏಕೆಂದರೆ ಅದರಲ್ಲಿ ನಮ್ಮ ನೀರಿನ ಕೋಟಾ ಇದೆ. ರಾಜಕೀಯ ಸಂಕಲ್ಪ ಇವರಿಗಿದ್ದಿದ್ದರೆ ಇದನ್ನು ಕಾರ್ಯಗತಮಾಡುವ ಪ್ರಯತ್ನ ಮಾಡಬಹುದಿತ್ತು. ಆದರೆ ಇವರು ಮಾಡಲಿಲ್ಲ. ಬಹಳ ಸೂಕ್ಷ್ಮವಾಗಿ ಇವರನ್ನು ಕೇಳಿಬಿಡುತ್ತೇನೆ ಇವರು ಯುಕೆಪಿಗೆ ಏನು ಪ್ರಾವಿಷನ್ ಕೊಟ್ಟಿದ್ದಾರೆ ಅದನ್ನು ನೋಡಿದರೆ ಇವರು ಅದನ್ನು ಪೂರೈಸುವ ಲಕ್ಷಣವಂತೂ ನನಗೆ ಕಾಣುತ್ತಿಲ್ಲ ಏಕೆಂದರೆ ೩–೪ ವರ್ಷದ ಹಿಂದೆ ಯುಕೆಪಿಗೆ ಎಷ್ಟು ಹಣ ಕೊಟ್ಟಿದ್ದೆವೋ ಅಷ್ಟು ಹಣ ಇವರು ಕೊಟ್ಟಿಲ್ಲ. ೧೯೮೨–೮೩ ರಲ್ಲಿ ನಾವು ೫೩.೪೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಈಗ ೧೯೮೪–೮೫ ರಲ್ಲಿ ಎಷ್ಟು ಕೊಟ್ಟಿದ್ದಾರೆ ಗೊತ್ತೆ ? ೪೯ ಕೋಟಿ ಮಾತ್ರ. ಆದರಲ್ಲಿ ಖರ್ಚು ಮಾಡಿದ್ದುದು ೪೬ ಕೋಟಿ. ಅಂದರೆ ೫ ವರ್ಷವಾದರೂ ಕೂಡ you have not stepped up in provision... ಹೀಗಾಗಿ ಯುಕೆಪಿಯನ್ನು ಕಾರ್ಯಗತವಾಗಲು ಬಿಡುತ್ತಿಲ್ಲ. ೧೯೮೬–೮೭ ರಲ್ಲಿ ೭೬ ಕೋಟಿ ಕೊಟ್ಟಿರುವುದರಲ್ಲಿ ೨೦ ಕೋಟಿಯನ್ನು ಬರೀ ಕಾಡಾ ಡೆವಲಪ್‌ಮೆಂಟ್‌ಗೇ ಇಟ್ಟಿದ್ದಾರೆ. ನಾವಿದ್ದಾಗ ಕಾಡಾಗೆ ಬೇರೆ ಕೊಡುತ್ತಿದ್ದೆವು ಯುಕೆಪಿಗೆ ಬೇರೆ ಕೊಡುತ್ತಿದ್ದೆವು. ಇವೆರಡೂ ಬೇರೆ ಬೇರೆ ಇಲಾಖೆಗಳ ಪ್ರೊಜೆಕ್ಟ್‌ಗಳು. ಅಧ್ಯಕ್ಷರೇ, ಮಾನ್ಯ ದೇವೇಗೌಡರು

ಹೆಗಡೆಯವರುಗಳು ಇದರಲ್ಲಿ ಬಹಳ ಬುದ್ಧಿವಂತಿಕೆಯನ್ನು ತೋರುತ್ತಿದ್ದಾರೆ. ಇವರು ಏನು ಮಾಡಿದ್ದಾರೆಂದರೆ ಕಾಡಾ ಮತ್ತು ಯುಂಕೆಪಿ ಎರಡನ್ನೂ ಸೇರಿಸಿ 'ನೋಡಿ ನಾವು ಯುಂಕೆಪಿಗೆ ಎಷ್ಟು ಜಾಸ್ತಿ ಇಟ್ಟಿದ್ದೇವೆ' ಎನ್ನುತ್ತಿದ್ದಾರೆ. It means-misleading the House.. ಹಿಂದೆ ಕಾಡಾ ಇರಿಗೇಷನ್‌ನಲ್ಲಿ ಇರಲಿಲ್ಲ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿತ್ತು. ಈಗ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಅದನ್ನು ಮರ್ಜ್ ಮಾಡಿ ನೋಡಿ ಹೆಚ್ಚು ಹಣ ನಾವು ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಈ ರೀತಿ ಮಾಡಿ ಇವರು ಜನಗಳನ್ನು, ಈ ಮನೆಯನ್ನು ಮಿಸ್ಲೀಡ್ ಮಾಡುವ ಪ್ರಯತ್ನ ನಡೆಯುತ್ತಿದೆ. ಹೀಗೆಂದು ನಾನು ಹೇಳಲೇಬೇಕು. ಅಧ್ಯಕ್ಷರೇ, ಹೇಮಾವತಿಗೆ ೧೯೮೨-೮೩ರಲ್ಲಿ ೧೮ ಕೋಟಿ ಕೊಟ್ಟಿದ್ದರೆ ಈಗ ೩೫ ಕೋಟಿಗೆ ಏರಿಸಿದ್ದಾರೆ ಈಗ ೪೬ಕ್ಕೆ ಹೋಗಿದೆ. ಹೇಮಾವತಿಯಲ್ಲಿ ಅಂದರೆ ಕಾವೇರಿ ಬೇಸಿನ್‌ನಲ್ಲಿ ಕಬಿನಿ, ಹೇಮಾವತಿ, ಹಾರಂಗಿ, ವರುಣ ಮತ್ತು ಮಾಡರ್ನೈಜೇಷನ್ ಆಫ್ ಕೆ. ಆರ್. ಎಸ್. ಇವೆಲ್ಲಾ ಬರುತ್ತವೆ. ೧೯೮೭-೮೮ರಲ್ಲಿ ಇಷ್ಟೆಲ್ಲಕ್ಕೂ ಸೇರಿ ೯೩.೨೦ ಕೋಟಿ ನಾವು ಕೊಟ್ಟಿದ್ದರೆ ಇವರು ಒರೀ ಹೇಮಾವತಿಗೇ ೫೬.೨೦ ಕೋಟಿ ಕೊಟ್ಟಿದ್ದಾರೆ. That means within the basin, there is discrimination, it is not intrn basin ಕಬಿನಿಗೆ ನೋಡಿದರೆ ೧೪ ಕೋಟಿ ರೂಪಾಯಿ ಮಾತ್ರ. ಹಾರಂಗಿಗೆ ೧೫ ಕೋಟಿ ರೂಪಾಯಿ ಕೆ. ಆರ್. ಎಸ್ ಮರುಣಾಗೆ ೫ ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ೫೬.೨೦ ಕೋಟಿ ರೂಪಾಯಿಗಳು ಎಂದರೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಿಂತಲೂ ಜಾಸ್ತಿ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್ ಅದನ್ನು ಮೂಲೆ ಮಾಡಿದ್ದಾರೆ. ಯು.ಕೆ.ಪಿ., ಮಲಪ್ರಭ, ಘಟಪ್ರಭ, ಕಬಿನಿ ಇಂಥ ಯೋಜನೆಗಳಿಗೆ ತಾವು ಎಷ್ಟು ಖರ್ಚು ಮಾಡುತ್ತೀರಿ ? You are going to get 30% from the Government of India ವರ್ಲ್ಡ್ ಬ್ಯಾಂಕ್ assistance ಸಿಗುತ್ತದೆ. It will not be reimbursed ಎಷ್ಟು ಹಣವನ್ನು ನೀವು ಕೊಡುತ್ತೀರಿ. Even a pai you spend you get 30% to 40% from the Government of India ಈ ವ್ಯಾಕುಲತೆ ಏತಕ್ಕೆ ಇಲ್ಲ ? ಈ ಯೋಜನೆಗಳಿಗೆ ಹೆಚ್ಚು ಹಣ ಬರಬೇಕು, ಹೆಚ್ಚು ಅಭಿವೃದ್ಧಿಯನ್ನು ಸಾಧನೆ ಮಾಡಬೇಕು. ಈ ಕಳಕಳಿ ತಮ್ಮ ಹೃದಯದಲ್ಲಿ ಇರಬೇಕು. ಇದಕ್ಕೆ ರಾಜಕೀಯ ಸಂಕಲ್ಪ ಇರಬೇಕಾಗುತ್ತದೆ. ಸಾರ್ವಜನಿಕ ಭಾಷಣದಲ್ಲಿ ಇದ್ದರೆ ಸಾಲದು. ಈ ರಾಜಕೀಯ ಸಂಕಲ್ಪ, ಇಚ್ಛಾಶಕ್ತಿ ಇದ್ದರೆ ಡಾಕ್ಯುಮೆಂಟನ್ನು ಎತ್ತಿ ತೋರಿಸಬೇಕು. ಅದನ್ನು ಮಾಡತಕ್ಕಂಥದ್ದನ್ನು ಪ್ರತಿ ಕಾರ್ಯಕ್ರಮಗಳಲ್ಲೂ ತೋರಿಸಬೇಕು. ಈ ಕಳಕಳಿ ಆದ್ಯತೆಯನ್ನು ಅರಿತಾಗ ಮಾತ್ರ ಕರ್ನಾಟಕ ರಾಜ್ಯದ ಅಭಿವೃದ್ಧಿಯಾಗುತ್ತದೆ. ಇಲ್ಲದೇ ಹೋದರೆ ಬೇರೆ ಅಭಿವೃದ್ಧಿಯಾಗುತ್ತದೆ. ಕರ್ನಾಟಕ ರಾಜ್ಯದ ಹಿತಾಸಕ್ತಿ ಇದರಿಂದ ದ್ವಿಗುಣಿತ ಆಗಬಹುದು. ಚುನಾವಣೆಯಲ್ಲಿ ಗೆಲ್ಲತಕ್ಕಂಥ ಟ್ಯಾಕ್ಟಿಕ್ಸ್ ಬೇರೆ. You have understood ಚುನಾವಣೆಯಲ್ಲಿ ಯಾವ ರೀತಿ ಗೆಲ್ಲಬೇಕು ಇದಕ್ಕೆ ೧೫ ದಿವಸದ ಪ್ಲಾನಿಂಗ್ ಬೇರೆ ಇತ್ತು. ನಾನು ಅದನ್ನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಈಗ ಏನು ಮಾಡಿದ್ದೀರಿ. ನೀವೆಲ್ಲಾ ಗುರುವಿನ ಮಿಂಚಿನ ಶಿಷ್ಯಂದಿರು ಆಗಿಬಿಟ್ಟಿದ್ದೀರಿ I compliment you ಚುನಾವಣೆಯಲ್ಲಿ ಗೆಲ್ಲುವುದರಲ್ಲಿ ಯಾವ ತರಹ ಮಾಡಬೇಕು. ಅದನ್ನು ತಾವು ಚೆನ್ನಾಗಿ ಕಲಿತುಕೊಂಡಿದ್ದೀರಿ. ಒಳ್ಳೆಯ ಕೆಲಸ ಮಾಡಿದರೆ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಜನಗಳು ಓಟು ಕೊಡುತ್ತಾರೆ.

ಶ್ರೀ ಬಸವರಾಜ್.—ಗೆದ್ದು ಬಂದ ಮೇಲೆ ಕೊಳ್ಳುವುದಕ್ಕೆ ಬರುತ್ತಾರೆ ಅತ್ತ ಕಡೆಯವರು. ಮಾನ್ಯ ಬೈರೇಗೌಡರ ಟೇಪ್ ಹಗರಣದ ನೆನಪಿಗೆ ತಂದಾಗ ಗೆಲ್ಲುವುದಕ್ಕೆ ಟ್ಯಾಕ್ಟಿಕ್ಸ್ ನಮಗೆ ಬರುತ್ತದೆ ಗೆದ್ದು ಬಂದ ಮೇಲೆ ನಮ್ಮನ್ನು ಕೊಳ್ಳುವುದಕ್ಕೆ ಅತ್ತ ಕಡೆಯವರು ಬರುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಳಿದ್ದುದು ಬಹಳ ಒಳ್ಳೆಯದೇ ಆಯಿತು. ಯಾರು ಕೊಳ್ಳುತ್ತಾರೆ, ಕೊಂಡುಕೊಳ್ಳುತ್ತಿದ್ದಾರೆ, ಅದು ಗೊತ್ತಾಗುತ್ತದೆ. ಮಾನ್ಯ ಬೈರೇಗೌಡರು ಕಮಿಷನ್ ಇದೆ. ಪತ್ರಿಕೆಗಳಲ್ಲಿ ಬಂದಿದೆ. ಯಾರು ಕೊಂದದ್ದು, ಫೋರ್ಜರಿ ಮಾಡಿದ್ದು ಯಾರು ಅದೆಲ್ಲಾ ಜನರಿಗೆ ಗೊತ್ತಿದೆ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯಲ್ಲಿ ಬಂದಿದೆ. ಯಾರ ಕಥೆ ಹೇಗೆ, ಯಾರು ಕಥೆಯನ್ನು ಸೃಷ್ಟಿಮಾಡಿದ್ದು ಯಾರು ಫೋರ್ಜರಿ ಮಾಡಿದ್ದಾರೆ ಎಂದು ಗೊತ್ತಿದೆ.

ಶ್ರೀ ಬಸವರಾಜ್.—ನಾವಂ ಹೇಳಿದ್ದುದು ಒಟ್ಟಿನಲ್ಲಿ ಜನಗಳನ್ನು ಗೆಲ್ಲುವುದಕ್ಕೆ ನಮಗೆ ಗೊತ್ತಿದೆ. ನಮ್ಮನ್ನು ಗೆಲ್ಲುವ ಪ್ರಯತ್ನ ಟ್ಯಾಕ್ಟಿಕ್ಸ್ ನಿಮಗೆ ಗೊತ್ತಿದೆ.

SRI M VEERAPPA MOILY.—You know the tactics. I must compliment Mr. Chendra-hekar. ಅದರಲ್ಲಿ ಕೂಡಾ ನಿಸ್ಸೀಮರು. ತಾವು ಎಲ್ಲಿದ್ದಿರಿ, ಹೊಸ್ದಾಗಿ ಯುವರೆಗೂ ಎಂ.ಎಲ್.ಎ. ಆಗಿ ಗೆಲ್ಲುವುದಕ್ಕೆ ಏನೇನು ಮಾಡಿದ್ದೀರಿ. ಜನರನ್ನು ಕೊಳ್ಳತಕ್ಕಂಥ ತಂತ್ರ ನಿಮಗೆ ಗೊತ್ತಿದೆ ಮಾನ್ಯ ಅಮರಪ್ಪ ನಾಯಕರನ್ನು, ಬಸವರಾಜ್ ಪಾಟೀಲ್, ಅಗ್ರಿಕಲ್ಚರ್ ಮಿನಿಸ್ಟ್ರನ್ನು ಕೊಂಡಿದ್ದೇ ಗೆಲ್ಲಿಸಿದ್ದೇ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. I am not here to pass personal reflection on somebody. ಅದರ ನೋವು ನಮಗೆ ಗೊತ್ತಿದೆ. ಅದರ ಬಗ್ಗೆ ಅಪಾದನೆ ಮಾಡಬಾರದು. ಅಪಾದನೆ ಮಾಡಿದರೆ ಅದರ ನೋವು ಏನು ಎನ್ನುವುದು ಗೊತ್ತಿದೆ. ನನಗೇನೂ ಹೆಚ್ಚು ವಯಸ್ಸಾಗಿಲ್ಲ. ನನಗೆ ಗೊತ್ತಿದೆ. ಸುಮಾರು ೧½ ಲಕ್ಷ ಮಂದಿ ಈ ಚುನಾವಣೆ ಸಂದರ್ಭದಲ್ಲಿ ಮಂಗಳೂರಿನ ನೆಹರೂ ಮೈದಾನದಲ್ಲಿ ಸೇರಿದ್ದರು. ಶ್ರೀ ಖಾನ್ ಬೈರೇಗೌಡರು ನನ್ನ ಮೇಲೆ ಏನು ಅಪಾದನೆ ಮಾಡಿದ್ದಾರೆ ಅದರ ಬಗ್ಗೆ ನಾನು ತಪ್ಪು ಕೆಲಸ ಮಾಡಿದ್ದರೆ ಆ ಜನರು, ಮಂಗಳೂರಿನ ಜನರು ಇವರನ್ನು ಸಮಾಧಿ ಮಾಡಿದ್ದಾರೆ. I thrown out a challenge. The people have returned 42 corporators. People still remember in our district. The injustice, the black-mail which you have done on me it is quite rebounding in South Kanara ಆ ಪಾಪದ ಹೊರೆ ತಮ್ಮ ಮೇಲೆ ಇದೆ. ಇನ್ನು ಅದರ ಮೇಲೆ ಪಾತಾಳಕ್ಕೆ ಹೋಗುವುದು ಬೇಡ. ಅದನ್ನು ಕೊಂಡುಕೊಳ್ಳುವುದು ಬೇಡ. ಅದಕ್ಕೆ ಜನ ಉತ್ತರ ಕೊಡುತ್ತಾರೆ. I am completely concentrating on economic and Social programme ಈ ವಿಚಾರದ ಬಗ್ಗೆ ಹೇಳುತ್ತೇನೆ ನಮ್ಮ ರಾಜ್ಯದಲ್ಲಿ ಪ್ರಮುಖವಾಗಿರ ತಕ್ಕಂಥಾ ನೀರಾವರಿ ಯೋಜನೆಯಾವುದು? ಈ ಕೃಷ್ಣ ಬೇಸಿನ್ ಬಗ್ಗೆ ಹೇಳುತ್ತೇನೆ ಹಾಗೆಯೇ ತೆಲುಗು ಗಂಗಾ ಯೋಜನೆ ಬಗ್ಗೆ ಹೇಳುತ್ತೇನೆ ಈ ಯೋಜನೆಯ ಕೆಲಸ ಈಗಾಗಲೇ ನಡೆಯುತ್ತಾ ಇದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸಡಿಲವಾಗಿರುವುದರಿಂದ ಅಲ್ಲಿ ಈ ರೀತಿ ಆಗುತ್ತಾ ಇದೆ. ಇದರ ಬಗ್ಗೆ ನಿರ್ಣಯ ಈಗಲೂ ಸಹ ಸ್ಪಷ್ಟವಾಗಿ ಆಗಿಲ್ಲ ಬಚಾವತ್ ಕಮಿಷನ್ನಿನ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರು ಯಾವುದು ಇದೆ ಅದು ಬರಬೇಕು. ನಮ್ಮ ಪಾಲಿನ ನೀರು ೭೦೦ ಟಿಎಂಸಿ ಅಷ್ಟು ಇದೆ, ಆಂಧ್ರ ಪ್ರದೇಶದ ಪಾಲು ೮೦೦ ಟಿಎಂಸಿ ಅಷ್ಟು ಇದೆ ಮಹಾರಾಷ್ಟ್ರದ್ದು ೫೬೦ ಟಿಎಂಸಿ ಅಷ್ಟು ಇದೆ. ಇವೆಲ್ಲಾ ಲೆಕ್ಕಾಚಾರ ಹಾಕಿದ್ದಾರೆ Dependable water that is available is not even 2000 TMC.FT ಅದು ೧೯೦೦ ಟಿಎಂಸಿಎಫ್‌ಟಿ ಆಗುತ್ತದೆ. ಈಗ ೭೦೦ ಟಿಎಂಸಿಎಫ್‌ಟಿಯಲ್ಲಿ ೨೫೦ ಟಿಎಂಸಿಎಫ್‌ಟಿ ಅಷ್ಟು ನೀರನ್ನು ಈಗಾಗಲೇ ಅವರು ಅಪಹರಿಸಿದ್ದಾರೆ. ಆಂಧ್ರ ಪ್ರದೇಶದವರು ಈಗಾಗಲೇ ಶುರು ಮಾಡಿದ್ದಾರೆ. that means 450 TMCFT of water you may left with if the Telugu-Ganga comes into effect. They are going ahead, you may get 300 TMCFT out to 700 TMCFT ಇದಕ್ಕಿಂತ ದೊಡ್ಡ ಅನ್ಯಾಯ ಇನ್ನು ಏನು ಬೇಕು? ಮಾನ್ಯ ಅಧ್ಯಕ್ಷರೇ, ಮಾನ್ಯ ಎನ್. ಟಿ. ರಾಮರಾವ್ ಅವರಿಗೆ ಈಗ ಧೈರ್ಯ ಎಲ್ಲಿಂದ ಬಂತು? ಎನ್ನುವುದನ್ನು ಕೇಳುತ್ತೇನೆ ಆಗ ಇವರಿಗೆ ಧೈರ್ಯ ಇರಲಿಲ್ಲ. ೧೯೮೪ನೇ ಇಸವಿಯಲ್ಲಿ ಶ್ರೀ ಎನ್. ಟಿ. ರಾಮರಾವ್ ಅವರು ಆಂಧ್ರ ಪ್ರದೇಶದ ಇರಿಗೇಷನ್ ಅಂಡ್ ಪವರ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಬಗ್ಗೆ ಇರತಕ್ಕಂಥ ಪ್ರಿಂಟೆಡ್ ಸುತ್ತೋಲೆ ನನ್ನ ಕೈಯಲ್ಲಿ ಇದೆ. ಅದನ್ನು ನಾನು ಈ ಸದನದ ಗಮನಕ್ಕೆ ತರುತ್ತೇನೆ ಅದು ಈ ರೀತಿ ಇದೆ :—

UTILISATION OF SURPLUS FLOWS IN THE RIVER :

4.17. According to Krishna Water Dispute Tribunal Award the State of Andhra Pradesh is permitted to utilise the water of Krishna river flowing down into the teritory without acquiring and right over and above the allocated

quantity of 800 Tmc. The quantum of such surplus flows and its occurrence cannot be assessed. In view of this it is not possible to plan any new scheme to utilise such surplus water as the Central Water Commission would clear schemes only when availability of water is assured at 75% dependability.

10-00 A. M.

"It is however possible to utilise such water in good years under the existing canal system such as Krishna delta canals Nagarjunasagar canals K. R. Canal etc ,"

ಈ ಹೊಸ ಸ್ಕೀಂಗೆ ಕೇಂದ್ರದ ವಾಟರ್ ಪವರ್ ಕಮೀಷನ್ ಒಪ್ಪಿಗೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇದು ನಮ್ಮ ಸರ್ಕಾರದ ಪ್ರಕಟಣೆ ಅಲ್ಲ. ಇದು ಆಂಧ್ರ ಪ್ರದೇಶ ಸರ್ಕಾರದ ಪ್ರಕಟಣೆ. ೧೯೭೬ರಲ್ಲಿ ಅವರು ಹೇಳಿದ್ದಾರೆ. ಹೀಗಿರುವಾಗ ಈ ಧೈರ್ಯ ಅವರಿಗೆ ಹೇಗೆ ಬಂತು. ೧೯೭೮ರಲ್ಲಿ ಇಂಥ ಧೈರ್ಯವನ್ನು ತುಂಬಿಸತಕ್ಕಂಥ ವ್ಯಕ್ತಿ ಯಾರು ?

ಸನ್ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ಆದರೆ ಸನ್ಮಾನ್ಯ ಕರ್ನಾಟಕದ ಮುಖ್ಯ ಮಂತ್ರಿಗಳು ಹಾಗೂ ಎನ್. ಟಿ ಆರ್. ಶಾಮೀಲಾಗಿದ್ದಾರೆ ಎನ್ನತಕ್ಕ ಅಪಾದನೆ ಇವೊತ್ತು ಅವರ ಮೇಲೆ ಇದೆ. The in piration has gone from the Capital i.e., Bangalore to Sri N. T. Rama Rao and that is why he does not want to care. I will send a copy of this it you want.

೧೯೭೮ ರಿಂದ ಕೆಲವು ರಾಜಕೀಯ ವ್ಯವಹಾರಗಳು ಆಂಧ್ರ ಪ್ರದೇಶ ಮತ್ತು ಕರ್ನಾಟಕದ ಮಧ್ಯೆ ಏನು ನಡೆದಿವೆ ಆ ಒಂದು ರಾಜಕೀಯ ವ್ಯವಹಾರ ಅದಕ್ಕೆ ಹೆಚ್ಚು ಬಲ ಮತ್ತು ಮನೋ ಬಲವನ್ನು ಶ್ರೀ ಎನ್.ಟಿ.ಆರ್.ಗೆ ಕೊಟ್ಟಿದ್ದಾರೆ. ತಾವು ಪ್ರೊಟೆಸ್ಟ್ ಮಾಡಬಹುದು. ಮಾತ್ನಾಡು ಮಾಡಬಹುದು. ಆದರೆ ಅವರು ಏನು ತಿಳಿದುಕೊಂಡಿದ್ದಾರೆ ಎಂದರೆ ನನ್ನ ಡಿಲ್ಲಿ ಇರುವುದು ಬೆಂಗಳೂರಿನಲ್ಲಿ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ಎನ್.ಟಿ.ಆರ್.ರವರು ತೆಲುಗು ಗಂಗಾ ಬಗ್ಗೆ ಹೇಳಿದ್ದಾರೆ. ಬಚಾವತ್ ಅವಾರ್ಡ್ ಪ್ರಕಾರ ೮೦೦ ಟಿ ಎಂ.ಸಿ.ಎಫ್.ಟಿ. ನೀರನ್ನು ಅವರಿಗೆ ಕೊಟ್ಟಿದ್ದಾರೆ. ಅದನ್ನೇ ಇದರಲ್ಲಿ ಯೂಸ್ ಮಾಡಿ ತೆಲುಗು ಗಂಗಾ ಮಾಡಲು ಸಾಧ್ಯವಾಗುತ್ತದೆ. ಎಕ್ಸ್ಟ್ರಾ ಸರ್ಪ್ಲಸ್ ವಾಟರನ್ನು ಯೂಸ್ ಮಾಡುತ್ತಿಲ್ಲ. ಎಂದು ಹೇಳಿದ್ದಾರೆ, ಇದರ ಬಗ್ಗೆ ಪೇಪರ್‌ನಲ್ಲಿ ಅವರ ಹೇಳಿಕೆ ಬಂದಿದೆ. ಕರ್ನಾಟಕ ಇದರ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ ಎಂಬುದು ಅವರ ವಾದ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಏನು ಹೇಳಿದ್ದಾರೆ ಎಂಬುದು ನನಗೆ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮಲ್ಲಿರುವ ನೀರನ್ನು ಉಪಯೋಗ ಮಾಡಿಕೊಂಡು ಮಾಡುತ್ತೇವೆ ಎಂಬುದು ಅವರ ವಾದ.

ಶ್ರೀ ಆರ್. ವೆಂಕಟರಾಮಯ್ಯ.—ಪೆನ್ನಾರ್‌ನಿಂದ ೨೫ ಟಿ.ಎಂ.ಸಿ.ಎಫ್.ಟಿ. ಕಾವೇರಿ ಬೇಸಿನ್‌ನಿಂದ ೮೫ ಟಿ.ಎಂ.ಸಿ. ಬರುತ್ತದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ. ಇದರಲ್ಲಿ ಮೂರು ತರಹ ಇದೆ Assured Water, Excess water and Surplus water. ತೆಲುಗುಗಂಗಾ ಯೋಜನೆಗೆ ಎಕ್ಸಸ್ ವಾಟರ್ ಕೂಡ ಇಲ್ಲ. ಅಶ್ಯೂರ್ಡ್ ವಾಟರ್ ಅವರಿಗೆ ಇಲ್ಲ. ಇದ್ದಂತಹ ಅಚ್ಚುಕಟ್ಟುಗಳನ್ನು ಉಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಉಳಿದಿರುವುದು ಸರ್ಪ್ಲಸ್ ವಾಟರ್. They are planning for that only. No States have planned any permanent irrigation projects on surplus water till to-day. Nobody does it but

now they have started. ಈ ರೀತಿ ಉದ್ಧಟತನದ ಶಕ್ತಿ ಅವರಿಗೆ ಹೇಗೆ ಬರುತ್ತದೆ ? He is planning on the surplus water only. ಎನ್.ಟಿ. ರಾಮರಾವ್ ಅವರು ಕೃಷ್ಣಾ ಡಿಸ್ಟ್ರಿಕ್ಟ್‌ನಿಂದ ಬಂದವರು. ಕೆ ಎಲ್. ರಾವ್‌ರವರು ಕೂಡ ಅಲ್ಲಿಂದಲೇ ಬಂದವರಾಗಿದ್ದರು. ಅಲ್ಲಿಯ ಇರಿಗೇಷನ್ ಸಮಸ್ಯೆಗಳನ್ನು ಕರ್ನಾಟಕದ ಕಾಸ್ಟ್‌ನಿಂದ ಸೆಟಲ್ ಮಾಡಿಕೊಳ್ಳಬೇಕೆಂದಿದ್ದಾರೆ. They want to settle it, at the cost of Karnataka ಅವರು ಯಾವ ರೀತಿ ಇರಿಗೇಷನ್ ಫೆಸಿಲಿಟೀಸ್ ಅನ್ನು ಉಪಯೋಗ ಮಾಡಿಕೊಂಡಿದ್ದಾರೆ ಎಂಬುದನ್ನು ತಾವು ದಯಮಾಡಿ ನೋಡಿ. ಇದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ನನ್ನ ಹತ್ತಿರ ಇದೆ. For example, Coverage of irrigation in respect of areas 56% coverage in coastal area where Dr. K. L. Rao and Sri N. T. R. hail from 37% from Telangana and 4% in Rayalaseema. ಇದನ್ನು ಡೈವರ್ಟ್ ಮಾಡಲು ಅವರು ತಯಾರಾಗಿಲ್ಲ. ಅವರಲ್ಲಿರುವ ಐಶ್ವರ್ಯ ಸಮೃದ್ಧಿಯಾಗಿ ಬೆಳೆಯಬೇಕು ಹಾಗೂ ಅವರಲ್ಲಿರತಕ್ಕಂಥ ರೀಜನಲ್ ಬ್ಯಾಲನ್ಸ್ ಅನ್ನು ಕಂಪೆನ್‌ಸೇಟ್ ಮಾಡಲು ಕರ್ನಾಟಕದ ಹಿತವನ್ನು ಬಲಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅವರ ಭಾಗಗಳು ಸಮೃದ್ಧಿ ಹೊಂದಲು ಕರ್ನಾಟಕ ರಾಜ್ಯ ಬಲಿಪಶು ಆಗಬೇಕಾಗಿದೆ. ಇದನ್ನು ನಾವು ಎಂದಿಗೂ ಸಹಿಸುವುದಿಲ್ಲ ಸರ್ಕಾರ ಕೂಡ ಇವೊತ್ತು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ನನ್ನ ಆರೋಪ. ಈ ಬಗ್ಗೆ ಈಗಾಗಲೇ ಹೆಚ್ಚು ಮಾತನಾಡಿರುವುದರಿಂದ ನಾನು ಇನ್ನೂ ಹೆಚ್ಚು ಮಾತನಾಡುವುದಿಲ್ಲ. This publication, you may not get it anywhere. ನಾನು ಬಹಳ ರಿಸರ್ಚ್ ಮಾಡಿ ತೆಗೆದುಕೊಂಡು ಬಂದಿದ್ದೇನೆ. This is a publication of the Andhra Pradesh irrigation and Power. ತಮಗೆ ಬೇಕಾದರೆ ನಾನು ಕೊಡಲಿಕ್ಕೆ ತಯಾರಾಗಿದ್ದೇನೆ. This may help us to fight our case before the Central Water and Power Commission. ಅವರು ಮಾಡುತ್ತಿರುವುದನ್ನು ತಡೆಹಿಡಿಯಲಿಕ್ಕೆ ಯಾವ ರೀತಿ ಪ್ರಯತ್ನ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಪಕ್ಷದ ಎ. ಪಿ. ಸಿ. ಸಿ. ಅವರ ಸ್ಟ್ಯಾಂಡ್ ಏನು. ಶ್ರೀ ವೆಂಗಲ್‌ರಾವ್ ಅವರ ಸ್ಟ್ಯಾಂಡ್ ಏನು ಎಂಬುದನ್ನು ಹೇಳಬೇಕು ಅಲ್ಲಿ ರಾಯಲ್‌ಸೀಮಾ ಹೋರಾಟ ಸಮಿತಿ ಎಂದೇ ಇದೆ. ಅವರು ಏನು ಹೇಳುತ್ತಾರೆ ಎಂದರೆ ಎನ್.ಟಿ.ಆರ್, ಮತ್ತು ರಾಮಕೃಷ್ಣ ಹೆಗಡೆ ಸೇರಿ ಕರ್ನಾಟಕಕ್ಕೆ ದೊಡ್ಡ ಸಹಾಯ ಮಾಡುತ್ತಾರೆ ಎಂಬ ಹೋರಾಟ ನಡೆಯುತ್ತಿದೆ.

SRI M. VEERAPPA MOILY.—It is Karnataka's interest...ಇದು ನಮ್ಮ ರಾಜ್ಯದ ಹಿತಾಸಕ್ತಿ ಪ್ರಶ್ನೆ. ಇಲ್ಲಿ ರಾಜಕೀಯ ಪ್ರಶ್ನೆ ಬರುವುದಿಲ್ಲ. That is why I am telling. I have not consulted my counterparts from Andhra Pradesh. It is our right. We have got to fight for it ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಆಲ್ ಪಾರ್ಟಿ ಡೆಲಿಗೇಷನ್‌ನ್ನು ಪ್ರಧಾನ ಮಂತ್ರಿಯವರ ಹತ್ತಿರ ತೆಗೆದುಕೊಂಡು ಹೋಗಬೇಕು. We are ready to put-forth our case ಇಲ್ಲದಿದ್ದರೆ ಅವರು ಕ್ಲಿಯರ್ ಮಾಡಿಬಿಡುತ್ತಾರೆ. ಆದ್ದರಿಂದ ಈ ಆಲ್ ಪಾರ್ಟಿ ಡೆಲಿಗೇಷನ್ ಬಗ್ಗೆ ಕೂಡಲೇ ನಿರ್ಣಯ ತೆಗೆದು ಕೊಳ್ಳಬೇಕು ಎಂದು ಸರ್ಕಾರಕ್ಕೆ ಹೇಳಲಿಕ್ಕೆ ಇಷ್ಟ ಪಡುತ್ತೇನೆ.

ಇನ್ನು ವಿದ್ಯುತ್‌ಶಕ್ತಿ ಬಗ್ಗೆ ಹೇಳಬೇಕಾದರೆ ಕರ್ನಾಟಕದಲ್ಲಿ ಮ್ಯಾಗ್ನಿಟ್ಯೂಡ್ ಡಿಫಿಸಿಟ್ ಇದೆ. ಬೇರಾವ ದಕ್ಷಿಣ ರಾಜ್ಯಗಳಲ್ಲಿ ಇಷ್ಟು ಇಲ್ಲ. ಇಲ್ಲಿ ೩೬.೩೨ ಪರ್ಸೆಂಟ್ ಡಿಫಿಸಿಟ್ ಇದೆ. ವಿದ್ಯುತ್ತಿಗೆ ಕೊಡತಕ್ಕಂಥ ಅಲಾಟ್‌ಮೆಂಟ್ ನೋಡಿದರೆ ಮುಂದೆ ಬರತಕ್ಕ ದಿವಸಗಳನ್ನು ಅಂಧಕಾರದಲ್ಲಿ ಕೆಡವತಕ್ಕಂಥ ಪರಿಸ್ಥಿತಿ ಬರುತ್ತದೆ ಎಂದು ಹೇಳಬಹುದು ಪ್ಲಾನ್ ಡಾಕ್ಯುಮೆಂಟಿನ ಪೇಜ್ ೨೨೪ರಲ್ಲಿ ಇದರ ಬಗ್ಗೆ ಹೇಳಲಾಗಿದೆ. It is there in 19-7-88. Plan document (page 224) which is presented by the State Government, i.e., projected by the State Government to the Government of India. There is no change in the installed capacity of the power capacity of all the 3 years.

ಹೀಗೆ ವಿದ್ಯುತ್ ಬಗ್ಗೆ ತಾವು ಯಾವುದೇ ತರಹ ಆದ್ಯತೆಯನ್ನು ಕೊಟ್ಟಿಲ್ಲ. ಇದರ ಬಗ್ಗೆ ಯಾವ ಆಸಕ್ತಿಯನ್ನೂ ಆಸ್ಥೆಯನ್ನೂ ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರಕ್ಕೆ ತಾವು ಪ್ರಾಜೆಕ್ಟ್ ಮಾಡಿ ಅವರು ಕೊಡದೇ ಇದ್ದರೆ ಅದು ಬೇರೆ ಪ್ರಶ್ನೆ. ಆದರೆ ನೀವು ಇದನ್ನು ಹೆಚ್ಚು ಮಾಡುವ ಕ್ರಮವನ್ನೇ ತೆಗೆದುಕೊಂಡಿರುವುದಿಲ್ಲ.

ಇನ್ನು ಕೈಗಾ ಬಗ್ಗೆ ಒಂದು ಮಾತು ಹೇಳುತ್ತೇನೆ. ಡಾ. ಶಿವರಾಮ ಕಾರಂತರ ಸಾಹಿತ್ಯದ ಬಗ್ಗೆ ಅಕ್ಕರೆ, ಪ್ರೀತಿ, ಮಮತೆ ನಮಗಿದೆ. ಅವರು ಜನತಾ ಶಾಸಕಾಂಗದ ಕಛೇರಿಗೆ ಬಂದು, ನಮ್ಮನ್ನು ಹಾರೈಸಿದ್ದಾರೆ. ಆದರೆ ಅವರು ಇವೊತ್ತು ಕೈಗಾ ಬಗ್ಗೆ ಹೋರಾಟ ಮಾಡಿಕೊಂಡು ನಿಂತಿದ್ದಾರೆ. ತಾವು ಒಂದು ಕಡೆ ವಿರೋಧ ಮಾಡಿಸುವುದು ರಾಜಕೀಯವಾಗಿ ಕೇಂದ್ರ ಸರ್ಕಾರದ ವಿರುದ್ಧ ಸಮರ ಮಾಡಿಸುವುದು ಹೀಗೆ ಒಬ್ಬೊಬ್ಬರನ್ನು ಒಂದೊಂದು ರೀತಿ ಉಪಯೋಗ ಮಾಡಿಕೊಳ್ಳುತ್ತಿದ್ದೀರಿ ಎಂದು ಅನುಮಾನ ಇದೆ. ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲೂ ಇಂತಹ ಒಂದು ಅಣು ಸ್ಥಾವರ ಬೇಕು ಎಂದು ಬೇಡಿಕೊಳ್ಳುತ್ತಾ ಇರುವಾಗ ನೀವು ಕೈಗೆ ಬಂದಂತಹ ಅಣು ಸ್ಥಾವರವನ್ನು ಸ್ಥಾಪನೆ ಮಾಡಲು ಹಿಂದೆ ಬೀಳುತ್ತಾ ಇದ್ದೀರಿ. ಇದನ್ನು ತಡೆಹಿಡಿಯಲು ಕರ್ನಾಟಕ ಸರ್ಕಾರ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕೆಲಸ ಮಾಡುತ್ತಿದೆ ಎಂಬ ಆಪಾದನೆಗೆ ತಾವು ನಿರ್ದಿಷ್ಟ ನಿಲುವನ್ನು ಇದರ ಬಗ್ಗೆ ಪ್ರಕಟಿಸಬೇಕು.

ಬೇಡ್ತಿ ಯೋಜನೆ ಬಗ್ಗೆ ಸಹ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ಇಬ್ಬರು ಸದಸ್ಯರು ಈ ಯೋಜನೆ ಬೇಡ ಎಂದು ಹೇಳಿದ್ದಾರೆಂಬ ಕಾರಣದಿಂದ ಇದು ಡೋಲಾಯಮಾನ ಪರಿಸ್ಥಿತಿಯಲ್ಲಿದೆ. ಈ ಯೋಜನೆಯಿಂದ ತಮ್ಮ ಸಂಬಂಧೀಕರಿಗೆ ಹಾಗೂ ತಮ್ಮ ಗ್ರಾಮದ ಹಿತಾ ಶಕ್ತಿಗಳಿಗೆ ಧಕ್ಕೆಯುಂಟಾಗುತ್ತದೆ ಎಂದು ತಿಳಿದುಕೊಂಡಿರುವವರು ಈ ರಾಜ್ಯದ ವ್ಯವಹಾರ ಏತಕ್ಕೆ ಮಾಡಬೇಕು ? ಈ ಒಂದು ಕಾರಣಕ್ಕಾಗಿ ರಾಜ್ಯದ ಹಿತಾಸಕ್ತಿಯನ್ನು ಬಲಿ ಕೊಡುವುದು ಸರಿಯಲ್ಲ. ಈ ಯೋಜನೆಗೆ ಸಂಬಂಧಪಟ್ಟಂತೆ ಒಂದು ಕಮಿಟಿ ರಚನೆ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಆ ಕಮಿಟಿಯ ವರದಿ ಈಗಾಗಲೇ ಬಂದಿದೆ. ಆ ಕಮಿಟಿಯವರು ಈ ಯೋಜನೆ ಬೇಡ ಎಂದು ಹೇಳಿಲ್ಲ. This is supposed to be the best according to the Technical Committee, the Planning Commission and the Power Experts because of its lowest environmental hazards. ಎಂದು ಹೇಳಿದ್ದಾರೆ. ಇದಕ್ಕಿಂತ ಬೇರೆ ಯಾವ ಸರ್ಟಿಫಿಕೇಟ್ ಬೇಕು ? ಆದರೂ ಇದನ್ನು ಬೇರೆ ಕಾರಣಗಳಿಗಾಗಿ ತಡೆಹಿಡಿಯುವ ಪ್ರಯತ್ನ ಏನಿದೆ, ಅದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಹೇಳುತ್ತೇನೆ. ಮುಖ್ಯವಾಗಿ ಇದಕ್ಕೆ ರಾಜಕೀಯ ಸಂಕಲ್ಪಬೇಕು.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಯೋಜನೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯ ಹಣದ ಖರ್ಚಿನಲ್ಲಿ ೬ನೇ ಸ್ಥಾನದಲ್ಲಿತ್ತು. ಆದರೆ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ೯ನೇ ಸ್ಥಾನಕ್ಕೆ ಇಳಿಯಿತು. Three places down you have slipped down, ಇದಕ್ಕೆ ಏನು ಉತ್ತರ ಕೊಡುತ್ತಾರೆ ? ಇದು ಇನ್ನೂ ಕಡಿಮೆ ಆಗಬಹುದು. ೭ನೇ ಯೋಜನೆಗೆ ಸಂಬಂಧಪಟ್ಟಂತೆ ಇವರು ೪೫೦೦ ಕೋಟಿ ರೂಪಾಯಿಗಳ ಬಡ್ಜೆಟ್‌ನ್ನು ತಯಾರಿಸಿದರು. ಆದರೆ ಪ್ಲಾನಿಂಗ್ ಕಮೀಷನ್‌ರವರು ಒಪ್ಪಿದ್ದು ೩೫೦೦ ಕೋಟಿ ರೂಪಾಯಿಗಳಿಗೆ. ಅಂದರೆ ಇದರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಕಡಿಮೆ ಆಯಿತು. ಇವರು ಮೂರು ವರ್ಷಗಳಲ್ಲಿ ೬೨ ಪರ್ಸೆಂಟ್‌ವರೆಗೆ ಖರ್ಚು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದರು ಆದರೆ ಪ್ಲಾನಿಂಗ್ ಕಮೀಷನ್ ಅವರು ಇವರ ಬಡ್ಜೆಟ್‌ನ್ನು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆ ಮಾಡಿದರು. ಇದರಿಂದ ೬ನೇ ಯೋಜನೆಯಲ್ಲಿ ಇದ್ದಂಥ ಗ್ರೋತ್ ರೇಟ್ ೫೯ ಪರ್ಸೆಂಟ್‌ನಿಂದ ೭ನೇ ಯೋಜನೆಯಲ್ಲಿ ೪೯ ಪರ್ಸೆಂಟ್‌ಗೆ ಇಳಿಯಿತು. ಇದು ಮತ್ತೆ ೪.೫ಕ್ಕೆ ಇಳಿದರೆ ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದು ಇವರು ಕೊಟ್ಟಿರುವ ಅಂಕಿಅಂಶಗಳಿಂದ ತಿಳಿದುಬರುತ್ತದೆ. ಜಿಲ್ಲಾ ಪರಿಷತ್‌ಗಳಿಗೆ ೯೦೦ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಬಹಳ ಸಲ ಇವರು ಹೇಳಿದ್ದಾರೆ. ಈ ರೀತಿ ಹೇಳಿ ಬಹಳ ಆಸೆ ಹುಟ್ಟಿಸುತ್ತಿದ್ದಾರೆ. ನನ್ನ ಹತ್ತಿರ ಪ್ಲಾನ್-ಡಾಕ್ಯುಮೆಂಟ್ಸ್ ಇದೆ. ಇದರ ಒಂದು ಆಧಾರದ ಮೇಲೆ ಈ ಬಗ್ಗೆ ಹೇಳಬೇಕೆಂದರೆ, ಪ್ಲಾನ್ ಮತ್ತು ನಾನ್-ಪ್ಲಾನ್ ಇವೆರಡನ್ನೂ ಸೇರಿಸಿದಾಗ ಮಾತ್ರ ೯೦೦ ಕೋಟಿ ರೂಪಾಯಿಗಳನ್ನು ಕೊಡಲು

ಸಾಧ್ಯವಾಗುತ್ತದೆ. ಇಲ್ಲಿ ಪ್ಲಾನ್ ಮೂಲಕ ಜಿಲ್ಲಾ ಪರಿಷತ್‌ಗಳಿಗೆ ಸಿಗುವುದು ಕೇವಲ ೨೭೧ ಕೋಟಿ ರೂಪಾಯಿಗಳು ಮಾತ್ರ. 60% of the total outlay is still to be spent by the State Sector. What decentralisation you are doing financially? 70% you have still kept with you and 30% you are going to spend. ಇಲ್ಲಿ ಸೆಂಟ್ರಲ್ ಸೆಕ್ಟರ್‌ನಿಂದ ಬರುವ ಹಣವನ್ನು ಸಹ ಇದಕ್ಕೆ ಕೂಡಿಸಿದರೆ ೩೭೦.೭೯ ಕೋಟಿ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಸೆಕ್ಟರ್‌ನಲ್ಲಿ ಖರ್ಚು ಮಾಡಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಈ ಬಗ್ಗೆ ಹೇಳಬೇಕೆಂದರೆ, ಈ ಹಣಕಾಸಿನ ಅಧಿಕಾರವನ್ನು ಆದಷ್ಟೂ ತಮ್ಮ ಕೈಯಲ್ಲಿಯೇ ಇಟ್ಟುಕೊಳ್ಳುವಂತಹ ಒಂದು ಪ್ರಯತ್ನ ಸತತವಾಗಿ ನಡೆದಿದೆ. ನವೆಂಬರ್-೮೬ರಲ್ಲಿ ಪ್ಲಾನ್-ಡಾಕ್ಯುಮೆಂಟ್ಸ್ ತಯಾರು ಮಾಡಿದ್ದಾರೆ. ಇದರಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ one year willbe a training period both for the Zilla Parishads and Mandals ಆದ್ದರಿಂದಒಂದು ವರ್ಷದವರೆಗೆ ಮಾನ್ಯ ನಜೀರ್ ಸಾಬ್ ಅವರ ಭಾಷಣವನ್ನು ಜಿಲ್ಲಾಪರಿಷತ್ ಮತ್ತುಮಂಡಲ್ ಪಂಚಾಯತ್‌ನ ಅಧ್ಯಕ್ಷರುಗಳು ಕೇಳಿಕೊಂಡು ಕಲಿತುಕೊಳ್ಳಬೇಕಾಗಿದೆ. Financial devolution of power they have not planned and they have not devised in 1987-88. In 1986-87 also, 30% you have given, it to the district sector and if you want to give real power to these bodies, you would have increased it to 60% allocation, i.e., the devolution of funds. ನಿಮಗೆ ನಿಜವಾಗಿಯೂ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂಬ ಮನಸ್ಸು ಇದ್ದಿದ್ದರೆ ಶೇಕಡ ೩೦ಕ್ಕೆ ಬದಲು ಶೇಕಡ ೬೦ರಷ್ಟು ಹಣ ಖರ್ಚು ಮಾಡುವ ಅಧಿಕಾರವನ್ನು ಜಿಲ್ಲಾಪರಿಷತ್‌ಗಳಿಗೆ ಕೊಡಬಹುದಾಗಿತ್ತು ಆದರೆ ಆ ರೀತಿ ನೀವು ಇಲ್ಲಿ ಮಾಡಿಲ್ಲ. ಮತ್ತೆ ಕೇಂದ್ರದ ನೆರವಿಲ್ಲದೆ ನಾವೇ ಹೆಚ್ಚು ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡುತ್ತಿದ್ದೇವೆಂದು ಇವರು ಯಾವಾಗಲೂ ಹೇಳುತ್ತಿರುತ್ತಾರೆ. ಅಧ್ಯಕ್ಷರೆ ಈ ಬಗ್ಗೆ ನಾನು ಇಷ್ಟು ಹೇಳುವುದು. ಹೆಚ್ಚು ಫಿಗರ್ಸ್ ಹೇಳುವುದಕ್ಕೆ ಇಷ್ಟಪಡುವುದಿಲ್ಲ. Please see even under the district sector, what is the contribution of the State Government and what is the contribution of the Central Government? ಡಿಸ್ಟ್ರಿಕ್ಟ್ ಸೆಕ್ಟರ್‌ಗೆ ಕೇಂದ್ರ ಸರ್ಕಾರ ಏನು ಡೆವಲ್ಯೂಷನ್ ಮಾಡಿದೆ ಅದು ನೇರವಾಗಿ ಕೊಡತಕ್ಕಂಥಾದ್ದು ನೀವು ಅವರಿಗೆ ಕೊಡಲೇಬೇಕು. ಈ ಡೀಸೆಂಟ್ರಲೈಸ್ಡ್ ಪ್ಲಾನಿಂಗ್ ಆದದ್ದು ೬ನೇ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಿಂದ. ತಾವು ಮಾಡಿದ್ದಲ್ಲ. Karnataka was the pioneer to introduce such a district sector decentralised planning in the country and I happened to be the Finance Minister and also the Planning Minister and we have done it. ಇದು ಇವೊತ್ತು ಮಾಡಿದ್ದಲ್ಲ, ೬ನೇ ಯೋಜನೆಯಲ್ಲಿ ಮಾಡಿದ್ದುದು ರಾಷ್ಟ್ರದಲ್ಲಿ ನಾವು ಮಾಡಿರತಕ್ಕಂಥಾದ್ದು Karnataka was the pioneer and we have done decentralised planning and it is not started from you. It started in the Sixth Five Year Plan when I was the Finance and Planning Minister and it is I who introduced it.

Allocations and devolution to districts are concerned, Rs. 195.39 crores during 1987-88 under State Sector and Rs 101 72 Crores under Central Sector. From State, it is only Rs. 184 Crores and you are just giving Rs. 70 Crores more from the State. ಇವೊತ್ತು ಜಿಲ್ಲಾ ಪರಿಷತ್ ನಡೆಯಬೇಕು ಎಂದರೆ ಅದು ಕೇಂದ್ರ ಸರ್ಕಾರದ ಪರಿಪೂರ್ಣ ಸಹಾಯದಿಂದ ನಡೆಯಬೇಕೇ ಹೊರತು ತಾವು ನಡೆಸುತ್ತಿದ್ದೀರಿ ಎನ್ನತಕ್ಕಂಥ ಮಾತು ಸರಿಯಲ್ಲ For public consumption, it is O.K but Planning document, you have got to present the facts i.e., analytical facts. ಇದನ್ನು ನಾನು ವಿಸ್ತರಿಸಲಿಕ್ಕೆ ಹೋಗುವುದಿಲ್ಲ. ೧೯೮೭-೮೮

ರಿಂದ ೧೯೮೫-೮೬ ವರೆಗೆ ಇವರ ಪರಿಸ್ಥಿತಿ ಹೀಗಿತ್ತು ಎಂಬುದನ್ನಷ್ಟೇ ಹೇಳುತ್ತೇನೆ. ಇವರು ಯಾವಾಗಲೂ ರಾಜ್ಯ ಸರ್ಕಾರ ನಾವು ಮಾಡತಕ್ಕಂಥದ್ದು ಕೇಂದ್ರ ಸರ್ಕಾರದ್ದು ಏನೂ ಇಲ್ಲ ಎಂದು ಭಾಷಣ ಮಾಡುತ್ತಾರೆ. ಈಗ ೧೯೮೫-೮೬ರ ಫಿಗರ್ಸ್ ಹೇಳುತ್ತಾ ಇದ್ದೇನೆ. The share of Cantral taxes which they have projected during 1985-86 was Rs. 316.66 Crores but they received Rs. 354.00 Crores i.e., Rs. 40 Crores more they have received from the Central Govt They have not given less.

As regards Grants, the amount projected was Rs. 221 Crores but they received Rs. 227 Crores from the Govt. of India. Total, Rs 533 79 Crores we have received from the Govt, of India during 1985-86. This is excluding Institutional finance.

In the case of State resources, they projected Rs. 407 Crores from Taxes but they get only Rs. 376 Crores. You have not collected properly. ನಿಮ್ಮ ರಿಸೋರ್ಸಸ್ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಉದಾಹರಣೆಗೆ ಒಂದನ್ನು ಹೇಳುತ್ತಾ ಇದ್ದೇನೆ. In 1983-84. from State taxes, you have anticipated Rs. 791 Crores. but you got only Rs. 759 Crores i.e., Rs. 40 Crores less than what you have anticipated. ಇದರಿಂದ ಚೆಕ್ಸನ್ನು ಹಾನರ್ ಮಾಡಲಿಕ್ಕೆ ಆಗುವುದಿಲ್ಲ, ಕಂಟ್ರಾಕ್ಟರ್‌ಗೆ ಪೇಮೆಂಟ್ ಮಾಡಲಿಕ್ಕೆ ಆಗುವುದಿಲ್ಲ ಟೀಚರ್ಸ್‌ಗೆ ಸ್ಯಾಲರಿ ಕೊಡಲಿಕ್ಕೆ ಆಗುವುದಿಲ್ಲ ನೀವು ಸರ್‌ಪ್ಲಸ್ ಮಾಡುತ್ತೇವೆ ಎಂದು ಹೇಳುತ್ತೀರಿ. You can just see one picture i.e., of 1985-86 It is on page 9 of the Karnataka picture of the Budget ಕೇಂದ್ರ ಸರ್ಕಾರದ ಡಾಕ್ಯುಮೆಂಟನ್ನು ಇಲ್ಲಿ ತಂದು ತೋರಿಸಲಿಕ್ಕೆ ನಾನು ಇಷ್ಟಪಡುವುದಿಲ್ಲ. I had mentioned the position when I was there. In the case of Revenue Account, during 1980-81. it was + 58.55 Crores (Surplus) During 1981-82, it was + 165.28 Crores (Surplus) and during 1982-83, it was + 11.89 Crores Surplus) ಯಾವಾಗ ಡಿಫಿಸಿಟ್ ಪ್ರಾರಂಭವಾಯಿತು, ಯಾವಾಗ ಆರ್ಥಿಕ ಪರಿಸ್ಥಿತಿಯು ಕುಸಿತ ಪ್ರಾರಂಭವಾಯಿತು. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಉತ್ತರ ಕೊಡುತ್ತಾ ಹೇಳಿದರು. They say that Mr. Moily is dreaming with financial bankruptcy and all that. If you show one minus figure during my period, I will resign from the membership of the Assembly. Please show it. All-during your period. It was plus during 1983-84 because of the foundation that I have laid.

ಪ್ಲಸ್ ಇದ್ದುದು ಮೈನಸ್ ಆಯಿತು. ೧೯೮೪ ರಿಂದ ಇದು ಪ್ರಾರಂಭವಾಯಿತು ೮೪-೮೫ರಲ್ಲಿ ಮೈನಸ್ ೩೧೯.೩೯ ಕ್ರೋರ್ಸ್ ಹೀಗೆ ಪ್ಲಸ್ ಇದ್ದುದು ಮೈನಸ್ ಆಗುತ್ತಾ ಬಂದಿದೆ. ಮಂತ್ರಿ ಡಿಫಿಸಿಟ್ ಆಗುತ್ತಾ ಬಂದಿದೆ. ವರ್ಷಕ್ಕೆ ೨೦೦-೩೦೦ ಕೋಟಿ ಕೊರತೆಯಾಗುತ್ತಾ ಬಂದಿದೆ. ನಾನು ಪ್ರಾರಂಭ ಮಾಡಿದ್ದೇ ಬರಗಾಲದಿಂದ ಅದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದನ್ನು ಹೇಳಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಯಾವುದರಲ್ಲಿ ಮೈನಸ್ ಇದ್ದರೂ ರಾಜೀನಾಮೆ ಮಾಡುತ್ತೇನೆಂದು ಹೇಳಿದ್ದೀರಿ. ನಮ್ಮ ಕಾಲದಲ್ಲಿ ಜನಗಳ ಕಷ್ಟದಲ್ಲಿ ಮೈನಸ್ ಆಗಿದೆ. ನಿಮ್ಮ ಕಾಲದಲ್ಲಿ ಪ್ಲಸ್ ಆಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ರೆವಿನ್ಯೂ ಅಕೌಂಟ್ಸ್‌ನಲ್ಲಿ ಮಾತ್ರ ಜನತಾದವರ ಭಾಷಣ ದಿಂದ ಜನಗಳ ಹೊಟ್ಟೆ ತುಂಬಿ ಹೋಗಿದೆ. ಮಿನಿಮಂ ವೇಜಸ್ ಕೊಡಲಿಕ್ಕೆ ಹಣ ಇಲ್ಲ. ನಾನು ದಿನ ಗೂಲಿ ನೌಕರರ ವಿಚಾರದಲ್ಲಿ, ಮತ್ತು ಅವರಿಗೆ ಕೊಡತಕ್ಕ ವೇಜಸ್ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ ಧಾರವಾಡ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ವಿಚಾರ ಕೂಡ ಇದೆ.

ಶ್ರೀ ಎಸ್. ಬಂಗಾರಪ್ಪ.—ಅವರ ಕಾಲದಲ್ಲಿ ಮೈನಸ್ ತಪ್ಪಲಿಲ್ಲ, ಕಷ್ಟಗಳು ತಪ್ಪಲಿಲ್ಲ. ಮೈನಸ್ ಇರುವವರೆಗೆ ಕಷ್ಟಗಳು ಇರುತ್ತವೆ.

ಶ್ರೀ ಜೆ. ಹೆಚ್. ಪಟೇಲ್.—ಏನೇ ಆದರೂ ನೀವು ಮತ್ತೇ ಬರುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ನಿಮ್ಮ ಪಕ್ಷ ಬರುವುದಿಲ್ಲ ಎನ್ನುವುದನ್ನೂ ಮನವರಿಕೆ ಮಾಡಿ ಕೊಟ್ಟಿದ್ದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ, ಪರಿಶಿಷ್ಟ ವರ್ಗದವರ ಬಗ್ಗೆ ಬಹಳ ಭಾಷಣ ಮಾಡುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ೨೧೬ ಜನರಿಗೆ ಪ್ರೊಮೋಷನ್ ಕೊಟ್ಟಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರಿಂದ ಎಕ್ಸಿಕ್ಯೂಟೀವ್ ಇಂಜಿನಿಯರುಗಳಾಗಿ ಕೊಟ್ಟಿದ್ದಾರೆ. ಈ ಪೈಕಿ ೫ ಜನ ಹರಿಜನ ಗಿರಿಜನರಿಗೆ ಮಾತ್ರ ಅವಕಾಶ ಸಿಕ್ಕಿದೆ. ರಿಸರ್ವೇಷನ್ ಪಾಲಿಸಿಯನ್ನು ಪೂರ್ತಿ ತೆಗೆದುಹಾಕಿದ್ದಾರೆ. ಇದರ ಪರಿಣಾಮ ೨೦ ನೇ ಸೆಂಚುರಿಗೆ ನಾವು ಕಾಲಿಡುವಾಗ By the end of 20th Century and when you step into 21st Century, Chief Engineer, Superintending Engineer ಪರಿಶಿಷ್ಟ ವರ್ಗದವರಾಗಲಿ, ಜಾತಿಯವರಾಗಲೀ ಒಬ್ಬರೂ ಇರುವುದಿಲ್ಲ. You are eliminating them from all the top positions as far as the Engineering Department is concerned. ಹರಿಜನ ಗಿರಿಜನರ ಬಗ್ಗೆ ತಮ್ಮ ವ್ಯಾಕುಲತೆ ಎಷ್ಟಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಲೋಯರಿಂಗ್ ಟಾರ್‌ಗೆಟ್ಸ್ ಆಫ್ ೨೦ ಪಾಯಿಂಟ್ ಪ್ರೋಗ್ರಾಂ. ಪ್ಲಾನ್ ಡಾಕ್ಯುಮೆಂಟ್ಸ್ ಆ ವಿಷಯ ಬಂದಾಗ ಸದನದ ಮುಂದೆ ಹೇಳುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಷನ್ ವಿಚಾರದಲ್ಲಿ ಕಾನ್‌ಸೆಪ್ಟ್, ಫಿಲಾಸಫಿಯನ್ನೇ ಲಿಕ್ವಿಡೇಟ್ ಮಾಡಿದಂಥ ಕೀರ್ತಿ ರಾಷ್ಟ್ರದಲ್ಲಿ ಇದ್ದರೆ ಅದು ಕರ್ನಾಟಕ ರಾಜ್ಯದ ಜನತಾ ಪಕ್ಷದ ಸರ್ಕಾರಕ್ಕೆ ಎಂದು ಹೇಳುತ್ತೇನೆ. ಇದಲ್ಲಾ ನ್ಯೂ ಡೀಲ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ಹೇಳಿ ದೇಶದಲ್ಲಿರತಕ್ಕ ಎಲ್ಲಾ ಪ್ರಾಮುಖ್ಯವಾದಂಥ ಪತ್ರಿಕೆಗಳು ಕೂಡ It is a retrograde step ಎಂದು ಬರೆದವು. You have aved as Villain in the whole drama of Backward Classes. ಈ ವಿಚಾರದಲ್ಲಿ ಏನೊಂದು ಹೋರಾಟ ನಡೆಯಿತು ಎನ್ನುವುದು ಗೊತ್ತಿದೆ. ಬ್ಯಾಕ್‌ವರ್ಡ್ ಕ್ಲಾಸಸ್ ಮಿನಿಸ್ಟರ್ ಬಸವಣ್ಣಪ್ಪನವರ ಪೋರ್ಟ್ ಫೋಲಿಯೋವನ್ನು ಅಬಾಲಿಷ್ ಮಾಡಿ ಏಕೆಂದರೆ ನಿಮ್ಮ ಕಾಸ್ಮಾಟಿಕ್ ತೋರಿಕೆಯ ಚಾಕಚಕ್ಯತೆಯ ನಾಟಕವನ್ನು ದಯಮಾಡಿ ನಿಲ್ಲಿಸುವುದು ಒಳ್ಳೆಯದು "ನ್ಯೂ ಡೀಲ್ ಫಾರ್ ಬ್ಯಾಕ್‌ವರ್ಡ್ ಕಾಸಸ್" ಎಂದು ಈ ಬಡ್ಜೆಟ್ಟಿನ ಪ್ರತಿ ಪುಟದಲ್ಲಿಯೂ ಬರೆದಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಇಂಥ ಪ್ರತಿಗಾಮಿ ಧೋರಣೆಯನ್ನು ಯಾರೂ ಮಾಡಿಲ್ಲ. ನೀವು ನಾಚಿಕೆ ಇಲ್ಲದೆ ಮಾಡಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ ಬ್ಯಾಕ್‌ವರ್ಡ್ ಕ್ಲಾಸನ್ನು ಎಲಿಮಿನೇಟ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ, ಇದರ ಅರ್ಥ ಏನು ? ಕಾಸ್ಟ್ ಎಂದರೆ, ಇಂಮೊಬೈಲ್ ಡಿಸ್ಕ್ರಿಪ್ಷನ್. ಕ್ಲಾಸ್ ಅಂದರೆ ಮೊಬಿಲಿಟಿ ಇರುವಂಥಾದ್ದು. ಬ್ಯಾಕ್‌ವರ್ಡ್‌ಕ್ಲಾಸ್‌ನವರು ಬ್ಯಾಕ್‌ವರ್ಡ್ ಆಗಿಯೇ ಇರಬೇಕೆಂದು ಇವರ ಸಿದ್ಧಾಂತ ಇದೆ. ನಮ್ಮದು ಅದಲ್ಲ. ಅವರಲ್ಲಿ ವೆಸ್ಟೆಡ್ ಇಂಟರೆಸ್ಟ್ ಇದ್ದಾರೆ. ನಮ್ಮದು ಹಾಗಲ್ಲ.

ಒಬ್ಬ ಮಾನ್ಯ ಸದಸ್ಯರು.—ಬ್ಯಾಕ್‌ವರ್ಡ್ ಕ್ಲಾಸ್‌ನವರು ಮುಂದುವರಿಯಬೇಕು. ಮುಂದುವರಿದವರು ಹಿಂದುಳಿಯಬೇಕು. ಹಿಂದುಳಿದವರ ಬಗ್ಗೆ ಹೇಳಿಕೊಳ್ಳಲಿಕ್ಕೆ ನಿಮ್ಮಲ್ಲಿ ಏನೂ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸಸ್ ಹಾಸ್ಟೆಲ್ ಏತಕ್ಕೆ ಬೇಕು ? ಜನರಲ್ ಹಾಸ್ಟೆಲ್ ಮಾಡಿ. 94% of the population has become backward. When Everyone is backward, you are unfit to talk about the Backward classes.

SRI M. S. KRISHNAN.—Every backward community has become a forward community. Every forward community has become a backward community.

SRI G. BASAVANNAPPA.—Sir, we have given more weightage to the backward classes. We have safeguarded their interest.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸರ್ಕಾರದವರು ಏನು ಕೆಲಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ ಮೈಸೂರು ಸಿಟಿಯ, ನಂಜನಗೂಡು ಟೋಲ್‌ಗೇಟ್ ಹತ್ತಿರ ಮೂರೂವರೆ ಎಕರೆ ಜಾಗ ಸಿವೇಜ್ ಫಾರಂಗೆ ಎಂದು ಇತ್ತು. ಅದನ್ನು ಇವರು ಖಾಸಗಿಯವರಿಗೆ ಕೊಟ್ಟುಬಿಟ್ಟಿದ್ದಾರೆ. ಇವರು ಪಬ್ಲಿಕ್ ಪ್ರಾಪರ್ಟಿಯನ್ನು ಎಷ್ಟರಮಟ್ಟಿಗೆ ರಕ್ಷಣೆ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಸುಮಾರು ೫೦ ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮೈಸೂರು ಸಿಟಿಯಲ್ಲಿ ಈ ಜಾಗ ಯಾವುದು ಇತ್ತು, ಅದನ್ನು ಇವೊತ್ತು ಮಾರಾಟ ಮಾಡತಕ್ಕದ್ದು ಮಾಡಿರುವಾಗ ನಾಳೆ ವಿಧಾನ ಸೌಧದ ಲಾಂಜನ್ನೂ ಸಹ ಮಾರಾಟ ಮಾಡುತ್ತೀರಿ. ತಾವು ಅದರ ಬಗ್ಗೆ ವರದಿಯನ್ನು ತರಿಸಬೇಕು. ಅದನ್ನು ಕಾರ್ಪೊರೇಷನ್ ಅವರೇ ಮಾಡಿರಬಹುದು. ಸರ್ಕಾರದಲ್ಲಿರತಕ್ಕ ಡಿವಿಜನಲ್ ಕಮೀಷನರ್ ಆ ಆಸ್ತಿಯನ್ನು ಭದ್ರತೆಯಿಂದ ನೋಡಿಕೊಳ್ಳುತ್ತಿದ್ದಾರೆಯೇ ? ಆದ್ದರಿಂದ ತಾವು ಇದರ ಬಗ್ಗೆ ವರದಿಯನ್ನು ತರಿಸಿ ಉತ್ತರ ಹೇಳಬೇಕು. ಇನ್ನು ಗ್ರೀನ್ ಬೆಲ್ಟ್ ಇಡಬೇಕೆಂದು ಇದ್ದಂಥ ೫-೧೦ ಎಕರೆ ಜಾಗವನ್ನು ಬೇರೆ ಒಬ್ಬರಿಗೆ ಕೊಟ್ಟಿದ್ದೀರಿ. ಕಳೆದ ಸದನದಲ್ಲಿ ಈ ವಿಚಾರವನ್ನು ನಾನು ಎತ್ತಿದ್ದೇನೆ. ಸಿ.ಐ.ಟಿ.ಬಿ. ಯವರು ಈ ತರಹ ಎಷ್ಟು ಭೂಮಿಯನ್ನು ಎಕರೆಗಟ್ಟಲೆ ಮಾರಿದ್ದಾರೆ. ಸರಸ್ವತೀಪುರಂ ಲೇಔಟ್‌ನಲ್ಲಿ ಆಗಿದೆ. ಮೊನ್ನೆ ೫೦ ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಆಸ್ತಿಯನ್ನು ಖಾಸಗಿಯವರಿಗೆ ಪರಭಾರೆ ಮಾಡತಕ್ಕ ಕೆಲಸ ಮಾಡಿದ್ದೀರಿ. ಇದರ ಬಗ್ಗೆಯೂ ವರದಿಯನ್ನು ಕೊಡಬೇಕು. ಇನ್ನು ಜಿಲ್ಲಾ ಪರಿಷತ್ತು ಚುನಾವಣೆಯ ಬಗ್ಗೆ ಹೆಚ್ಚು ಹೇಳುವುದಿಲ್ಲ. The Janata Party's popularity has come down to the extent of 45.61% in 1985 as far as Assembly is concerned. In 1987, it has come down to 44.97%. According to me it is still less. ಆರ್ಟಿಕಲ್ ಬರೆದಿದ್ದನ್ನು ನೋಡಿ ಬರೆದಿದ್ದೇನೆ. congress 41.21% popularity ಇದ್ದುದು It has increased to 42.69% in 1987. ಇದರಿಂದ ಜಿಲ್ಲಾಪರಿಷತ್‌ನಿಂದ ಪಾಪುಲಾರಿಟಿ ಜಾಸ್ತಿಯಾಗಿದೆ ಎನ್ನುವ ವಾದ ಹೇಳಬೇಡಿ. You must take it as a warning for the decline of your popularity. It is an indication of the declining trend of image and performance of the Janata Party. ಇದನ್ನು ತಾವು ಅರಿತು ಮುಂದೆ ಹೆಜ್ಜೆ ಇಡಬೇಕಾದ ಪರಿಸ್ಥಿತಿ ಇದೆ. ಇನ್ನು ಕಮ್ಯುನಲ್ ಕ್ಲ್ಯಾಷ್ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಕಮ್ಯುನಲ್ ಕ್ಲ್ಯಾಷ್, ಕನ್‌ಫ್ರಾಂಟೇಷನ್ ಕೂಡ ಅನೇಕ ಕಡೆ ಜಾಸ್ತಿಯಾಗುತ್ತಿದೆ. ಅದು ಕೆ.ಆರ್. ನಗರ, ಬೆಳ್ತಂಗಡಿ, ರಾಮನಗರ, ಗುಲ್ಬರ್ಗ, ಬಾಗಲಕೋಟೆ. ಬಿಜಾಪುರ ಇನ್ನೂ ಅನೇಕ ಕಡೆಗಳಲ್ಲಿ ಕಮ್ಯುನಲ್ ಕ್ಲ್ಯಾಷಸ್ ಆಗಿದೆ. ೪೦ ವರ್ಷಗಳಿಂದ ಇದ್ದಂಥ ಶಾಂತಿಯನ್ನು ಕದಡತಕ್ಕದ್ದು ಆಗಿದೆ ಎಂದರೆ, ತಾವು ಎಡವಿದ್ದೀರಿ ಎನ್ನುವ ಬಗ್ಗೆ ಯಾವ ಅನುಮಾನವೂ ಇಲ್ಲ. ಇನ್ನು ರಾಜ್ಯಪಾಲರ ಭಾಷಣದ ಮುಖಾಂತರ ಕೆಲವು ವಿಚಾರಗಳನ್ನು ಹೇಳಿಸಬೇಕೆಂದು ಹೊರಟಿದ್ದಾರೆ.

೧೦-೩೦ ಎ. ಎಂ.

ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರವನ್ನು ಬರೆಯುತ್ತಾರೆ. ಆದರೆ ಅದು ಕಾರ್ಯಗತವಾಗುವುದಿಲ್ಲ. ಇಲ್ಲಿ ಒಂದೇ ಒಂದು ಉದಾಹರಣೆಯನ್ನು ಮಾತ್ರ ಕೊಡುತ್ತೇನೆ. ಬಾಂಬೆ ನ್ಯಾಚುರಲ್ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸೊಸೈಟಿ. ಎಂದು ಇದೆ. ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಸಲೀಂ ಆಲಿಯವರು ಅದರ ಅಧ್ಯಕ್ಷರು. ಅವರು ಬಹಳ ಎಮಿನೆಂಟ್ ಪರ್ಸನ್. ಅವರು ಒಂದು ಟ್ರಾಫಿಕಲ್ ರೀಸರ್ಚ್ ಸೆಂಟರನ್ನು ನಮ್ಮ ಕರ್ನಾಟಕದಲ್ಲಿ ಸ್ಥಾಪನೆ ಮಾಡಬೇಕೆಂದು ನನ್ನ ಕ್ಷೇತ್ರದಲ್ಲಿ ಒಂದು ಜಾಗವನ್ನು ನೋಡಿಕೊಂಡು ಹೋದರು. ಅವರ ಡೆಲಿಗೇಷನ್‌ನ್ನು ತೆಗೆದುಕೊಂಡು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಶ್ರೀಲಂಕಾದವರು ನಮಗೆ ಈ ಸೆಂಟರ್‌ನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಬೇರೆ ಬೇರೆ ರಾಜ್ಯಗಳವರೂ ಕೂಡ ನಮಗೆ ಕೊಡಿ, ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ್ದು.

ಇದು ಅಂತರರಾಷ್ಟ್ರೀಯ ಮಟ್ಟದ ಟ್ರಾಫಿಕಲ್ ರೀಸರ್ಚ್ ಸೆಂಟರ್, ೧೯೮೬ನೇ ಇಸವಿಯಲ್ಲಿ ಎಕ್ಸ್‌ಪರ್ಟ್ಸ್ ಬಂದು ಆ ಜಾಗವನ್ನು ನೋಡಿಕೊಂಡು ಹೋಗಿದ್ದಾರೆ,' ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರವನ್ನು ಕೊಡುತ್ತಾರೆ. ಆದರೆ ಅದು ಕಾರ್ಯಗತವಾಗುವುದಿಲ್ಲ. ಶ್ರೀ ಸಲೀಂ ಆಲಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಬರೆದು ಅದರ ಕಾಪಿಯನ್ನು ನನಗೆ ಹಾಕಿದ್ದಾರೆ. ಇದುವರೆಗೂ ಈ ರಿಸರ್ಚ್ ಸೆಂಟರ್‌ನ್ನು ಪ್ರಾರಂಭ ಮಾಡಿಲ್ಲ. ಒಂದು ವೇಳೆ ಇದನ್ನು ನೀವು ಮಾಡುವುದಕ್ಕಾಗದಿದ್ದರೆ ಹೇಳಿಬಿಡಿ, ಅದನ್ನು ಶ್ರೀ ಲಂಕಾಕ್ಕೋ ಅಥವಾ ಬೇರೆ ಯಾವುದಾದರೂ ರಾಜ್ಯಕ್ಕೋ ಷಿಫ್ಟ್ ಮಾಡುತ್ತಾರೆ. ಬಹಳಷ್ಟು ರಾಜ್ಯಗಳು ಈ ಸೊಸೈಟಿ ನಮಗೆ ಬೇಕು. ನಮಗೆ ಬೇಕೆಂದು ಕೇಳುತ್ತಿದ್ದಾರೆ. ನಮ್ಮ ರಾಜ್ಯದ ಹಿತಾಸಕ್ತಿಯನ್ನು ಪರಿಗಣಿಸಿ ಈ ಅಭಿವೃದ್ಧಿ ಕಾರ್ಯದ ಮುನ್ನಡೆಯನ್ನು ಸಾಧಿಸದಿದ್ದರೆ ಈಗ ೧.೨೫ ಪರ್ಸೆಂಟ್ ಏನಿದೆ ಅದು ಇನ್ನೊಂದು ಚುನಾವಣೆ ಬರುವಾಗ ಇನ್ನೂ ೫ ಪರ್ಸೆಂಟ್ ಕಡಿಮೆಯಾಗಬಹುದು ಅಥವಾ ೧೦ ಪರ್ಸೆಂಟ್ ಕಡಿಮೆಯಾಗಬಹುದು. ನೀವು ಮುಂದೆ ಅಧಿಕಾರಕ್ಕೆ ಬರುವುದಿಲ್ಲವೆಂದು ಮಾನ್ಯ ಜೆ. ಹೆಚ್ ಪಟೇಲ್‌ರವರು ನಮಗೆ ಹೇಳಿದರು, ನಾನಾದರೂ ಹೇಳುತ್ತೇನೆ, ಇದೇ ಮಾತು ತಮಗೇ ತಿರುಗುಬಾಣ ಆಗಬಹುದು. ಈ ವಿಚಾರವನ್ನು ತಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದು ಅವಶ್ಯಕವಿದೆ ಎನ್ನತಕ್ಕ ಮಾತನ್ನು ತಮ್ಮ ಮುಖೇನ ಅವರಿಗೆ ತಿಳಿಸಿ ಮಾನ್ಯ ರಾಜ್ಯಪಾಲರ ಭಾಷಣ ಏನಿದೆ ಅದು ಸತ್ಯಕ್ಕೆ ಬಹಳ ದೂರದಲ್ಲಿ ಇರತಕ್ಕ ಅನೇಕ ವಿಚಾರಗಳನ್ನು ಅಳವಡಿಸಿಕೊಂಡಿದ್ದಾರೆ. ಪಾಪ, ಇಂಥ ವಿಚಾರಗಳನ್ನು ತಾವು ಮಾನ್ಯ ರಾಜ್ಯಪಾಲರ ಮುಖೇನ ಹೇಳಿಸಬಾರದಿತ್ತು ಎಂದು ಹೇಳಿ ಇದಕ್ಕಾಗಿ ನನ್ನ ವ್ಯಥೆಯನ್ನು ತಿಳಿಸಿ ಇಷ್ಟು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಮಾನ್ಯ ರಾಜ್ಯಪಾಲರ ಭಾಷಣವನ್ನು ಶ್ರೀಮಾನ್ ಪ್ರಕಾಶ್‌ರವರೂ ಹಾಗೂ ವೈ.ಕೆ. ರಾಮಯ್ಯನವರು ಬಹಳಹೆಚ್ಚಿನ ರೀತಿಯಲ್ಲಿ ಸಮರ್ಥನೆ ಮಾಡಿದ್ದಾರೆ. ಇದರಲ್ಲಿ ಹೇಳಿಕೊಳ್ಳತಕ್ಕ ಹೊಸಯೋಜನೆಗಳು ಏನೂ ಇಲ್ಲ. ಅಥವಾ ಹಿಂದೆ ಅವರು ಕಾರ್ಯಗತ ಮಾಡಿದ ಕಾರ್ಯಗಳೂ ಕೂಡ ಎಷ್ಟರಮಟ್ಟಿಗೆ ಸಾಧನೆಯಾಗಿವೆ ಎಂಬ ಬಗ್ಗೆ ಅಂಕಿ ಸಂಖ್ಯೆಗಳನ್ನು ಅವರು ಕೊಡಬೇಕಾಗಿತ್ತು. ಅದನ್ನೂ ಕೊಟ್ಟಿಲ್ಲ. ಹರಿಜನ-ಗಿರಿಜನರ ಬಗ್ಗೆ, ಅಭಿವೃದ್ಧಿ ಯೋಜನೆಗಳ ಬಗ್ಗೆ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳುವ ಬಗ್ಗೆಯಾದರೂ ಕೂಡ ಏನೂ ಇಲ್ಲ. ಬಹಳ ಶಕ್ತಿಯುತವಾಗಿ ಮಾತನಾಡತಕ್ಕ ಮಾನ್ಯ ಪ್ರಕಾಶ್‌ರವರು ಮತ್ತು ಮಾನ್ಯ ರಾಮಯ್ಯನವರು ಭಾಷಣ ಮಾಡಿ ಸಮರ್ಥನೆ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರು ಕೇವಲ ೨೦ ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಿದರೆ ನಿಮ್ಮ ಮಾನ್ಯ ಸದಸ್ಯರಿಬ್ಬರೂ ಅದನ್ನು ಸಮರ್ಥನೆ ಮಾಡಿಕೊಂಡು ಸುಮಾರು ೩ ತಾಸು ಕಾಲ ಮಾತನಾಡಿದ್ದಾರೆ. ಇದರಲ್ಲಿ ಏನಿದೆ ? ಏನೇನೂ ಇಲ್ಲ. ಮೊದಲನೆಯದಾಗಿ ಈ ಭಾಷಣವನ್ನು ಮಾನ್ಯ ಸದಸ್ಯರಾದ ರಾಮಯ್ಯನವರೂ ಮತ್ತು ಮಾನ್ಯ ಪ್ರಕಾಶ್‌ರವರೂ ಸಮರ್ಥನೆಯನ್ನೇ ಮಾಡಬೇಕಾಗಿರಲಿಲ್ಲ. ಈ ಮಾತನ್ನು ನಮ್ಮ ಪಕ್ಷದವರು ಹೇಳಬೇಕಾದುದಲ್ಲ. ಮತ್ತು ನಿಮ್ಮ ಪಕ್ಷದವರೂ ಕೂಡ ಇದನ್ನು ಸಮರ್ಥನೆ ಮಾಡಿಕೊಳ್ಳಬೇಕಾದುದೂ ಅಲ್ಲ. ಸುಮಾರು ೬೩ ಜನ ಸದಸ್ಯರೂ ಒಂದು ಮೆಮೋರ್ಯಾಂಡ್‌ಅನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟರು. ಅದರಲ್ಲಿ ಏನು ಹೇಳುತ್ತಾರೆಂದರೆ.

> "There was an urgent need to improve the image of the Party and the Government in view of the forth coming Zilla parishads and Mandal Panchayat elections."

ಅದಕ್ಕೆ ಇರತಕ್ಕಂಥ ಮಂತ್ರಿಮಂಡಲದಲ್ಲಿ ಏನು ಮೂವತ್ತು ಜನರು ಇದ್ದರು. ಅವರನ್ನು ಕಡಿಮೆ ಮಾಡಿ ಇಮೇಜ್ ಇಂಪ್ರೂವ್ ಮಾಡುವುದಕ್ಕೋಸ್ಕರ ಈಗ ಯಾರನ್ನು ತೆಗೆದಿದ್ದೀರಿ.

---

† ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆದರಿಂದ, ಅವರಿಗೆ ಇಮೇಜ್ ಇಲ್ಲವೆಂದು ಹೇಳಿದಂತಾಗುತ್ತದೆ. ಅವರುಗಳೇ ಒಪ್ಪಿಕೊಂಡಿದ್ದಾರೆ. ಒಪ್ಪಿಕೊಂಡ ಮೇಲೆ ೩೦ ರಿಂದ ೧೬ ಮಂತ್ರಿಗಳನ್ನಾಗಿ ರಿಶಫಲ್ ಮಾಡತಕ್ಕಂಥ ಕಾರ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ೯೩ ಶಾಸಕರ ಮಾತನ್ನು ಕೇಳಿ ಇವೊತ್ತಿನ ದಿವಸ ಮಾಡಿದ್ದಾರೆ. ಆ ಬಿಟ್ಟಂಥ ೧೪ ಜನ ಮಂತ್ರಿಗಳು ಏನು ಇದ್ದಾರೆ ಅವರಲ್ಲಿ ಮಾನ್ಯ ಪ್ರಕಾಶ್‌ರವರು ಮತ್ತು ಮಾನ್ಯ ವೈ. ಕೆ. ರಾಮಯ್ಯನವರ ಬಾಯಿಂಲ್ಲಿ ಏತಕ್ಕೆ ಈ ಭಾಷಣವನ್ನು ಅನುಮೋದಿಸುವಂತೆ ಹೇಳಿಸಿದರೋ ಗೊತ್ತಿಲ್ಲ. ಬಹುಶಃ ೩೮ ಜನ ಸದಸ್ಯರು ಮೆಮೋರಂಡಮ್ ಕೊಟ್ಟಿರುತ್ತಾರೆ ಅವರ ಬಾಯಿಂದಲೇ ಹೇಳಿಸಿದ್ದರೆ ಚೆನ್ನಾಗಿರುತ್ತಿತ್ತು ಅವರು ಕೊಟ್ಟಿರತಕ್ಕಂಥ ಮೆಮೋರಂಡಮ್ ಕೂಡ ಅವರ ಮಾತಿನಲ್ಲಿಯೋ ಹೇಳುವುದಾದರೆ ನೀವು ಮಾಡದೆ ಹೋದರೆ ನಮ್ಮ ಮುಖ್ಯಮಂತ್ರಿಗಳನ್ನೂ ಕೂಡ ನೋಡುವುದಿಲ್ಲ ಎನ್ನುವುದನ್ನೂ ಕೂಡ ಸ್ಪಷ್ಟವಾಗಿ ವಾರ್ನಿಂಗ್ ಕೊಟ್ಟಿದ್ದಾರೆ. "Annoyed by the manner in which recent Cabinet changes were effected, 38 of the 93 M. L. As who originally created a stir in party circle by presenting Memorandam to the Cheif Minister to remove inefficient and arrogant Ministers, are understood to have met the Chief Minister to take stock of the situation and decided to force the pace for immediate re-structuring of the Ministry." ಅಂದರೆ ಅದರ ಅರ್ಥ ಈಗ ಇರತಕ್ಕಂಥ ಸರ್ಕಾರದಲ್ಲಿ ಇಮೇಜ್ ಇಲ್ಲ, ಅನಾನುಭವದ ಮಿನಿಸ್ಟರ್ ಇದ್ದಾರೆ ಎಂಬುದು ಇದೆ. ನಿಮ್ಮ ಜನರೇ ಕೊಟ್ಟಿರುವ ಮೆಮೊರೆಂಡಮ್‌ನಲ್ಲಿ ಹೇಳಿರುವುದನ್ನು ನಿಮ್ಮ ಮುಂದಿಡುತ್ತೇನೆ. ಅವರ ಪಕ್ಷದ ಶಾಸಕರೇ ಇವೊತ್ತಿನ ದಿವಸ ಗೌವರ್ನ್‌ಮೆಂಟಿಗೆ ಇಮೇಜ್ ಇಲ್ಲ, ಎಂದು ಹೇಳಿದಾಗ ಅವರು ಯಾವ ಬಾಯಿಂದ ಸಮರ್ಥನೆ ಮಾಡಿದರೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರು ರಾಜಕೀಯವಾಗಿ ಹೇಳಿರಬೇಕೋ ಹೊರತು ಇವರು ಮಾಡಿರತಕ್ಕಂಥ ಸಾಧನೆಯಾದರೂ ಏನು. ತಾವು ಕೊಟ್ಟಂಥ ಆಶ್ವಾಸನೆಗಳು, ಈ ಭಾಷಣದಲ್ಲಿ ಹೇಳಿದಂಥ ಅನೇಕ ವಿಷಯಗಳನ್ನು ಇವೊತ್ತಿನದಿವಸ ಹೋಲಿಸಿ ನೋಡಿದರೆ ಖಂಡಿತವಾಗಿಯೂ ಏನನ್ನು ತಮ್ಮ ಸರ್ಕಾರದವರು ಮಾಡಿಲ್ಲ. ಆದಕ್ಕಾಗಿ ಇವೊತ್ತಿನ ದಿವಸ ಕೇಳುತ್ತೇನೆ, ಬರಗಾಲದ ಬಗ್ಗೆ ಈಗಾಗಲೇ ಮಾನ್ಯ ವೀರಪ್ಪಮೊಯಿಲಿಯವರು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಸದನದ ಒಂದು ಲೆಜಿಸ್ಲೇಟರ್ ಕಮಿಟಿಯನ್ನು ಹಿಂದೆ ಮಾಡಿತ್ತು, ಅದರಲ್ಲಿ ಸುಮಾರು ೧೫ ಜನ ಶಾಸಕ ಮಿತ್ರರು ಇದ್ದರು. ನಾನು ಆ ಸಮಿತಿಯ ಚೇರ್‌ಮನ್ ಆಗಿ ಅನೇಕ ಕಡೆ ನಾವೆಲ್ಲರೂ ಸುತ್ತಾಡಿ ಒಂದು ವರದಿಯನ್ನು ಸದನಕ್ಕೆ ಸಲ್ಲಿಸಿದ್ದೆವು. ಆ ವರದಿಯಲ್ಲಿ ಸ್ಪಷ್ಟಪಡಿಸಿದ್ದೇವೆ. ಕನಿಷ್ಟ ಪಕ್ಷ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ೪೪ ಲಕ್ಷ ಅಗ್ರಿಕಲ್ಚರ್ ಲೇಬರರ್ಸ್, ಮಾರ್ಜಿನಲ್ ಫಾರ್ಮರ್ಸ್. ಸ್ಮಾಲ್ ಫಾರ್ಮರ್ಸ್ ಅವರಿಗೆ ಕೆಲಸ ಒದಗಿಸಿಕೊಡಬೇಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ. ಆದರೆ ಕನಿಷ್ಟ ೧೦ ಜನರಿಗೆ ಆದರೂ ಕೆಲಸ ಕೊಡಿಸಬೇಕಾಗುತ್ತದೆ ಎಂದು ಹೇಳಿ ರೆಕಮೆಂಡೇಷನ್ ಮಾಡಿದ್ದೆವು, ಆ ಯಾವ ರೆಕಮೆಂಡೇಷನ್ ಕೂಡ ಈವತ್ತಿನ ದಿವಸ ಇವರು ಗಮನಕ್ಕೆ ತೆಗೆದುಕೊಂಡಿಲ್ಲ. ಕೇವಲ ೪ ಲಕ್ಷ ಜನರಿಗೆ ಕೆಲಸ ಕೊಟ್ಟು ಬಹಳ ತೃಪ್ತಿಕರವಾಗಿ ಈ ಒಂದು ಸಮಸ್ಯೆಯನ್ನು ಬಗೆಹರಿಸಿದ್ದೇವೆಂದು ಫೈಲಿನಲ್ಲಿ ಹೇಳಿದ್ದಾರೆ. ಪದೇ ಪದೇ ಅನೇಕ ಜನ ಮಾನ್ಯ ಸದಸ್ಯರು ಇದನ್ನು ಸಮರ್ಥಿಸಿದ್ದಾರೆ. ಅದರಲ್ಲೂ ಮಾನ್ಯ ಸದಸ್ಯರಾದ ಏಕಾಂತಯ್ಯನವರು ಇನ್ನೂ ಅನೇಕ ಜನ ಸದಸ್ಯರು ಬಹಳ ಚೆನ್ನಾಗಿ ಸಮರ್ಥಿಸಿದ್ದಾರೆ. ನಮ್ಮ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟು ಈ ಸದನದಲ್ಲಿ ಈಗಾಗಲೇ ಕೇಳಿಕೊಂಡಿದ್ದೇವೆ ಅನೇಕ ಕೆಲಸ ಕಾರ್ಯಗಳು ಇದರಲ್ಲಿ ಆಗಿಲ್ಲ. ನಾವು ನೋಡಿದ ಪ್ರಕಾರ ತೃಪ್ತಿಕರವಾಗಿ ಕೆಲಸ ಆಗಿಲ್ಲವೆಂದು ಹೇಳಿದ್ದೇವೆ. ಆದರೆ ಇವತ್ತು ಅವರು ಈ ಒಂದು ವಿಷಯದಲ್ಲಿ ಸಮರ್ಥನೆ ಮಾಡಿಕೊಂಡಿರುವುದು ನಮ್ಮ ದುರಾದೃಷ್ಟಕರವೆಂದು ಹೇಳಬೇಕಾಗುತ್ತದೆ ನಿಜವಾದ ಪರಿಸ್ಥಿತಿ ಏನು ಇದೆ ಆ ಪರಿಸ್ಥಿತಿಯ ಮೇಲೆ ಅವರು ವಿಚಾರ ಮಾಡಿ ಮಾತನಾಡಬಹುದಾಗಿತ್ತು. ಆದರೆ ಕೇವಲ ರಾಜಕೀಯ ದೃಷ್ಟಿಯಿಂದ ಇದನ್ನು ಸಪೋರ್ಟ್ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆಯೇ ಹೊರತು ಅಂಕಿಅಂಶಗಳನ್ನು ನೋಡಿದರೆ ಖಂಡಿತವಾಗಿಯೂ ಸಪೋರ್ಟ್ ಮಾಡುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ ಲಾ ಅಂಡ್ ಆರ್ಡರ್ ಸಮಸ್ಯೆ. ಇದರ ಬಗ್ಗೆ ಪ್ರತಿ ದಿವಸ ಈ ಸದನದಲ್ಲಿ ಪ್ರಶ್ನೆ ರೂಪದಲ್ಲಿ, ಗಮನ ಸೆಳೆಯುವ ಸೂಚನೆ ರೂಪದಲ್ಲಿ ಪ್ರಸ್ತಾಪವಾಗುತ್ತಿರುತ್ತದೆ. ಯಾವುದೇ ಒಂದು ಘಟನೆ ನಡೆಯಲಿ ಅದರ ಮೇಲೆ ಚರ್ಚೆ ನಡೆಯುತ್ತದೆ. ಆದರೆ ಒಂದು ಮಾತನ್ನು ನಾವು ನೆನಪಿನಲ್ಲಿಡಬೇಕು. ಏತಕ್ಕಾಗಿ ಇಂಥ ಘಟನೆಗಳು ಪ್ರತಿ ಸಾರಿ ಆಗುತ್ತದೆ. ಏತಕ್ಕಾಗಿ ಅವನ್ನು ಹತೋಟಿಯಲ್ಲಿಡಲು ಸಾಧ್ಯವಾಗುತ್ತಿಲ್ಲ ಎಂಬುದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಬೆಂಗಳೂರು, ತುಮಕೂರು, ಬಳ್ಳಾರಿ, ಕೋಲಾರ, ಮೈಸೂರು, ಕೊಡಗು, ಹೀಗೆ ಯಾವುದೇ ಜಿಲ್ಲೆಯನ್ನು ತೆಗೆದುಕೊಳ್ಳಿ ನೂರಾರು ಈ ರೀತಿಯ ಘಟನೆಗಳು ಆಗುತ್ತಿರುತ್ತವೆ. ವಿಶೇಷವಾಗಿ ಎಲ್ಲಿ ಮೈನಾರಿಟೀಸ್ ಇದ್ದಾರೆ, ಅಂಥ ಕಡೆ ಇಂಥ ಘಟನೆಗಳು ಜಾಸ್ತಿಯಾಗುತ್ತಿವೆ. ಎಲ್ಲಿಯಾದರೂ ಒಂದು ಕಡೆ ಘಟನೆ ಆದ ಕೂಡಲೇ ಏಕೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬಾರದು? ಏತಕ್ಕಾಗಿ ಆ ಬಗ್ಗೆ ಯೋಚನೆ ಮಾಡಿ ಮುಂದೆ ಈ ರೀತಿ ಆಗದಂತೆ ಏತಕ್ಕೆ ಮಾಡಬಾರದು? ಅದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ಇದಲ್ಲದೆ, ತಮ್ಮ ಗಮನಕ್ಕೆ ಇನ್ನೊಂದು ವಿಚಾರವನ್ನು ತರಬೇಕಾದರೆ, ಮೊನ್ನೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನ ಚುನಾವಣೆಗಳು ನಡೆದವು. ಆ ಚುನಾವಣೆಗಳ ಬಗ್ಗೆ ಹೇಳುತ್ತಾ, ದೊಡ್ಡ ಕ್ರಾಂತಿಯನ್ನೇ ಈ ದೇಶದಲ್ಲಿ ಮಾಡಿದ್ದೇವೆ, ಹಿಂದೆಂದೂ ಇಂಥ ಚುನಾವಣೆಗಳು ನಡೆದಿರಲಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಐತಿಹಾಸಿಕ ಚುನಾವಣೆ ನಡೆದಿದೆ, ದೊಡ್ಡ ಕ್ರಾಂತಿ ಸಮಾಜದಲ್ಲಿ ಆಗಿದೆ, ಇದು ನಮಗೆ ಹೆಮ್ಮೆಯ ಸಂಗತಿ ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದಾರೆ. ಎಷ್ಟರ ಮಟ್ಟಿಗೆ ತಾವು ಈ ಚುನಾವಣೆಗಳನ್ನು ಮಾಡಿದ್ದೀರಿ ಚುನಾವಣೆಗೆ ಸಂಬಂಧಪಟ್ಟ ಹಾಗೆ ಹೆಗಡೆಯವರು ಒಂದು ಪುಸ್ತಕವನ್ನು ಬರೆದಿದ್ದಾರೆ, ಮತ್ತು ಅದನ್ನು ತಮ್ಮ ಪಕ್ಷದ ವತಿಯಿಂದ ಪ್ರಕಟ ಮಾಡಿದ್ದಾರೆ. Published by Karnataka State Janata Party, Bangalore. The title is Electoral Reforms Lack of Political will. ಅದರಲ್ಲಿ ಅವರು ಏನು ಹೇಳುತ್ತಾರೆ ಎಂಬುದನ್ನು ನೋಡೋಣ. ಅದೇ ರೀತಿ ಡಿಪಿಎಆರ್. ನಿಂದ ಒಂದು ಗೈಡ್‌ಲೈನ್ಸ್ ಇಷ್ಯೂ ಮಾಡಿದ್ದಾರೆ. ಅದರಲ್ಲಿ ಏನಿದೆ ಎಂದರೆ

"1) The Ministers shall not combine their official visit with electioneering work and shall not also make use of official machinery or personnel during electioneering work.

2) Government transport including official aircraft, vehicles, machinery and personnel shall not be used for furtherance of the interest of the Party in power.

3) Public places such as Maidans etc., for holding election meetings and use of helipads for air flights in connection with the elections shall not be monopolised by itself. Other Parties and candidates shall be allowed the use of such places and facilities on the same terms and conditions on which they are used by the party in power.

4) The issue of advertisement at the cost of the public exchequer in the newspapers and other media and the misuse of the official mass-media during the election period, of partisan coverage of political influence and publicity regarding achievements with a view to furthering the prospects of Party in power shall be scrupulously avoided.

5) Ministers and other authorities shall not sanction; grants, payments out of discretionary funds from the time

elections are announced by the Commission. From the time the elections are announced by the Commission, Ministers and other authorities shall not announce any financial grants in any form or promises thereof or lay foundation stones etc., of projects or schemes of any kind or make any promises for construction of roads provisions of drinking water facilities etc.''

ಈ ರೀತಿಯಾಗಿ ಅವರೇ ಸ್ವತಃ ಡಿ.ಪಿ.ಎ.ಆರ್.ನಿಂದ ೨೯ನೇ ಜನವರಿ ೧೯೮೭ರಲ್ಲಿ ಇಷ್ಯೂ ಮಾಡಿದ್ದಾರೆ. ಈ ಒಂದು ಇನ್‌ಸ್ಟ್ರಕ್ಷನ್ ಪ್ರಕಾರ ಇವೊತ್ತಿನ ದಿವಸ ತಾವು ನಡೆದುಕೊಂಡಿದ್ದೀರಾ? ತಾವು ಬರೆದಂಥ ಪುಸ್ತಕ, ಮುಖ್ಯಮಂತ್ರಿಗಳು ಕೊಟ್ಟಂಥ ಆದೇಶದಂತೆ ನಡೆದುಕೊಂಡಿದ್ದೀರಾ? ಮತ್ತು ಎರಡನೆಯ ಚಾಪ್ಟರ್‌ನಲ್ಲಿ ಸ್ಪಷ್ಟವಾಗಿ ಯಾವ ರೀತಿಯಾಗಿ ಫೇರ್ ಎಲೆಕ್ಷನ್ ಆಗಬೇಕು, ಯಾವ ರೀತಿಯಾಗಿ ನಾವೆಲ್ಲರೂ ನಡೆದುಕೊಳ್ಳಬೇಕು ಎಂದು ಹೆಡ್ ಲೈನ್ಸ್ ಕೊಟ್ಟಿದ್ದಾರೆ. ಫ್ರೀ ಅಂಡ್ ಫೇರ್ ಎಲೆಕ್ಷನ್ ಎಂದು ಅದರಲ್ಲಿ ಏನು ಹೇಳಿದ್ದಾರೆ ಅದನ್ನು ಎರಡನೇ ಚಾಪ್ಟರ್‌ನಲ್ಲಿ ಪುನಃ ಸಮರ್ಥನೆ ಮಾಡಿಕೊಂಡು ಹೇಳಿದ್ದಾರೆ. ಮೊನ್ನೆ ಚುನಾವಣೆಯಲ್ಲಿ ಹೆಲಿಕಾಪ್ಟರ್ ಯೂಸ್ ಮಾಡಬಾರದು ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಆದರೆ ನಮ್ಮ ಗುಲ್ಬರ್ಗಕ್ಕೆ ಬರಬೇಕಾದರೆ ಹೆಲಿಕಾಪ್ಟರ್‌ನಲ್ಲಿ ಬಂದರು. ಗುಲ್ಬರ್ಗದಿಂದ ಜೇವರ್ಗಿಗೆ ೨೫ ಮೈಲಿ ಕಾರ್‌ನಲ್ಲಿ ಹೋಗಿ ಪುನಃ ಹೆಲಿಕಾಪ್ಟರನ್ನು ಜೇವರ್ಗಿಗೆ ತರಿಸಿಕೊಂಡು ಪುನಃ ಬಳ್ಳಾರಿಗೆ ಹೋದರು. ಅಂದರೆ '' ಶಾಸ್ತ್ರ ಹೇಳೋಕೆ, ಬದನೆಕಾಯಿ ಉಣ್ಣೋಕೆ '' ಎಂದು ನಮ್ಮ ಹೈದರಾಬಾದ್ ಕರ್ನಾಟಕದ ಕಡೆ ಹೇಳುತ್ತಾರೆ, ಹಾಗೆ ಹೇಳುವುದೇ ಒಂದು. ಮಾಡುವುದೇ ಒಂದು. ಈ ರೀತಿಯಾಗಿ ಇನ್‌ಸ್ಟ್ರಕ್ಷನ್ ಕೊಟ್ಟು ನಿಮ್ಮದೇ ಗೌರ್ನಮೆಂಟ್ ಆರ್ಡರ್ ಹೊರಡಿಸಿ ಅಫಿಷಿಯಲ್ ಮೆಷಿನರಿ ಮಿಸ್‌ಯೂಸ್ ಮಾಡಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ —ಆದಕ್ಕೆ ಪಾರ್ಟಿಯಿಂದ ಹಣ ಕೊಡುತ್ತಿದ್ದೇವೆ. ಸರ್ಕಾರದಿಂದ ಹಣ ಕೊಡುವುದಿಲ್ಲ. ಬೇಕಾದರೆ ತರಿಸಿ ನೋಡಿ. ನೀವು ಮಾಡಿದ್ದೆಲ್ಲಾ ನಮಗೆ ಹೇಳುವುದಕ್ಕೆ ಬರಬೇಡಿ. ಇದಕ್ಕೆಲ್ಲಾ ಪಕ್ಷದಿಂದ ಹಣ ಕೊಡುತ್ತಿದ್ದೇವೆ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಯವರು ಬಂದು ಹೇಳಲಿ. ಯಾವ ಪಾರ್ಟಿಯಿಂದ ಹಣ ಕೊಡುತ್ತೀರಿ ಎಂಬುದನ್ನು ಅವರು ಹೇಳಲಿ. ಉತ್ತರ ಕೊಡಬೇಕಾದರೆ ಮುಖ್ಯಮಂತ್ರಿಗಳು ಇದನ್ನು ಹೇಳಲಿ. ಅಥವಾ ಅವರ ಪರವಾಗಿ ನೀವೇ ಉತ್ತರ ಕೊಡಿ. ನಾನು ಹೇಳುವುದೇನೆಂದರೆ ನೀವೇ ಪುಸ್ತಕ ಪ್ರಿಂಟ್ ಮಾಡಿ, ಲಕ್ಷಾಂತರ ಪುಸ್ತಕಗಳನ್ನು ಹಂಚಿ, ಜಿ.ಒ. ಹೊರಡಿಸಿ ಅದರ ಪ್ರಕಾರ ನಡೆದುಕೊಂಡಿರೇನು? ಪಾರ್ಟಿಯಿಂದ ಅದಕ್ಕೆ ಹಣ ಕೊಟ್ಟಿದ್ದೇವೆಂದು ಏನು ಹೇಳುತ್ತೀರಿ ಅದರ ಬಗ್ಗೆ ಸದನದ ಮುಂದೆ ಇಡಿ, ನೋಡುತ್ತೇವೆ. ಹೆಲಿಕ್ಯಾಪ್ಟರ್‌ನಲ್ಲಿ ಬಂದು ಅದೇ ಸಂದರ್ಭದಲ್ಲಿ ಎಲೆಕ್ಷನ್ ಕೆಲವೇ ದಿವಸ ಇರುವಾಗ ಬಿಜಾಪುರಕ್ಕೆ ಹೋಗಿ ಲಿಫ್ಟ್ ಇರಿಗೇಷನ್‌ಗೆ ಫೌಂಡೇಷನ್ ಹಾಕಿದ್ದೀರಿ. ನಿಮ್ಮ ಜಿ. ಒ. ಪ್ರಕಾರ, ನಿಮ್ಮ ಗೈಡ್‌ಲೈನ್ ಪ್ರಕಾರ ನಡೆದುಕೊಳ್ಳದೇ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಹೇಳುತ್ತೀರಿ. ನೀವೇ ಹೇಳಿದ್ದೀರಿ. ನಿಮ್ಮ ಪಕ್ಷದ ಸರ್ಕಾರವೇ ಇದನ್ನು ಮಾಡಿದ್ದುದು.

ಶ್ರೀ ಆರ್. ಎಲ್. ಜಾಲಪ್ಪ.—ಇವೊತ್ತು ಪತ್ರಿಕೆಯಲ್ಲಿ ಬಂದಿದೆ. ಪ್ರಧಾನಿಯವರು ಆಂಧ್ರ ಪ್ರದೇಶದಲ್ಲಿ ಏನೇನು ಭರವಸೆ ಕೊಟ್ಟಿದ್ದಾರೆ ಎನ್ನುವುದೂ ಬಂದಿದೆ. ಅಲ್ಲಿ ಮಾರ್ಚಿ ೧೦ನೇ ತಾರೀಖು ಎಲೆಕ್ಷನ್ ನಡೆಯುತ್ತಿದೆ. ಆದರೂ ಪ್ರಧಾನಿಯವರು ಭರವಸೆಗಳನ್ನು ಕೊಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಬೇರೆ ಕಡೆ ಏನು ನಡೆಯುತ್ತದೆ ಅದನ್ನು ನೋಡಿಕೊಂಡು ಆಡಳಿತ ಮಾಡುತ್ತೀರಾ? ನಿಮಗೆ ಶಾಸ್ತ್ರ ಹೇಳಲು ಯಾರು ಹೇಳಿದರು? ಏತಕ್ಕೆ ಜಿ.ಒ. ಹೊರಡಿಸಬೇಕಾಗಿತ್ತು? ಈ ರೀತಿಯ ದೊಡ್ಡಸ್ತಿಕೆ ಏಕೆ ಬೇಕಾಗಿತ್ತು? ಇದನ್ನು ಒಂದು ಕಡೆ ಹೇಳುತ್ತೀರಿ, ಆದರೆ ಆ ರೀತಿ ಏತಕ್ಕೆ ನಡೆದುಕೊಳ್ಳುವುದಿಲ್ಲ? ಈ ಮುಖ್ಯವಾದ ಪ್ರಶ್ನೆ ನನ್ನದು. ಒಂದು ಕಡೆ ಪುಸ್ತಕದಲ್ಲಿ ಏನು ಹೇಳುತ್ತೀರೋ ಅದರ ಪ್ರಕಾರ ಇವೊತ್ತಿನ ದಿವಸ ನಡೆದುಕೊಳ್ಳುವುದಿಲ್ಲ. ಅನೇಕ ಕಡೆ ಫೌಂಡೇಷನ್ ಸ್ಟೋನ್ ಹಾಕಿದ್ದೀರಿ. ರೋಡ್ಸ್ ಮಾಡುವುದಕ್ಕೆ ಇನ್‌ಸ್ಟ್ರಕ್ಷನ್

ಕೊಟ್ಟಿದ್ದೀರಿ. ಎಲೆಕ್ಟ್ರಿಸಿಟಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೀರಿ. ರಾತ್ರೋರಾತ್ರಿ ಬೋರ್‌ವೆಲ್‌ಗಳನ್ನು ಮಾಡಿದ್ದೀರಿ. ಅದರ ಜೊತೆಯಲ್ಲಿ ಲಕ್ಷಾಂತರ ರೂಪಾಯಿಗಳ ಸೀರೆ ಕುಪ್ಪಸವನ್ನು ಹಂಚಿದ್ದೀರಿ. ನಾರ್ಮಲ್ ಪೀರಿಯಡ್‌ನಲ್ಲಿ ಏನು ಹಂಚಬೇಕಾಗಿತ್ತೋ ಅದನ್ನು ಸ್ಟಾಕ್ ಮಾಡಿಕೊಂಡು ಆ ಪೀರಿಯಡ್‌ನಲ್ಲಿ ವ್ಯವಹಾರ ಮಾಡಿದ್ದೀರಿ. ಅಂದರೆ ನೀವು ಕೊಟ್ಟಂಥ ಗೈಡ್‌ಲೈನ್ಸನ್ನು ನೀವೇ ಫಾಲೋ ಮಾಡಿಲ್ಲ. ಆದ್ದರಿಂದ ಏನು ನೈತಿಕ ಹಕ್ಕು ನಿಮಗಿದೆ? ಫೇರ್ ಎಲೆಕ್ಷನ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಏನು ನೈತಿಕ ಹಕ್ಕಿದೆ ನಿಮಗೆ? ತಾವೇ ಕೊಟ್ಟಂಥ ಗೈಡ್‌ಲೈನ್ಸ್ ಮತ್ತು ಆದೇಶವನ್ನು ಪರಿಪಾಲನೆ ಮಾಡದಂಥ ಸರ್ಕಾರ ಮತ್ತು ಮುಖ್ಯ ಮಂತ್ರಿಗಳಿಗೆ ಏನನ್ನಬೇಕು ಎನ್ನುವುದು ನಿಮಗೆ ಬಿಟ್ಟಿದ್ದುದು. ಎರಡನೆಯದಾಗಿ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ಸಾಕಷ್ಟು ದೌರ್ಜನ್ಯಗಳನ್ನು ಅನೇಕ ಬಡವರ ಮೇಲೆ ಮತ್ತು ವಿಶೇಷವಾಗಿ ವೀಕರ್ ಸೆಕ್ಷನ್ ಮೇಲೆ ಮಾಡಿದ್ದಾರೆ. ಅದರಲ್ಲೂ ಕೂಡ ಪೋಲೀಸ್ ಅಧಿಕಾರಿಗಳು, ರಿಟರ್ನಿಂಗ್ ಆಫೀಸರ್ಸ್, ತಹಸೀಲ್ದಾರ್ ಇವರೆಲ್ಲರೂ ಸೇರಿ ಆವತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ದಬ್ಬಾಳಿಕೆ ನಡೆಸಿ ಒತ್ತಡ ತಂದು ಬಡವರು ಏನು ನಾಮಿನೇಷನ್ಸ್ ಹಾಕಿದ್ದರೋ ಅದನ್ನು ವಿತ್‌ಡ್ರಾ ಮಾಡಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತು ಕೆಲವು ಕಡೆ ಅವರಿಗೆ ಹೊಡಿದಿದ್ದಾರೆ. ಅವರ ಮನೆಗೆ ಬೆಂಕಿ ಹಚ್ಚತಕ್ಕ ಕೆಲಸವನ್ನೂ ಕೂಡ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಹೊಸಪೇಟೆ ತಾಲ್ಲೂಕಿನ ಜಡಿಗನಹಳ್ಳಿ ಮಂಡಲ್ ಪಂಚಾಯತಿ ವ್ಯಾಪ್ತಿಗೆ ಬರತಕ್ಕ ಒಂದು ಈ ಗ್ರಾಮದಲ್ಲಿ ೧೩೧ ಮತಗಳು ಇದ್ದವು. ಬೆಳಿಗ್ಗೆ ೮ ಗಂಟೆಗೆ ಪೋಲಿಂಗ್ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ೧೩೧ ಓಟುಗಳನ್ನು ಹಾಕಿಕೊಂಡು ಕ್ಲೋಸ್ ಮಾಡಿಕೊಂಡು ಹೋಗಿದ್ದಾರೆ. ನೀವೂ ಬಡವರಿಗೆ ಟಿಕೆಟ್‌ನ್ನು ಕೊಡಿ, ಆಗ ನಿಮಗೂ ಗೊತ್ತಾಗುತ್ತದೆ. ಇಂಪಾರ್ಷಿಯಲ್ಲಾಗಿ ಚುನಾವಣೆಯನ್ನು ಮಾಡಿ, ನಿಮ್ಮವರಾದರೂ ಗೆಲ್ಲಲಿ, ನಮ್ಮವರಾದರೂ ಗೆಲ್ಲಲಿ. ಅದನ್ನು ನಾನು ಹೇಳುತ್ತಿಲ್ಲ. ಆದರೆ ಪ್ರಾಮಾಣಿಕವಾಗಿ ಚುನಾವಣೆಯನ್ನು ಮಾಡದಿದ್ದರೆ ಒಳ್ಳೆಯ ಜನ ಚುನಾವಣೆಯಲ್ಲಿ ಗೆದ್ದು ಬರುವುದಕ್ಕಾಗುವುದಿಲ್ಲ. ಇದನ್ನು ನೀವುಗಳೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಧಿಕಾರ ಇದೆ ಎಂದು ಹಣ ಕೊಟ್ಟು, ದಬ್ಬಾಳಿಕೆ ಮಾಡುವಂತಹ ಈ ರೀತಿಯ ಕೆಲಸಗಳಿಗೆ ಕೈಹಾಕಿದ್ದರಿಂದ ಮುಂದಿನ ಪೀಳಿಗೆಯನ್ನು ಹಾಳು ಮಾಡುತ್ತಿದ್ದೀರಿ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾವು ಮಾಡಿದ್ದರಿಂದ ಈ ೧೦ ವರ್ಷಗಳಲ್ಲಿ ಹಿಂದುಳಿದ ವರ್ಗದ ಜನ ತಲೆ ಎತ್ತಿ ನಿಲ್ಲುವುದಕ್ಕೆ ಆಗುತ್ತಿರಲಿಲ್ಲ, ಅದು ಶ್ರೀಮತಿ ಇಂದಿರಾ ಗಾಂಧಿಯವರ ಪುಣ್ಯದಿಂದ ಬಂದಿದ್ದೀರಿ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಿಮ್ಮ ಜನ ಚುನಾವಣೆ ಕಾಲದಲ್ಲಿ ಮಾಡಿದಂತಹ ಅನಾಹುತಗಳು ನಮ್ಮಲ್ಲಿ ಸಾವಿರಾರು ನಿದರ್ಶನಗಳು ಇವೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಬೇರೆ ಏನಾದರೂ ವಿಷಯ ಹೇಳಲಿ. ಹೇಳಿದ್ದನ್ನೇ ಹೇಳುವುದು ಬೇಡ.

(ಗೊಂದಲ)

ಶ್ರೀ ಎಂ. ರಘುಪತಿ.—ಶ್ರೀಮತಿ ಇಂದಿರಾಗಾಂಧಿಯವರಲ್ಲ ಬ್ಯಾಕ್‌ವರ್ಡ್ ಕ್ಲಾಸ್‌ನವರು ಮೇಲೆ ಬರುವಂತೆ ಮಾಡಿದ್ದುದು. ಆ ರೀತಿ ಮಾಡಿದ್ದು ಶ್ರೀಮಾನ್ ದೇವರಾಜ ಅರಸು ರವರು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಬಿಹಾರ್‌ನಲ್ಲಿ ಏನಾಯಿತು ? ಏಕೆ ಸ್ವಾಮಿ ಹೇಳುತ್ತಾರೆ.

ಶ್ರೀ ಕೆ. ಮಲ್ಲಪ್ಪ.—ಜಂಗು ಹಿಡಿದಿದ್ದವರನ್ನು ಮೇಲಕ್ಕೆತ್ತಿ, ಕೊಳೆ ತೆಗೆದು ಪೆಟ್ರೋಲ್ ಹಾಕಿ ತೊಳೆದು ಬೆಳಕಿಗೆ ತಂದವರು ಶ್ರೀಮಾನ್ ದೇವರಾಜ ಅರಸು ರವರು ಅದನ್ನು ಶ್ರೀಮಾನ್ ಖರ್ಗೆಯವರು ಮರೆತಿದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ದೇವರಾಜ ಅರಸು ರವರನ್ನು ಮಾಡಿದವರು ಯಾರು ? ಅದು ನಿಮಗೆ ಯಾರಿಗಾದರೂ ಗೊತ್ತೆ ? ನೀವೇ ?

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—೧೯೭೨ರಲ್ಲಿ ದೇವರಾಜ್ ಅರಸುರವರನ್ನು ಕರೆದುಕೊಂಡು ಬಂದವಳು ನಾನು. ನಿಮಗೇನು ಗೊತ್ತು ?

(ಗೊಂದಲ)

ಶ್ರೀ ವೀರಣ್ಣ.—ಶ್ರೀಮತಿ ಇಂದಿರಾಗಾಂಧಿಯವರಿಗೆ ರಾಜಕೀಯ ಪುನರ್ಜನ್ಮ ಕೊಟ್ಟವರು ಶ್ರೀಮಾನ್ ದೇವರಾಜ್ ಅರಸು, ಅದನ್ನು ಶ್ರೀಮತಿ ನಾಗರತ್ನಮ್ಮನವರು ಮರೆಯಬಾರದು.

ಶ್ರೀ ಕೆ.ಎಚ್. ಪಾಟೀಲ್.—ಸತ್ತವರ ಬಗ್ಗೆ ಏಕೆ ಇಷ್ಟೊಂದು ವಾದ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅವರನ್ನು ಸೃಷ್ಟಿ ಮಾಡಿದವರು ಶ್ರೀಮತಿ ಇಂದಿರಾ ಗಾಂಧಿಯವರು. ಅವರು ಇವರನ್ನು ಸೃಷ್ಟಿ ಮಾಡಿದ್ದರೆ ಒಂದು ಚೂರು ಉಪಕಾರ ಮಾಡಿರಬಹುದು.

ಶ್ರೀ ಎಂ. ರಘುಪತಿ.—ಫರೀದಾಬಾದ್ ಎ.ಐ.ಸಿ.ಸಿ. ಅಧಿವೇಶನದಲ್ಲಿ ಭಾಗವಹಿಸಿದವನು ನಾನು.

ಶ್ರೀ ಕೆ.ಎಚ್. ಪಾಟೀಲ್.—ಶ್ರೀ ದೇವರಾಜ ಅರಸುರವರನ್ನು ಮೊದಲು ಕರೆದು ಕೊಂಡು ಬಂದು ಶ್ರೀಮತಿ ಇಂದಿರಾಗಾಂಧಿಯವರಿಗೆ ಪರಿಚಯ ಮಾಡಿಸಿ, ದೇವರಾಜ ಅರಸು ರವರನ್ನು ಮೊದಲ ಕನ್ವೀನರ್ ಆಗಿ ಮಾಡಿಸಿರತಕ್ಕಂತಹದ್ದು ಶ್ರೀಮತಿ ನಾಗರತ್ನಮ್ಮನವರಿಗೆ ಹೋಗುತ್ತದೆ. ಮುಂದೆ ಜಾಲಪ್ಪನವರು ಹಾಗೂ ರಘುಪತಿಯವರು ಅವರ ಜೊತೆಯಲ್ಲಿದ್ದಿರಬೇಕು. ಆಗ ಶ್ರೀಮಾನ್ ಜಾಲಪ್ಪನವರು ಹಾಗೂ ಶ್ರೀ ರಘುಪತಿಯವರು ಎಲ್ಲರೂ ಕಾಂಗ್ರೆಸ್ ಪಕ್ಷದಲ್ಲಿದ್ದವರೇ. ಕಾಂಗ್ರೆಸ್ ತತ್ವವನ್ನು ಅನುಸರಿ ಮಾಡಿದ್ದಾರೆ. ಆಗ ನೀವೂ ಅವರ ಜೊತೆಯಲ್ಲೇ ಇದ್ದವರು. ಹಿಂದುಳಿದ ವರ್ಗದವರಿಗೆ ಪ್ರೋತ್ಸಾಹ ಕೊಡಬೇಕೆಂದು ಕಾಂಗ್ರೆಸ್ ಪಕ್ಷದಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಅದನ್ನು ಶ್ರೀಮತಿ ಇಂದಿರಾಗಾಂಧಿಯವರ ಮುಖಾಂತರ ಶ್ರೀಮಾನ್ ದೇವರಾಜ ಅರಸುರವರು ತಂದಿದ್ದಾರೆ. ಅದನ್ನು ಪ್ರೋತ್ಸಾಹ ಮಾಡಿ. ಅದಕ್ಕೆ ಇಷ್ಟೊಂದು ವಾದ ಏಕೆ ?

ಶ್ರೀ ಆರ್.ಎಲ್. ಜಾಲಪ್ಪ.—ಇದು ಸಿಟ್ಟಿನ ಪ್ರಶ್ನೆ ಅಲ್ಲ. ಗೌರವ ಸಿಕ್ಕಿದ್ದರೆ ಅದಕ್ಕೆ ದೇವರಾಜ ಅರಸರ ವ್ಯಕ್ತಿತ್ವ ಕಾರಣ. ಕಾಂಗ್ರೆಸ್‌ನವರ ಧೋರಣೆ ಬಗ್ಗೆ ಹೇಳುವುದಾದರೆ, ಇವತ್ತು ಗುಜರಾತಿನಲ್ಲಿ, ಬಿಹಾರದಲ್ಲಿ ಏನಾಗಿದೆ ? ಬಿಹಾರದಲ್ಲಿ ಹಿಂದುಳಿದವರಿಗೆ ರೆಪ್ರಸೆಂಟೇಷನ್ ಕೊಡಬೇಕೆಂದು ಹೇಳಿದಾಗ ಶ್ರೀಮತಿ ಇಂದಿರಾಗಾಂಧಿಯವರು ಮನೆಗೆ ಕಳುಹಿಸಿದರು. ದಿವಂಗತ ದೇವರಾಜ ಅರಸ್ ಅವರ ವ್ಯಕ್ತಿತ್ವದಿಂದ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಸ್ಥಾನ ಸಿಕ್ಕಿದೆಯೇ ವಿನಹ ಇನ್ನೇನೂ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನನ್ನ ಮಾತನ್ನು ಅವರು ಪೂರ್ತಿಯಾಗಿ ಕೇಳಿ ಮಾತನಾಡದೇ ಮೊದಲೇ ಎದ್ದು ಮಾತನಾಡಿದರೆ ಹೇಗೆ ? ನಾನು ಹೇಳುವುದು ಏನೆಂದರೆ ೧೯೭೨ರಲ್ಲಿ ಏನು ಸ್ಪ್ಲಿಟ್ ಆಯಿತು ಅದರಲ್ಲಿ........ ದೇವರಾಜ ಅರಸ್ ಅವರು ಮಾಡಿದ್ದುದು ಅಲ್ಲ ಎಂದು ನಾನು ಹೇಳುವುದಿಲ್ಲ. ಅಂತಹ ಒಂದು ನಮಕ್ ಹರಾಮ್ ಕೆಲಸ ಮಾಡುವವನು ನಾನಲ್ಲ ನಾನು ಹೇಳುವುದೇನೆಂದರೆ ಯಾವಾಗ ಕಾಂಗ್ರೆಸ್ ಇಬ್ಭಾಗವಾಯಿತು. ಆಗ ಅನೇಕ ಪ್ರಗತಿಪರ ಕಾರ್ಯಕ್ರಮವನ್ನು ಶ್ರೀಮತಿ ಇಂದಿರಾಗಾಂಧಿಯವರು ಜಾರಿಗೆ ತಂದಾಗ ಅನೇಕ ಬಡವರಿಗೆ ಅದರ ಫಲ ಸಿಕ್ಕಿತು. ೧೯೬೯ರಲ್ಲಿ ಬಡವರು ಮತ್ತು ಕಮಿಟೆಡ್ ಜನ ಆ ಪಕ್ಷದಲ್ಲಿ ಸೇರಿದ ಮೇಲೆ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುವ ಅವಕಾಶ ಸಿಕ್ಕ ಮೇಲೆ, ಅದೇ ರೀತಿ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾದ ಮೇಲೆ ಅವರಿಗೂ ಕೂಡ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ಕೊಡತಕ್ಕ ಒಂದು ಟೀಮ್ ಸಿಕ್ಕ ನಂತರ ಈ ಕೆಲವು ಕಾರ್ಯಕ್ರಮಗಳು ನಮ್ಮಲ್ಲಿ ಬಂದವು. ಆಗ ಈ ಬ್ಯಾಕ್‌ವರ್ಡ್ ಕ್ಲಾಸ್ ರಿಪೋರ್ಟ್ ತೆಗೆದುಕೊಳ್ಳಲಾಯಿತು. ಇದೇ ಮುಖ್ಯಮಂತ್ರಿಗಳು ಹಿಂದೆಯೂ ಇದ್ದರು. ಮಾನ್ಯ ದೇವರಾಜ ಅರಸ್ ಅವರಿಗಿಂತ ಹಿಂದೆ ಇವರು ಜನರಲ್ ಸೆಕ್ರೆಟರಿಗಳಾಗಿ, ಹಣಕಾಸಿನ ಮಂತ್ರಿಗಳಾಗಿ ಲವ-ಕುಶ ಎಂದು ಬಹಳ ಹೆಸರನ್ನು ಪಡೆದವರಾಗಿದ್ದರು. ಆಗ ಈ ಕೆಲಸವನ್ನು ಮಾಡುವುದಕ್ಕೆ ಏಕೆ ಆಗಲಿಲ್ಲ ಎಂದು ಕೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಲವ ಈಗ ನಿಮ್ಮ ಹತ್ತಿರವೇ ಇದ್ದಾರೆ.

ಶ್ರೀ ಎಚ್. ಎಲ್, ತಿಮ್ಮೇಗೌಡ.—ಮಾನ್ಯ ರಾಮಕೃಷ್ಣ ಹೆಗ್ಡೆಯವರು ಏನು ಮಾಡಿದರು ಎಂದು ಕೇಳುತ್ತಾರೆ, ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ವೃದ್ಧಾಪ್ಯವೇತನವನ್ನು ಮೊಟ್ಟ ಮೊದಲ ಬಾರಿಗೆ ಜಾರಿಗೆ ತಂದದ್ದು ಕರ್ನಾಟಕದಲ್ಲಿ ಎಂದು ನಿಮಗೆ ತಿಳಿದಿರಬಹುದು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಏನಿವೆ ಅವಕ್ಕೆ ಅಸ್ತಿಭಾರ ಹಾಕಿದ್ದುದು ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ.

ಶ್ರೀ ಕೆ. ಎಚ್. ಪಾಟೀಲ್.—ಆಗ ನಿಜಲಿಂಗಪ್ಪನವರು ಯಾವ ಪಕ್ಷದಲ್ಲಿ ಇದ್ದರೋ ಆ ಪಕ್ಷದ ಕಾರ್ಯಾಚರಣೆ ಮಾಡಲೇಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಕೆ. ಎಚ್. ಪಾಟೀಲರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ರಾಮಕೃಷ್ಣ ಹೆಗಡೆಯವರು ಆಗ ಏನು ಕೆಲಸ ಮಾಡಿದರು ಎಂದು ಕೇಳಿದ್ದಕ್ಕೆ ಇದನ್ನೆಲ್ಲಾ ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗ ಬ್ಯಾಕ್‌ವರ್ಡ್ ಕ್ಲಾಸ್ ಜನರ ಬಗ್ಗೆ ಏನು ಮಾಡಿದರು ಎಂದು ನಾನು ಕೇಳಿದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ವೃದ್ಧಾಪ್ಯ ವೇತನವನ್ನು ಸಾಹುಕಾರರಿಗೆ ಕೊಡಲಾಗುತ್ತದೆಯೇ ? ಅದನ್ನು ಬಡವರಿಗೇ ಅಲ್ಲವೇ ಕೊಡುವುದು.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಖರ್ಗೆಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಏನು ಮಾಡಲಾಯಿತು ?

೧೧-೦೦ ಎ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.–ನಾನು ಹೇಳತಕ್ಕದ್ದು ಏನೆಂದರೆ ಅಂತಹ ವಾತಾವರಣವನ್ನು ಇವತ್ತಿನ ದಿವಸ ನಾವು ಕಾಣುತ್ತಿಲ್ಲ. ನೀವು ಹೇಳಿಕೊಳ್ಳಬಹುದು, ಏಕೆಂದರೆ ನಿಮ್ಮ ಪಕ್ಷ ಇದೆ. ಸ್ವಾಭಿಮಾನದಿಂದ ನಮ್ಮಲ್ಲೂ ಅದೇರೀತಿಯಾಗಿದೆ. ಎಂದು ಸಮರ್ಥನೆ ಮಾಡಿಕೊಳ್ಳಬಹುದು. ಆವಾಗ ಇದ್ದಂಥ ವಾತಾವರಣ ಇಲ್ಲದ ಕಾರಣ ಇವತ್ತಿನದಿವಸ ನೀವು ೩೨ ಪರ್ಸೆಂಟ್ ಜನರಿಗೆ ಬ್ಯಾಕ್ ವರ್ಡ್ ಕ್ಲಾಸ್ ಅನುಕೂಲತೆಯನ್ನು ಮಾಡಿಕೊಡಬೇಕಾಯಿತು. ಅಂತಹ ವಾತಾವರಣ ಇಲ್ಲದ ಕಾರಣ, ಆ ಒಂದು ಕಮಿಟ್‌ಮೆಂಟ್ ಇರುವ ಕಾರಣ ಎಲ್ಲರನ್ನು ಎ.ಬಿ.ಸಿ.ಡಿ. ಎಂದು ಕ್ಯಾಟಗರಿ ಮಾಡಿ ಇರತಕ್ಕಂಥ ರಿಜರ್ವೇಷನ್ ಅನ್ನು ಎಲ್ಲರಿಗೂ ಹಂಚುವುದಕ್ಕೆ ಹೋದುದ್ದು. ಈ ಕೆಲಸ ಮಾಡಲಿಕ್ಕೆ ಜನರು ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆಯೋ ಸಮರ್ಪಕವಾದ ಉತ್ತರ ಕೊಟ್ಟರೆ ನಾವು ಕೇಳಬಹುದು. ಯಾರುಯಾರಿಗೆ ಸಮಾಧಾನ ಮಾಡುವುದಕ್ಕೆ ಇದನ್ನು ಒಪ್ಪಿಕೊಂಡರೆ, ಖಂಡಿತವಾಗಿ ಇದರಿಂದ ನಿಜವಾಗಿ ಹಿಂದುಳಿದ ಸಮಾಜದವರು ಯಾರು ಇದ್ದಾರೆ, ಅವರಿಗೆ ದ್ರೋಹ ಆಗಿದೆ, ತೊಂದರೆಯಾಗಿದೆ ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಮಂಡಲ ಮತ್ತು ಜಿಲ್ಲಾಪರಿಷತ್‌ಗಳಲ್ಲಿ ನನ್ನ ಹತ್ತಿರ ಸುಮಾರು ಇಪ್ಪತ್ತು–ಇಪ್ಪತ್ತೈದು ಉದಾಹರಣೆಗಳು ಇವೆ, ನಾನು ಎಲ್ಲವನ್ನೂ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವುಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಶ್ರೀ ರಾಮಕೃಷ್ಣ ಹೆಗಡೆಯವರು ಒಂದು ಕಮಿಟಿಯನ್ನು ಮಾಡಿದ್ದರು. ಅದಕ್ಕೆ ಇಂತಹ ದೂರುಗಳು ಬಂದರೆ ನಿಷ್ಪಕ್ಷಪಾತವಾಗಿ ಬೇರೆ ಚುನಾವಣೆ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದು ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಒಂದು ವಾಚ್‌ಡಾಗ್ ಕಮಿಟಿ ಮಾಡಿದ್ದರು. ಅದಕ್ಕೆ ಎಲ್ಲರೂ ದೂರುಗಳನ್ನು ಸಲ್ಲಿಸಲಿಕ್ಕೆ ಹೇಳಿದರು. ಎಷ್ಟೋ ದೂರುಗಳು ಹೋದವು. ಅನೇಕ ದೂರುಗಳು ಮುಖ್ಯಮಂತ್ರಿಯವರಿಗೆ, ಗೃಹಸಚಿವರಿಗೆ, ಮತ್ತು ನಜೀರ್ ಸಾಬ್ ಅವರಿಗೆ ಕೊಟ್ಟಿದ್ದಾರೆ. ಇವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಒಂದುಕಡೆ ವಾಚ್‌ಡಾಗ್ ಕಮಿಟಿ ಮಾಡಿ ಪುಸ್ತಕದಲ್ಲಿಟ್ಟಿದ್ದಾರೆ. ಇನ್ನೊಂದು ಕಡೆ ಜನ ಖುದ್ದಾಗಿ ಅರ್ಜಿ ಕಳುಹಿಸಿದರೂ ಸಹ ಇಲ್ಲಿಯ ತನಕ ಏನೂ ಮಾಡಿಲ್ಲ, ಮೊನ್ನೆ ಮಾಲಗತ್ತಿ ವಿಷಯದಲ್ಲಿ ಹೇಳಿದೆವು. ಅದೇ ರೀತಿ ಇನ್ನೊಂದು ಕುಂದಕೂರು, ಅಲ್ಲಿಯೂ ಕೂಡ ಆಗಿದೆ. ಇಂತಹ ದಬ್ಬಾಳಿಕೆಗಳು ಅನೇಕ ಕಡೆಗಳಲ್ಲಿ ನಡೆದಿದೆ ಅದನ್ನು ಎದುರಿಸತಕ್ಕಂಥ ಶಕ್ತಿ ನಿಮಗೆ ಇನ್ನೂ ಬಂದಿಲ್ಲ. ಏನಾಗಿದೆ

ಎಂದರೆ, ಇವತ್ತು ಬಹುತೇಕವಾಗಿ, ಅವರ ಪಕ್ಷದಿಂದ ಕೆಲಸ ಮಾಡಿಕೊಂಡರೂ ಕೂಡ ಬಹಳ ಕಷ್ಟ ಇದೆ ಏಕೆ ಕಷ್ಟ ಇದೆ ಎಂದರೆ

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಎಲ್ಲಿ ಒತ್ತಡ ಇದೆ, ಯಾರ ಪ್ರಭಾವ ಹೆಚ್ಚಿದೆ, ಅಂತಹ ಮುಖಂಡರು ಏನಿದ್ದಾರೆ, ಅವರ ಕಾರಣದಿಂದ ಇವತ್ತಿನದಿವಸ ಈ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಜನರು ಏನಿದ್ದಾರೆ, ಅವರಿಗೆ ಏನು ಪ್ರಾತಿನಿಧ್ಯ ಸಿಗಬೇಕಿತ್ತೋ, ಅದ್ಯತೆ ಸಿಗಬೇಕಿತ್ತೋ, ರಾಜಕೀಯದಲ್ಲಾಗಲೀ. ಅಥವಾ ಆರ್ಥಿಕ ಕಾರ್ಯಕ್ರಮಗಳಲ್ಲಾಗಲೀ, ಆಗಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಬೇಗ ಮುಗಿಸಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಅರ್ಧಗಂಟೆ ಕಾಲ ಅವರ ಗಲಾಟೆಯಲ್ಲಿ ಕಳೆಯಿತು. ಈಗ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ, ಅದನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಏನು ೨೦ ಅಂಶಗಳ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಪಾಲಿಸಿದ್ದೇವೆ, ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕವು ೫ನೇ ಸ್ಥಾನವನ್ನು ಪಡೆದಿದೆ ಎನ್ನತಕ್ಕ ಮಾತನ್ನು ಹೇಳಲಾಗಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ನನಗನ್ನಿಸುತ್ತದೆ, ಕೌನ್ಸಿಲ್‌ನಲ್ಲಿ ಮಾತನಾಡುವಾಗ ಹೇಳಿದ್ದಾರೆ—

"Touching upon the criticism against the Government for its tardy progress in the implementation of 20-point economic programme Mr. Hegde claimed that according to the latest evaluation study by the Planning Commission pertaining to the period from April to November 1986. Karnataka was ranked 5th among all states. It is significant that among the first six states except for Himachal Pradesh none of the Congress-I states figured, he said mentioning that the first six states were Sikkim, Andhra Pradesh, Punjab, Himachal Pradesh, Karnataka and Tamil Nadu."

ಹೇಳುತ್ತೇನೆ. ಈಗ ಅಧ್ಯಕ್ಷರೇ, ಮಾಶಾಸನಗಳನ್ನು ಕೊಟ್ಟಿದ್ದೇವೆ ಎಂದು ಡಾ. ತಿಮ್ಮೇಗೌಡರು ಬಹಳ ಜೋರಾಗಿ ಹೇಳಿಕೊಂಡರು, ಶ್ರೀ ನಿಜಲಿಂಗಪ್ಪನವರ ಕಾಲದಿಂದ ಇದು ಪ್ರಾರಂಭವಾಗಿದ್ದು ಈಗ ವೃದ್ಧಾಪ್ಯವೇತನ ಜೊತೆಗೆ ವಿಧವಾ ಮಾಶಾಸನ ಮತ್ತು ಇನ್ನೂ ಅನೇಕ ಮಾಶಾಸನಗಳನ್ನು ಕೊಡುತ್ತಿದ್ದೇವೆ, ನಾವು ಇದನ್ನು ಮಾಡಿದ್ದೇವೆ ಎಂದು ಹೇಳಿದರು. ಆದರೆ ಆಕ್ಚುಯಲ್ ಆಗಿ ನೀವು ಎಷ್ಟು ವಿತರಣೆ ಮಾಡಿದ್ದದ್ದು ಎಂದರೆ ೧೯೮೧-೮೨ರಲ್ಲಿ ೬೯೯.೬ ಲಕ್ಷ ರೂಪಾಯಿಗಳು. ಇವರು ಈಗ ಮಾಡಿದ್ದುದು ಎಷ್ಟೆಂದರೆ ೧೨,೭೬೪ ಲಕ್ಷ ರೂಪಾಯಿಗಳು ಪರ್ಸೆಂಟೇಜ್ ಎಷ್ಟಾಯಿತು? ೫.೬೨ ಆದರೆ, ಆಗಿನದ್ದು ೬.೯ ಅಂದರೆ ೧ ಪರ್ಸೆಂಟ್‌ವಷ್ಟು ನೀವು ಹಿಂದೆ ಇದ್ದೀರಿ ಎಂದು ಆಯಿತು, ಇದರಿಂದ ಏನು ಸೂಚಿಸುತ್ತದೆ ಎಂದರೆ, ಬಡವರಿಗೆ ಸಹಾಯ ಮಾಡುವುದರಲ್ಲಿ ನಿಮ್ಮ ಟಾರ್ಗೆಟನ್ನು ನೀವು ಇನ್ನೂ ಮುಟ್ಟಿಲ್ಲ ಎಂದು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ವೃದ್ಧಾಪ್ಯವೇತನಗಳು ಯಾರು ಅರ್ಜಿ ಹಾಕಿರುತ್ತಾರೆ, ಅವರಿಗೆ ಸಿಗುತ್ತವೆ, ಅದನ್ನು ಹೆಚ್ಚು ಕಡಿಮೆ ಮಾಡುವುದು ನಮ್ಮ, ನಿಮ್ಮ ಕೈಯಲ್ಲಿ ಇದೆಯೇ?

ಅಧ್ಯಕ್ಷರು.—ಶ್ರೀ ಖರ್ಗೆಯುವರೇ, ತಾವು ಬೇಗ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಯಿತು, ಮುಗಿಸುತ್ತೇನೆ. ಇವೊತ್ತು ಶ್ರೀ ಜಾಲಪ್ಪನವರು ಬಹಳಷ್ಟು ಹೇಳಿಕೊಳ್ಳುತ್ತಾರೆ. ಸಹಕಾರ ಇಲಾಖೆಯಲ್ಲಿ ೧೯೮೧-೮೨ರಲ್ಲಿ ರೆವಿನ್ಯೂ ಅಂಡ್ ಎಕ್ಸಪೆಂಡಿ

ಚರ್ ೧೨.೯೭ ಇದ್ದರೆ ಇವರ ಕಾಲದಲ್ಲಿ ೩.೪೧ ಇದೆ. ೧೯೮೫-೮೬ರಲ್ಲಿ ೨.೬೪ ಇದೆ. ಅಗ್ರಿಕಲ್ಚರ್ ಅಲಾಯಡ್ ಸರ್ವಿಸ್‌ನಲ್ಲಿ ೧೯೮೧-೮೨ರಲ್ಲಿ ೧೩.೯೩ ಪರ್ಸೆಂಟ್ ಇದ್ದರೆ, ಈಗ ೧೩.೨೮ ಮತ್ತು ೧೯೮೫-೮೬ರಲ್ಲಿ ೧೨.೮೦ ಪರ್ಸೆಂಟ್ ಇದೆ. ಅಂದರೆ ಅಗ್ರಿಕಲ್ಚರ್‌ನಲ್ಲಿ ನೀವು ಮುಂದೆ ಹೋಗಿದ್ದೀರೋ ಅಥವಾ ಹಿಂದೆ ಬಂದಿರೋ ? ಈ ರೀತಿಯಾಗಿ ಹೇಳಿ ಮುಂದೆ ಅವರು ಏನು ಹೇಳುತ್ತಾರೆ ಎಂದರೆ, ಬಹಳಷ್ಟು ಸಾಧಿಸಿದ್ದೇವೆ ಎನ್ನತಕ್ಕ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ, ಯಾವಾಗಲೂ ಅಂಕಿಅಂಶ ಕೊಟ್ಟು ಕನ್ವಿನ್ಸ್ ಮಾಡುವುದರಲ್ಲಿ ಶ್ರೀ ಹೆಗಡೆಯವರು ಬಹಳ ತಜ್ಞರು, ೧೯೮೦-೮೧ರಲ್ಲಿ ಶ್ರೀ ವೀರಪ್ಪ ಮೊಯಿಲಿಯವರು ಒಂದು ಕೋಟಿರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ, ನಾವು ಒಂದು ಕೋಟಿ ೨೧ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತಾರೆ, ರಿಲೇಟಿವ್ ಎಕ್ಚುಯಲ್ ಪರ್ಸೆಂಟೇಜ್ ಬಗ್ಗೆ ಅವರು ಹೇಳುವುದಿಲ್ಲ. ಆಗ ಒಂದು ಕೋಟಿ ರೂಪಾಯಿಗಳು ಇರತಕ್ಕಂಥ ಕೆಲಸಕ್ಕೆ ಈಗ ಮಾಡಬೇಕೆಂದರೆ, ಸುಮಾರು ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳಾಗುತ್ತವೆ. ಅವರು ಪರ್ಸೆಂಟೇಜ್ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ಬರೀ ಅಂಕಿ ಸಂಖ್ಯೆಗಳನ್ನು ಮಾತ್ರ ಕೊಡುತ್ತಾರೆ.

"The figures with regard to Centrally-sponsored schemes in respect of budgetary provisions and actual expenditure.

Year	Budgetary provision	Actual expenditure
1983-84	Rs. 56.81 crores	Rs. 61.99 crores
1984-85	Rs. 94.11 crores	Rs. 78.81 crores
1985-86	Rs. 93.39 crores	Rs 92.55 crores

The figures for Centrally-planned schemes:

Year	Budgetary provision	Actual expenditure
1983-84	Rs. 31.18 crores	Rs. 29.56 crores
1984-85	Rs. 52.24 crores	Rs. 50.15 crores
1985-86	Rs. 50.28 crores	Rs. 52.94 crores'

ಅಂದರೆ ಈ ರೀತಿಯಾಗಿ ಅಂಕಿ ಸಂಖ್ಯೆಗಳನ್ನು ಕೊಡುತ್ತಾರೆ ಆದರೆ ನಿರ್ದಿಷ್ಟ ಸಾಧನೆ ಏನಾಯಿತು? 'ಪಿಕ್ಚರ್ ಆಫ್ ಕರ್ನಾಟಕ ಬಜೆಟ್' ೮೭-೮೭ ಇದು ಇತ್ತೀಚೆಗೆ ಬಂದದ್ದು. ಇನ್ನೂ ಅನೇಕ ಜನರ ಕೈ ಸೇರಿಲ್ಲ. ಬಹುಶಃ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದು ಅವರು ಪಬ್ಲಿಷ್ ಮಾಡಿದ್ದುದು, ಕರ್ನಾಟಕ ಸರ್ಕಾರದ ಡಾಕ್ಯುಮೆಂಟ್ ಇದು, ನಮ್ಮದಲ್ಲ ಇದು ಇಂಡಸ್ಟ್ರಿ ಆಗಲಿ, ಸಮಾಜ ಕಲ್ಯಾಣ ಇಲಾಖೆಯಾಗಲೀ, ಪ್ರಾಥಮಿಕ ವಿದ್ಯಾಭ್ಯಾಸ ಅಥವಾ ಸೆಕೆಂಡರಿ ವಿದ್ಯಾಭ್ಯಾಸವಾಗಲೀ, ಸಹಕಾರ ಇಲಾಖೆಯಾಗಲೀ ಎಷ್ಟು ಹಣವನ್ನು ಆಕ್ಚುಯಲ್ ಆಗಿ ಖರ್ಚು ಮಾಡಿದ್ದಾರೆ ಇವರ ಪರಿಸ್ಥಿತಿ ಏನಿದೆ ಎಂಬುದನ್ನು ನಾನು ಹೇಳಬೇಕಾಗಿದೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಮಾನ್ಯ ದೇವೇಗೌಡರಿಗೆ ಹೆಚ್ಚಿನ ಆಸಕ್ತಿ ಇದೆ. ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ, ಆದರೆ ಮೇಜರ್ ಇರಿಗೇಷನ್ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಮೈನರ್ ಇರಿಗೇಷನ್‌ಗೆ ೧೯೮೧-೮೨ರಲ್ಲಿ ೪.೨೮ ಇತ್ತು, ಇವತ್ತು ೩.೩೪ This is the actual expenditure on economical aspects. ತದನಂತರ ಅನಿಮಲ್ ಹಸ್‌ಬ್ಯಾಂಡರಿ, ಇದನ್ನು ಪೂರ್ತಿಯಾಗಿ ಉದಾಸೀನ ಮಾಡಿದ್ದೀರಿ. ೧೯೮೧-೮೨ರಲ್ಲಿ ೩.೧೬ ಪರ್ಸೆಂಟ್ ಇತ್ತು, ೧೯೮೩-೮೪ರಲ್ಲಿ ೩.೦೦, ೧೯೮೫-೮೬ರಲ್ಲಿ ೨.೮೯ ಮತ್ತು ೧೯೮೬-೮೭ ರಲ್ಲಿ ೩.೯ ಅಂದರೆ ಅನಿಮಲ್ ಹಸ್‌ಬ್ಯಾಂಡರಿನಲ್ಲೂ ನಿಮ್ಮ ಪ್ರಗತಿ ಇಲ್ಲ. ೭ ವರ್ಷಗಳು ಹಿಂದೆ ಇದ್ದೀರಿ ಎಂಬುದನ್ನು ನೀವೇ ಇಲ್ಲಿ ಸಾಬೀತು ಮಾಡಿದ್ದೀರಿ. ಇಲ್ಲಿ ಬರೀ ಭಾಷಣ ಮಾಡಿದರೆ ಪ್ರಯೋಜನ ಇಲ್ಲ. ನಿಮ್ಮ ಡಾಕ್ಯುಮೆಂಟಿನಲ್ಲಿ ಏನು ಹೇಳುತ್ತೀರಿ ಎನ್ನುವುದನ್ನು ನೋಡಿಕೊಂಡು ಹೇಳಿದರೆ, ನಮಗೂ ಒಂದು ತಿಳುವಳಿಕೆ ಕೊಟ್ಟಂತಾಗುತ್ತದೆ, ಜನರಿಗೂ ಗೊತ್ತಾಗುತ್ತದೆ, ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಏನು

ಎಂಬುದು ಗೊತ್ತಾಗುತ್ತದೆ. ಇನ್ನು ಡ್ರೈ ಡೆವಲಪ್‌ಮೆಂಟ್ ೧೯೮೧-೮೨ರಲ್ಲಿ ೨.೩, ೧೯೮೬-೮೭ ರಲ್ಲಿ ೧.೨೨ ಅಂದರೆ ಇದೂ ಕೂಡ ಒಂದು ಪಾಯಿಂಟ್ ಕಡಿಮೆ. ಇದೇ ರೀತಿ ಕಮ್ಯೂನಿಟಿ ಡೆವಲಪ್‌ಮೆಂಟ್. ಇದು ಬಹಳ ಮುಖ್ಯ. ನೀವು ಇದಕ್ಕೋಸ್ಕರ ಹೊಸ ಕಾನೂನು ತಂದಿದ್ದೀರಿ, ಪಂಚಾಯತ್ ಆಕ್ಟ್ ತಂದು ಒಂದು ಕ್ರಾಂತಿಯನ್ನು ಉಂಟುಮಾಡಿದ್ದೇವೆಂದು ಹೇಳುತ್ತಿದ್ದೀರಿ. ಈ ಡಿಪಾರ್ಟ್‌ಮೆಂಟ್ ನೀರಿನ ಸಮಸ್ಯೆಯನ್ನು ಬಿಟ್ಟರೆ, ಬೇರೆ ಏನೂ ಆಗಿಲ್ಲ. ಕಮ್ಯೂನಿಟಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ೧೯೮೧-೮೨ ರಲ್ಲಿ ೧೫.೮೦. ೧೯೮೨-೮೩ ರಲ್ಲಿ ೧೯,೮೧, ೧೯೮೬-೮೭ ರಲ್ಲಿ ೧೪.೮೫. ಇದನ್ನು ಬೇಕಾದರೆ ಪೇಜ್ ೧೭ರಲ್ಲಿ ನೋಡಿ. ನಿಮ್ಮ ಟಾರ್ಗೆಟ್ ನಿಮಗೇ ಗೊತ್ತಿದೆ. ಸಮಸ್ಯೆ ಎಷ್ಟಿದೆ, ನೀವು ರಿಲೇಟೀವ್ ಎಕ್ಸ್‌ಪೆಂಡಿಚರ್ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ನೀವೇ ಕೊಟ್ಟಿದ್ದೀರಿ. ೧೯೮೪-೮೫ರಲ್ಲಿ ಇದಕ್ಕೆ ಏನು ಖರ್ಚು ಎಂಬುದನ್ನು ನೀವೇ ಕೊಟ್ಟಿದ್ದೀರಿ, ಅದನ್ನೇ ಸ್ಪಷ್ಟವಾಗಿ ನಾನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇವತ್ತು ನೀವು ಬಡವರಿಗೆ, ಓಲ್ಡ್ ಏಜ್ ಪೆನ್‌ಷನ್ ಮತ್ತು ತಾಳಿ ಭಾಗ್ಯಯೋಜನೆಯನ್ನು ತಂದಿದ್ದೀರಿ. ಇವೊತ್ತು ಮುಖ್ಯವಾಗಿ ಬೇಕಾಗಿರುವುದು ಶಿಕ್ಷಣ ೬೨ ಪರ್ಸೆಂಟ್ ಜನರು ಅನಕ್ಷರಸ್ಥರು ಇದ್ದಾರೆ ಸಾಕ್ಷರತೆ ಇಲ್ಲದೇ ಇರುವವರು ಇದ್ದಾಗ ನೀವು ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಕೊಡಬೇಕು, ಸೆಕೆಂಡರಿ ಎಜುಕೇಷನ್‌ಗೆ ಆದ್ಯತೆ ಕೊಡಬೇಕು. ಪ್ರೈಮರಿ ಶಿಕ್ಷಣಕ್ಕೆ ೧೯೮೧-೮೨ರಲ್ಲಿ ೨೯.೨೯ ಇದ್ದರೆ, ಇವತ್ತು ೨೬.೮೪ ಇದೆ. ಇದರಲ್ಲೂ ೬ ವರ್ಷ ಹಿಂದೆ ಇದ್ದೀರಿ. ಸೆಕೆಂಡರಿ ಶಿಕ್ಷಣಕ್ಕೆ ೧೯೮೧-೮೨ರಲ್ಲಿ ೧೧.೩೨, ಇವೊತ್ತಿನ ದಿವಸ ೧೦.೬೭ ತದನಂತರ ಯೂನಿವರ್ಸಿಟಿಗೂ ಇದೇರೀತಿ ಆಗಿದೆ, ಟೆಕ್ನಿಕಲ್ ಎಜುಕೇಷನ್‌ನಲ್ಲೂ ಇದೇ ಇದೆ, ಸ್ಪೋರ್ಟ್ಸ್‌ನಲ್ಲೂ ಹಿಂದೆ ಬಿದ್ದಿದ್ದೀರಿ. ೧೯೮೪-೮೫ರಲ್ಲಿ ಸ್ವಲ್ಪ ಇಂಪ್ರೂವ್ ಆಗಿದ್ದರಿ, ಪುನಃ ೧೯೮೬-೮೭ರಲ್ಲಿ ಈ ಡಿಪಾರ್ಟ್‌ಮೆಂಟ್ ಮಲಗಿದೆ. ಹಳ್ಳಿ ಜನರಿಗೆ ಬೇಕಾದದ್ದು ಏನು ? ಅನೇಕ ಜನರು ಖಾಸಗಿ ಆಸ್ಪತ್ರೆಗಳಲ್ಲಿ ಉಪಚಾರ ಮಾಡಿಸುವುದಕ್ಕಾಗುವುದಿಲ್ಲ. ಅವರು ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ತಾವು ಎಷ್ಟು ಹಣ ಕೊಟ್ಟಿದೀರಿ. ೧೯೮೧-೮೨ರಲ್ಲಿ ೯.೫೪ ಕೊಟ್ಟರೆ, ಇವೊತ್ತಿನ ದಿವಸ ತಮ್ಮ ಅಚೀವ್‌ಮೆಂಟ್ ೮.೬೫ ಈ ರೀತಿಯಾಗಿ ಪ್ರತಿಯೊಂದರಲ್ಲೂ ನೀವು ಹಿಂದೆ ಬಿದ್ದಿದ್ದೀರಿ. ಮೈನರ್ ಇರಿಗೇಷನ್ ಆಯಿತು, ಪ್ರೈಮರಿ ಎಜುಕೇಷನ್ ಆಯಿತು, ಹೆಲ್ತ್ ಆಯಿತು, ಅನಿಮಲ್ ಹಸ್ಬೆಂಡರಿ ಆಯಿತು. ಇನ್ನು ಯಾವ ಡಿಪಾರ್ಟ್‌ಮೆಂಟ್ ಉಳಿಯಿತು ನಿಮ್ಮ ಅಚೀವ್‌ಮೆಂಟ್‌ಗೆ ? ಮಾನ್ಯ ದೇವೇಗೌಡರ ಇಲಾಖೆಯಲ್ಲಿ ಮಾತ್ರ ಪ್ರೋಗ್ರೆಸ್ ಆಗಿದೆ. ಹೇಮಾವತಿಗೆ ೧೦೦ ಕೋಟಿ ರೂಪಾಯಿಗಳನ್ನು ಕೊಟ್ಟು ಬಹಳ ಪ್ರಗತಿ ಸಾಧಿಸಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಆದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಹೆಚ್ಚು ಹಣ ಕೊಟ್ಟಿಲ್ಲ. ಮಾನ್ಯ ಮೊಯಿಲಿಯವರು ಇದರ ಬಗ್ಗೆ ಹೇಳಿದರು. ೩೦೦ ಕೋಟಿ ರೂಪಾಯಿಗಳನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಕೊಡಬೇಕು. ಅದನ್ನು ಒಪ್ಪುತ್ತೇವೆ ಎಂದು ಹೇಳಿ ಮಾನ್ಯ ಕಡಪಟ್ಟಿಯವರು ಒಂದು ನಿರ್ಣಯ ತಂದಿದ್ದರು. ೩೦೦ ಕೋಟಿ ರೂಪಾಯಿಗಳನ್ನು ಯು.ಕೆ.ಪಿ.ಗೆ ಕೊಡೋಣ ಎನ್ನುವಂತೆ ಹೆಚ್ಚು ಕಡಿಮೆ ಮಾತು ಆಗಿತ್ತು. ಆದರೆ ೧೦೦ ಕೋಟಿ ರೂಪಾಯಿಗಳ ಕಾವೇರಿ ಬೇಸಿನ್‌ಗೆ ಆಯಿತು. ೩೦೦ ಕೋಟಿ ರೂಪಾಯಿಗಳು ಯು.ಕೆ.ಪಿ.ಗೆ ಬರಲಿಲ್ಲ. ಇನ್ನು ೨೦೦ ಕೋಟಿ ರೂಪಾಯಿಗಳಲ್ಲಿ ಘಟಪ್ರಭಾ, ಮಲಪ್ರಭಾ, ಮುಲ್ಲಾಮರಿ, ಚುಳ್ಕಿನಾಲಾ, ಯು.ಕೆ.ಪಿ. ಬೆಣ್ಣೆತೊರಾ ಎಲ್ಲವನ್ನು ತೋರಿಸಿದರು. ಈ ರೀತಿಯಾಗಿ ತಾರತಮ್ಯಗಳೂ ಕೂಡಾ ಇವೆ.

ಅಧ್ಯಕ್ಷರು.—ಆಯಿತು ತಾವು ಬೇಗ ಮುಕ್ತಾಯ ಮಾಡಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಪುಸ್ತಕವನ್ನು ಅವರ ಮುಂದಿಟ್ಟಿರುತ್ತೇನೆ, ನಾನು ಏನೂ ಹೊರಗಿನಿಂದ ಇದನ್ನು ತಂದು ಹೇಳುತ್ತಿಲ್ಲ.

ಅಧ್ಯಕ್ಷರು.—ಆಕ್ಚುಯಲ್ ೮೫-೮೬ದು ಇನ್ನೂ ಬಂದಿಲ್ಲ. ಬರುತ್ತಿದೆ. ಈಗ ಇರುವುದು ೧೯೮೬-೮೭ರ ಬಜೆಟ್ ಎಸ್ಟಿಮೇಟ್ಸ್ ೧೯೮೫-೮೬ರ ರಿವೈಸ್ಡ್ ಎಸ್ಟಿಮೇಟ್. ೧೯೮೪-೮೫ರ ಆಕ್ಚುಯಲ್ ಎಸ್ಟಿಮೇಟ್ಸ್ ಇನ್ನೂ ಬಂದಿಲ್ಲ; ಹೊಸ ಪುಸ್ತಕ ಬರುತ್ತದೆ, ಬಜೆಟ್ ಬಂದಾಗ ಕೊಡಿಸುತ್ತೇನೆ. ಇದು ಹೋದಸಲ ಕೊಟ್ಟಿದ್ದುದು ಹಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಳೆಯದೇ ಆಗಲಿ ಅಚೀವ್‌ಮೆಂಟ್ ಮೇಲೆ ನಾನು ಮಾತನಾಡುತ್ತಿದ್ದೇನೆ, ೧೯೮೬-೮೭ರವರೆಗೆ ಮಾತನಾಡುತ್ತಿದ್ದೇನೆ

ಅಧ್ಯಕ್ಷರು.—ನಿಮಗೆ ಹೊಸ ಪುಸ್ತಕ ಕೊಡಿಸುತ್ತೇನೆ, ಬಜೆಟ್ ಮೇಲೆ ಮಾತನಾಡುವಾಗ ಹೇಳಿ, ಈಗ ತಾವು ಮುಕ್ತಾಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊಡಿಸಿ. ಆದರೆ ಅಚೀವ್‌ಮೆಂಟ್ ಏನಾಗಿದೆ ಎಂದರೆ ಇದರಲ್ಲಿ ಯಾವ ಸಾಧನೆ ಕೂಡ ಮಾಡಿಲ್ಲ, ಪ್ರಗತಿ ಆಗಿಲ್ಲ. ಅವರ ಪಕ್ಷದವರೇ ಅವರಿಗೆ ದೂರುತ್ತಾರೆ, ನಾವು ಏನಾದರೂ ಅಂದರೆ ಜಗಳಕ್ಕೆ ಬೀಳುತ್ತಾರೆ, ೬೩ ಜನ ಶಾಸಕರು ಮೆಮೊರಾಂಡಮ್ ಕೊಟ್ಟರು, ಕೊಟ್ಟಕೂಡಲೇ ಸೂಕ್ತವಾದ ಚೇಂಜ್ ಮಾಡುವುದಕ್ಕೆ ಮುಖ್ಯ ಮಂತ್ರಿಗಳು ಒಪ್ಪಿಕೊಂಡು ೧೬ ಜನ ಮಂತ್ರಿಗಳನ್ನು ಮಾಡಿ ಇಟ್ಟಿದ್ದಾರೆ. ಇದೇನು ನಾವು ಮಾಡಿದ್ದುದೇ ಅಧ್ಯಕ್ಷರೇ ? ಇವೊತ್ತು ಮತ್ತೆ ಗೊತ್ತಾಗಿದೆ, ಟೈಮ್ಸ್ ಆಫ್ ಇಂಡಿಯಾದಲ್ಲಿ ನೋಡಿದೆ, ಮಂತ್ರಿಮಂಡಲದ ಪುನರ್ರಚನೆ ಮಾಡುತ್ತೇವೆ ಎಂದು, ಆಗ ಇಮೇಜ್ ಇದ್ದವರಿಗೆ ತೆಗೆದುಕೊಳ್ಳುತ್ತಾರೋ, ಇಲ್ಲದವರಿಗೆ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು.—ತಾವು ಕಾದು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ನನಗೆ ಗೊತ್ತಿಲ್ಲ, ನೂರು ಜನ ಈ ರೀತಿ ಹೇಳಿದ ಮೇಲೆ ಇನ್ನು ಉಳಿದವರು ೫೦ ಜನ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರಜತ ಪರದೆಯ ಮೇಲೆ ನೋಡಿ ಆನಂದಿಸಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಷ್ಟು ಹೇಳಿ, ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ದೇವೇಗೌಡರಿಂದ ಉತ್ತರ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿ).—ಚೀಫ್ ಮಿನಿಸ್ಟರ್ ಇನ್ನೂ ಬರಲಿಲ್ಲವೇ ?

ಅಧ್ಯಕ್ಷರು.—ಹೆಲಿಕ್ಯಾಪ್ಟರ್ ಫೋರ್ಸಿಬಿಲಿ ಲ್ಯಾಂಡಿಂಗ್ ಆಗಿದೆಯಂತೆ. ಅವರು ಬರುತ್ತಿದ್ದಾರೆ.

SMT. K. S. NAGARATHNAMMA.—Sir, you cannot take this House for granted. ಇನ್ನೂ ನಮ್ಮ ಕಡೆ ಮಾತನಾಡುವವರು ಇದ್ದಾರೆ. ಮಾತನಾಡಲಿ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಬಂದಮೇಲೆ ಮತ್ತೆ ಅವರು ರಿಪ್ಲೈ ಕೊಡಲಿ, ಅಲ್ಲಿವರೆಗೆ ಇವರು ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರ ಉತ್ತರ ಕೇಳುವುದಕ್ಕೆ ನಮಗೆ ಇಷ್ಟ ಇದೆ, ಅವರನ್ನು ಸರಿಯಾದ ಜಾಗದಲ್ಲಿ ನಿಲ್ಲಿಸಿ.

ಅಧ್ಯಕ್ಷರು.—ಕಾಂಗ್ರೆಸ್ ಪಕ್ಷದವರು ೧೮ ಜನ ಮಾತನಾಡಿದ್ದೀರಿ, ೫೭೭ ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮಿಷದ ಲೆಕ್ಕ ಅಲ್ಲ......

ಅಧ್ಯಕ್ಷರು.—ಈ ಮೂರು ಜನ ಮಾತನಾಡುತ್ತಾರೆ ಎಂದು, ಇವತ್ತು ಕೊಶ್ಚನ್ ಹವರ್ ತೆಗೆದು, ಕಾಲಿಂಗ್ ಅಟೆನ್‌ಷನ್ ತೆಗೆದು ಅವಕಾಶ ಮಾಡಿಕೊಟ್ಟಿದ್ದೇನೆ ಸಾಕಷ್ಟು ಮಾತನಾಡಿದ್ದೀರಿ, ಈಗ ಅವರು ಉತ್ತರ ಹೇಳಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಆಯಿತು. ಅವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಹೇಳಿತ್ತು. ೧೧ ಘಂಟೆಗೆ ಭಾಷಣ ನಿಲ್ಲಿಸತಕ್ಕದ್ದು, ಆ ನಂತರ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಬರುವವರೆಗೆ ಟೈಮ್ ಕೊಡಿ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಬರುತ್ತಿದ್ದಾರೆ. ಚರ್ಚೆ ಮುಕ್ತಾಯವಾಗಿದೆ. ಶ್ರೀಮತಿ ನಾಗರತ್ನಮ್ಮನವರೇ ತಾವು ಸಹಕಾರ ಕೊಡುತ್ತೇನೆ ಎಂದು ಹೇಳಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಹಕಾರ ಕೊಡುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳು ಬರಲಿ, ನಾನು ಇಲ್ಲಿಂದ ಎದ್ದರೆ ಕೇಳಿ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಕಾರ್‌ನಲ್ಲಿ ಬರುತ್ತಿದ್ದಾರೆ. ಚರ್ಚೆ ಮುಕ್ತಾಯ ವಾಗಿದೆ ಎಂದು ನಾನು ಹೇಳಿದ್ದೇನೆ. ಚೀಫ್ ಮಿನಿಸ್ಟರ್ ಬಂದಮೇಲೆ ಎಷ್ಟು ತಾಸು ಉತ್ತರ ಬೇಕು ಅಷ್ಟು ತಾಸು ಕೊಡುವುದಕ್ಕೆ ಹೇಳುತ್ತೇನೆ. ದಯವಿಟ್ಟು ಸಹಕಾರ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಮಾತನಾಡುವವರು ಇದ್ದಾರೆ, ಮಾತನಾಡಲಿ, ಈ ವಿಷಯಕ್ಕೆ ದೇವೇಗೌಡರೂ ಪ್ರಿಪೇರ್ ಆಗಿ ಬರಬೇಕಾದರೆ ಸ್ವಲ್ಪ ಟೈಮ್ ಬೇಕಾಗುತ್ತದೆ. ಅವರಿಗೆ ನಾನು ಉತ್ತರ ಕೊಡಬೇಕು ಎಂದು ಕನಸು ಬಿದ್ದಿತ್ತೇ ? ನೀವು ಚೀಟಿ ಕೊಟ್ಟು ಕಳುಹಿಸಿದಮೇಲೆ ಅವರು ರೆಡಿಯಾಗಿ ಬಂದಿದ್ದಾರೆ.

ಅಧ್ಯಕ್ಷರು.—ಬೇರೆ ಯಾರಿಗೂ ಅವಕಾಶ ಇಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಭಾಪತಿಯವರೇ ಮಾನ್ಯ ದೇವೇಗೌಡರು ಉತ್ತರ ಕೊಡಲೇಬೇಕೆನ್ನುವ ಹಠ ತಮ್ಮದಾದರೆ ನಾವೇನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಅವರು ಬರುವ ತನಕ ಮಾನ್ಯ ದೇವೇಗೌಡರು ಉತ್ತರ ಕೊಡಲಿ. ದಯಮಾಡಿ ತಾವೆಲ್ಲಾ ಸಹಕಾರ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮಾನ್ಯ ದೇವೇಗೌಡರ ಎಬಿಲಿಟಿಯನ್ನು ಪ್ರಶ್ನೆ ಮಾಡುತ್ತಿಲ್ಲ. ನಮ್ಮ ಕಡೆ ಇನ್ನೂ ಎರಡು ಮೂರು ಜನ ಮಾತನಾಡುವವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬರುವ ತನಕ ಅವರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ ಮುಖ್ಯ ಮಂತ್ರಿಗಳು ಬಂದ ತಕ್ಷಣ ಅವರು ಉತ್ತರ ಕೊಡಲಿ.

ಅಧ್ಯಕ್ಷರು.—ಇಲ್ಲ. ದಯಮಾಡಿ ತಾವೆಲ್ಲ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಸ್ವಲ್ಪ ಕೂಲ್ ಆಗುವುದಾದರೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ನಾವು ಮಾತನಾಡುವುದಕ್ಕೆ ಅವಕಾಶ ಕೊಡುವುದು ಬಿಡುವುದು ಅದು ತಮ್ಮ ಅವಗಾಹನೆಗೆ ಬಿಟ್ಟಿದ್ದುದು. ಅದನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಇಲ್ಲಿ ಮೂಲ ಭೂತವಾದ ಪ್ರಶ್ನೆ ಎಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿದಿದೆ. ಅದಕ್ಕೆ ಸಂಪ್ರದಾಯದ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕು. ಈ ವಿಚಾರವನ್ನು ನಾವು ಬಿ. ಎ. ಸಿ.ಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಅನುಕೂಲಕ್ಕೆ ತಕ್ಕಂತೆ ಬೆಳಿಗ್ಗೆ ೯ ಗಂಟೆಗೆ ಸೇರಿ ೧೧ ಗಂಟೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದೆಂದು ತೀರ್ಮಾನಿಸಲಾಯಿತು. ಅದೇ ಪ್ರಕಾರ ಇವತ್ತು ಬೆಳಿಗ್ಗೆ ೯ ಗಂಟೆಗೆ ನಾವು ಸೇರಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ನ್ಯಾಯವಾಗಿ ಇಷ್ಟೊತ್ತಿಗೆ ಸದನದಲ್ಲಿರಬೇಕಾಗಿತ್ತು. ಆದರೆ ಮುಖ್ಯ ಮಂತ್ರಿಗಳಾದಿಯಾಗಿ ಎಲ್ಲಾ ಮಂತ್ರಿಗಳು ಇಂತಹ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಇದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕ್ಯಾಬಿನೇಟ್ ಮಂತ್ರಿಗಳು ಸ್ಪೆಷಲ್ ಟೈಮ್‌ನಲ್ಲಿ ಯಾವಾಗಲಾದರೂ ಬೇಕಾದರೆ ಪ್ರವಾಸ ಮಾಡಿಕೊಳ್ಳಲಿ. ಅದು ಬಿಟ್ಟು ಸದನದ ಕಾರ್ಯಕಲಾಪಗಳು ನಡೆಯುವಾಗ ಈ ಸದನವನ್ನು ಕಡೆಗಣಿಸಿ ಹೋಗತಕ್ಕಂಥಾದ್ದು ಮಾಡಬಾರದು. ಇದು ಈ ಸದನಕ್ಕೆ ತೋರಿಸಿದ ಅಗೌರವ. ಸದನದ ಕಾರ್ಯಕಲಾಪಗಳನ್ನು ಮಾನ್ಯ ಮುಖ್ಯ ಮಂತ್ರಿಗಳೇ ಕಡೆಗಣಿಸುವುದಕ್ಕೆ ಲೀಡ್ ಕೊಟ್ಟರೆ ಹೇಗೆ ? ಸದನದ ಕಾರ್ಯಕಲಾಪಗಳು ನಡೆಯುವಾಗ ಒಬ್ಬರೋ ಇಬ್ಬರೋ ಮಂತ್ರಿಗಳು ಮಾತ್ರ ಇರುತ್ತಾರೆ. ಇನ್ನುಳಿದ ಮಂತ್ರಿಗಳು ಇರುವುದೇ ಇಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಯಾವಾಗಲೂ ಡೆಲ್ಲಿ ಬಾಂಬೆಯಲ್ಲಿದ್ದು ಈ ಸದನವನ್ನು ಕಡೆಗಣಿಸಬಾರದು. ಮಾನ್ಯ ಲೋಕೋಪಯೋಗಿ ಸಚಿವರು ಮಾನ್ಯ ಸದಸ್ಯರ ಭಾಷಣಕ್ಕೆ ಪರಿಣಾಮಕಾರಿಯಾದ ಉತ್ತರ ಕೊಡುತ್ತಾರೆ. ಆ ಒಂದು ಸಾಮರ್ಥ್ಯ ಅವರಿಗೆ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ, ಆದರೆ ಈ ಸದನದ ನಾಯಕರು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡತಕ್ಕಂಥಾದ್ದು ನ್ಯಾಯಯುತವಾದುದು. ಮಾನ್ಯ ಮುಖ್ಯ ಮಂತ್ರಿಗಳ ಉತ್ತರವನ್ನು ಕೇಳಲು ನಾವೆಲ್ಲಾ ಬೆಳಿಗ್ಗೆ ೯ ಗಂಟೆಗೆ ಬಂದು ಇಲ್ಲಿ ಕುಳಿತಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನವನ್ನು ಇಷ್ಟೊಂದು ನಿರ್ಲಕ್ಷ್ಯದಿಂದ ಕಾಣಬಾರದು. ಈ ಸದನದ ಸಾಮಾನ್ಯ ಸದಸ್ಯನಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಒಂದು ಜವಾಬ್ದಾರಿ ಮುಖ್ಯ ಮಂತ್ರಿಗಳಿಗೂ ಇರಬೇಕು. ಸದಸ್ಯರು ಸಹ ಭಾಷಣ ಮಾಡಿ ಮನೆಗೆ ಎದ್ದು ಹೋಗಬಹುದಲ್ಲವೇ ? ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಂತ್ರಿಗಳು ಇಂತಹ ಪರಿ

ಪಾಠವನ್ನು ಬೆಳೆಸಿಕೊಂಡರೆ ಈ ಸದನದ ಗೌರವ ಏನಾಯಿತು ? ಈ ಸದನಕ್ಕೆ ಏನು ಕಿಮ್ಮತ್ತು ಬಂತು ?

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಈ ಸದನವನ್ನು ಯಾವಾಗಲೂ ಸಹ ನಿರ್ಲಕ್ಷ್ಯೆಯಿಂದ ಕಂಡಿಲ್ಲ, ಮತ್ತು ಉದ್ದೇಶ ಪೂರ್ವಕವಾಗಿ ಮಾಡಿದ್ದು ಎಂದೂ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳೇ ಬಂದು ಉತ್ತರ ಕೊಡುತ್ತೇನೆಂದು ಹೇಳಿದ್ದರು. ಆದರೆ ಇವತ್ತು ಬೆಳಿಗ್ಗೆ ನನಗೆ ಫೋನ್ ಮಾಡಿ ಮುಖ್ಯ ಮಂತ್ರಿಗಳು ಹೇಳಿದರು ಅದೇನೆಂದರೆ ಹೆಲಿಕ್ಯಾಪ್ಟರ್ ಇವತ್ತು ಬೆಳಿಗ್ಗೆ ಲ್ಯಾಂಡ್ ಆಗಲಿಲ್ಲವಂತೆ, ಆದ್ದರಿಂದ ಕಾರಿನಲ್ಲಿ ಬರುತ್ತಿದ್ದಾರೆ. ಮುಖ್ಯ ಮಂತ್ರಿಗಳು ದಾರಿಯಲ್ಲಿ ಎಲ್ಲೋ ಬರುತ್ತಿದ್ದಾರೆ. ಅವರು ಬಂದ ತಕ್ಷಣ ಅವರೇ ನಿಮಗೆಲ್ಲಾ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಕೊಡುತ್ತಾರೆ. ಆದ್ದರಿಂದ ಅವರು ಈ ಸದನಕ್ಕೆ ಯಾವುದೇ ರೀತಿಯ ಅಗೌರವವಾಗಲಿ, ಅಸಡ್ಡೆಯಾಗಲಿ ಅಥವಾ ನಿರ್ಲಕ್ಷ್ಯೆಯಾಗಲಿ ತೋರಿಸಿಲ್ಲ. ಈಗ ಮಾನ್ಯ ದೇವೇಗೌಡರು ಉತ್ತರ ಕೊಡಲಿ. ತಾವು ದಯವಿಟ್ಟು ಅವಕಾಶ ಕೊಡಿ. ಬೆಳಿಗ್ಗೆ ತಮಗೂ ಕೂಡ ಅವಕಾಶ ಕೊಟ್ಟಿದ್ದೇನೆ. ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ನೀವು ನಮ್ಮನ್ನು ರಂಜಿಸುವ ಮಾತನ್ನು ಹೇಳುತ್ತಿದ್ದೀರಿ. ಇಲ್ಲಿ ಈ ಸದನದ ಗೌರವದ ಪ್ರಶ್ನೆ......

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಬಗ್ಗೆ ಬಹಳ ಗೌರವವುಳ್ಳವರು, ಅವರು ಯಾವುದೇ ರೀತಿಯ ನಿರ್ಲಕ್ಷ್ಯೆಯನ್ನು ಈ ಸದನಕ್ಕೆ ಮಾಡಿಲ್ಲ. ಅವರ ಹೆಲಿಕ್ಯಾಪ್ಟರ್ ಬೆಳಿಗ್ಗೆ ಲ್ಯಾಂಡ್ ಆಗಿಲ್ಲ. ಆದ್ದರಿಂದ ಕಾರಿನಲ್ಲಿ ಬರುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಉದ್ದೇಶ ಪೂರ್ವಕವಾಗಿ ಮಾಡಿರುವುದು.

ಅಧ್ಯಕ್ಷರು.—ಇನ್ನು ೧೦ ಮಿನಿಟ್‌ನಲ್ಲಿ ಬರಬಹುದು ಅಥವಾ ೨೦ ಮಿನಿಟ್‌ನಲ್ಲಿ ಬರಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ನಿನ್ನೆಯು ನೋಡಿದ್ದೇವೆ, ಇವತ್ತೂ ಈ ಸದನದಲ್ಲಿ ನೋಡುತ್ತಿದ್ದೇವೆ, ಈ ಸದನಕ್ಕೆ ಪ್ರಾಮುಖ್ಯತೆ ಕೊಡಲಿಲ್ಲವೆಂದರೆ ಹೇಗೆ ? ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾವು ಬೆಳಿಗ್ಗೆಯಿಂದ ಸದನದಲ್ಲಿ ಕುಳಿತಿದ್ದೇವೆ. ರಾಜ್ಯದ ಹಿತಾಸಕ್ತಿಯಿಂದ ನಾವು ಕೇಳುತ್ತಿದ್ದೇವೆ, ನಮಗೆ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೂ, ಇನ್ನೂ ಒಂದಿಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ದಯಮಾಡಿ ಕೇಳಬೇಕು. ಸರ್ಕಾರದ ಪರವಾಗಿ ಉತ್ತರ ಕೊಡಲಿಕ್ಕೆ ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು, ಅದಕ್ಕೆ ಬದಲಾಗಿ ನೀವು ಕೊಡುತ್ತಿದ್ದೀರಿ, ಇದರಿಂದ ಸದನದಲ್ಲಿ ಹೊಸ ಸಂಪ್ರದಾಯ ಹಾಕಿದಂತಾಗುತ್ತದೆ ಎಂದು ಹೇಳಿದ್ದಾರೆ. ಯಾವುದೇ ಹೊಸ ರೀತಿಯ ಸಂಪ್ರದಾಯವನ್ನು ಜನತಾ ಸರ್ಕಾರ ಹಾಕುವುದಿಲ್ಲವೆಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವತ್ತು ನಾನು ಮಾತನಾಡುವಾಗ ಸದನದಲ್ಲಿ ಒಬ್ಬರು ಮಂತ್ರಿಗಳೂ ಇರಲಿಲ್ಲ. ಮಾನ್ಯ ಅಧ್ಯಕ್ಷರು ನೀವು ಮಾತನಾಡಿರುವ ವಿಷಯಗಳನ್ನು ಮುಖ್ಯಮಂತ್ರಿಗಳು ತರಿಸಿಕೊಂಡು ಓದುತ್ತಾರೆ, ಅದಕ್ಕೆ ಉತ್ತರವನ್ನು ಅವರಿಂದಲೇ ಕೊಡಿಸುತ್ತೇನೆಂದು ಹೇಳಿದ್ದರು. ಆದರೆ ನೀವು ಇವತ್ತು ಅವರ ಪರವಾಗಿ ಉತ್ತರ ಕೊಡುತ್ತಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಮಾತನಾಡಿರತಕ್ಕ ಪ್ರತಿಯೊಂದೂ ವಿಷಯಕ್ಕೂ ಉತ್ತರವನ್ನು ಸಿದ್ಧಮಾಡಿಟ್ಟುಕೊಂಡಿದ್ದೇವೆ. ನಾನು ಇಷ್ಟೇ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಬೇಕು ಎಂದು ಗೈರು ಹಾಜರಾಗಲಿಲ್ಲ. ಅವರು ಬೆಳಿಗ್ಗೆ ಹೆಲಿಕ್ಯಾಪ್ಟರ್‌ನಲ್ಲಿ ಬರುತ್ತಿದ್ದರು. ಹೆಲಿಕ್ಯಾಪ್ಟರ್ ತಾಂತ್ರಿಕ ದೋಷದಿಂದ ಫೋರ್ಸಿಬಲ್ ಆಗಿ ನೆಲದ ಮೇಲೆ ಇಳಿದದ್ದರಿಂದ, ಮುಖ್ಯ ಮಂತ್ರಿಗಳು ವೈರ್‌ಲೆಸ್‌ನಲ್ಲಿ ನನ್ನ ಹತ್ತಿರ ಮಾತನಾಡಿ, ನಾನು ಬರುವುದು ಸ್ವಲ್ಪ ತಡವಾಗಬಹುದು, ಆದ್ದರಿಂದ, ದಯಮಾಡಿ ಸರ್ಕಾರದ ಪರವಾಗಿ ಉತ್ತರ ಕೊಡಿ ಎಂದು ಮೆಸೇಜ್

ಕೊಟ್ಟಿದ್ದಾರೆ. ೫೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಸಾರ್ವಜನಿಕರು ಸಂಗ್ರಹಿಸಿ ಒಂದು ಸೇತುವೆ ಕಟ್ಟಬೇಕೆಂದು ಸರ್ಕಾರವನ್ನು ಕೇಳಿಕೊಂಡಿದ್ದರು. ಆ ಸೇತುವೆಯ ಶಂಕುಸ್ಥಾಪನೆ ಮಾಡುವುದಕ್ಕಾಗಿ ಮುಖ್ಯ ಮಂತ್ರಿಗಳು ಶೃಂಗೇರಿಗೆ ಹೋಗಿದ್ದರು. ಆದ್ದರಿಂದ, ಇದು ಹೊಸ ಸಂಪ್ರದಾಯ ಹಾಕ ತಕ್ಕಂಥದಲ್ಲ. ಮಾನ್ಯ ಸದಸ್ಯರು ಈ ವಿವಾದವನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಒಂದು ವಿಷಯವನ್ನು ಒಪ್ಪಿಕೊಳ್ಳುತ್ತೇನೆ, ಈ ಸದನದಲ್ಲಿ ನಡೆಯುವ ಕಾರ್ಯಕಲಾಪವು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ನನ್ನ ದೃಷ್ಟಿಯಲ್ಲಿ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಪ್ರತಿಯೊಬ್ಬ ಮಂತ್ರಿಯೂ ಹಾಜರಿರಬೇಕು. ಕಾರ್ಯ ಕಲಾಪ ನಡೆಯುವಾಗ ಗೌರವಾನ್ವಿತ ಸದಸ್ಯರುಗಳು ಹಾಗೂ ವಿರೋಧ ಪಕ್ಷದ ನಾಯಕರು ಮಾಡುವಂಥ ಚರ್ಚೆಯು ಸರ್ಕಾರದ ಮೇಲೆ ಬೆಳಕನ್ನು ಚೆಲ್ಲುತ್ತದೆ, ಆ ಚರ್ಚೆಯನ್ನು ಕಿವಿಯಲ್ಲಿ ಕಿವಿಯಿಟ್ಟು ಕೇಳ ಬೇಕಾಗಿರುತ್ತದೆ. ಹಾಗೂ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಜವಾಬ್ದಾರಿಯಿಂದ ಇರಬೇಕೆಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೇ ಎರಡು ದಿನ ಗೈರುಹಾಜರಾಗಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಪವರ್ ಕಾರ್ಪೊರೇಷನ್ ಕ್ಲಿಯರೆನ್ಸ್ ಬಗ್ಗೆ ಮಾತುಕತೆಯಾಡಲು ಕೇಂದ್ರ ಜಲ ಸಂಪನ್ಮೂಲ ಸಚಿವರಿಂದ ಸೂಚನೆ ಬಂದಿತ್ತು, ಅದಕ್ಕೋಸ್ಕರ ಎರಡು ದಿನ ಮಾತ್ರ ಸದನದಲ್ಲಿ ಆಬ್ಸೆಂಟ್ ಆಗಿದ್ದೆ. ಬೇರೆ ದಿನಗಳಲ್ಲಿ, ಈ ಸದನದಲ್ಲಿ ಇರುತ್ತಿದ್ದೆ, ತಪ್ಪಿದರೆ ಮೇಲ್ಮನೆಯಲ್ಲಿ ಇರುತ್ತಿದ್ದೆ. ಎರಡೂ ಸದನ ನಡೆಯುವಾಗ ಮಂತ್ರಿಗಳು ಗೈರು ಹಾಜರಾಗ ಬಾರದೆಂದು ನಾನು ಹೇಳುತ್ತೇನೆ. ನನಗೆ ಹೆಚ್ಚು ಆಳವಾದ ಅನುಭವ ಇದೆ ಎಂದು ಹೇಳಲಿಕ್ಕೆ ನಾನು ತಯಾರಿಲ್ಲ.

೧೧–೩೦ ಎ. ಎಂ.

ಇವೊತ್ತು ಇಡೀ ಹಿಂದೂಸ್ಥಾನಕ್ಕೆ ಈ ಸದನ ಮಾದರಿಯಾಗಿ ನಡೆದುಕೊಂಡಿದೆ ಎಂದರೆ ಅದು ತಪ್ಪಾಗ ಲಾರದು ಎಂದು ನಾನು ಭಾವಿಸಿದ್ದೇನೆ, ಇಲ್ಲಿ ಅಧಿಕಾರದಲ್ಲಿ ಯಾವುದೇ ಸರಕಾರ ಇರಲಿ, ಯಾರೇ ಇರಲಿ ಈ ತಹಲ್‌ವರೆಗೆ ನಮ್ಮ ರಾಜ್ಯದಲ್ಲಿ ಆ ಒಂದು ಗೌರವವನ್ನು ನಾವೆಲ್ಲರೂ ಉಳಿಸಿಕೊಂಡು ನಡೆದಿದ್ದೇವೆ ಎಂದು ನನ್ನ ದೃಷ್ಟಿಕೋನದಲ್ಲಿ ನಾನು ಭಾವಿಸಿದ್ದೇನೆ. ಈ ಸದನಕ್ಕೆ ಯಾರೇ ನಾಯಕರಾಗಿರಲಿ ಯಾವುದೇ ಸಹಕಾರ ಆಡಳಿತದಲ್ಲಿರಲಿ, ಯಾವುದೇ ಪಕ್ಷವು ಇರಲಿ, ಈ ಸದನದ ಗೌರವವನ್ನು ಎತ್ತಿ ಹಿಡಿಯುವುದರಲ್ಲಿ ನಾವುಗಳು ಬೇರೆ ಯಾವುದೇ ರಾಜ್ಯದವರಿಗಿಂತ ಹಿಂದೆ ಬಿದ್ದಿಲ್ಲ ಎಂದು ಹೇಳಲು ಇಚ್ಛಿಸುತ್ತೇನೆ. ಇದು ನನ್ನ ಪ್ರಾಮಾಣಿಕ ಅನಿಸಿಕೆ. ಇದನ್ನು ಪೂರ್ವಭಾವಿಯಾಗಿ ಹೇಳಿ ರಾಜ್ಯ ಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯಕ್ಕೆ, ಸದನದಲ್ಲಿ ಚರ್ಚೆ ಪ್ರಾರಂಭವಾಗಿದೆ. ಈಗಾಗಲೇ ಸುಮಾರು ೩೭ ಜನ ಮಾನ್ಯ ಸದಸ್ಯರುಗಳವರು, ಮಾನ್ಯ ವಿರೋಧಪಕ್ಷದ ನಾಯಕರವರು ಸೇರಿದಂತೆ ಎಲ್ಲಾ ಗೌರವ ಸದಸ್ಯರುಗಳು ಎರಡೂ ಕಡೆಗಳಿಂದ ಭಾಗವಹಿಸಿದ್ದಾರೆ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲೋಕೋಪಯೋಗಿ ಸಚಿವರು ಈಗ ಉತ್ತರವನ್ನು ಪ್ರಾರಂಭ ಮಾಡುತ್ತಿದ್ದಾರೆ,

ಅಧ್ಯಕ್ಷರು.— ಮೊದಲು ಇಬ್ಬರಿಗೆ ಅವಕಾಶ ಕೊಡಿ ಎಂದು ಹೇಳಿದ್ದೀರಿ. ಈಗ ಬೇರೆಯವರಿಗೆ ಪುನಃ ಅವಕಾಶ ಕೊಡಲಿಕ್ಕಾಗುವುದಿಲ್ಲ. ಈಗ ನಾನು ಚರ್ಚೆ ಮುಕ್ತಾಯವಾಗಿದೆ ಎಂದು ಹೇಳಿದ್ದೇನೆ. ಮಾನ್ಯ ಮಂತ್ರಿಯವರಿಗೆ ಉತ್ತರ ಕೊಡಲು ಕರೆದಿದ್ದೇನೆ...

ಶ್ರೀ ಎಸ್. ಬಂಗಾರಪ್ಪ.—ಈಗ ಮುಖ್ಯ ಮಂತ್ರಿಯವರು ಹೆಲಿಕಾಪ್ಟರ್‌ನಲ್ಲಿ ಅಲ್ಲಿಗೆ ಹೋಗಿದ್ದಾರೆ. ಹೆಲಿಕಾಪ್ಟರ್ ಬರಬೇಕಾಗಿತ್ತು, ಬರಲಿಲ್ಲ. ಹಿಂದೆ ಇವರು ಹೆಲಿಕಾಪ್ಟರ್ ಹತ್ತುವುದಿಲ್ಲ ಎಂದು ಏನೇನೋ ಹೇಳಿದ್ದರು. ಹೆಲಿಕಾಪ್ಟರ್ ಬರುತ್ತದೆ ಎಂದು ಇಟ್ಟು ಕೊಳ್ಳೋಣ. ಅದು ಕೆಟ್ಟಿರತಕ್ಕಂಥಾದ್ದು ನಿನ್ನೆ ಅಥವಾ ಇವೊತ್ತು ಬೆಳಿಗ್ಗೆ ಕೆಟ್ಟಿದ್ದ ಕಾರಣ ಅಲ್ಲಿ ಇದ್ದರೋ, ಅಥವಾ ಬೇರೆ ಯಾವ ಕಾರ್ಯಕ್ರಮವನ್ನು ಮುಗಿಸಿಕೊಂಡು ಬರಬೇಕಾಗಿದೆಯೋ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಶೃಂಗೇರಿ ದೇವಸ್ಥಾನಕ್ಕೆ ಪೂಜೆ ಸಲ್ಲಿಸಲು ಹೋಗಿದ್ದಾರೆ...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಇಷ್ಟು ಅವಕಾಶವನ್ನು ಕೊಟ್ಟಿದ್ದಾಗಿದೆ. ಈಗಾಗಲೇ ಇಬ್ಬರು ಮಾತನಾಡಿದ್ದಾರೆ. ಈಗ ಮಂತ್ರಿಯವರು ಉತ್ತರ ಕೊಡಲಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾತನಾಡಲು ಅವಕಾಶ ಕೇಳುವ ಪ್ರಶ್ನೆ ಇಲ್ಲ. ಸರಕಾರ ವನ್ನು ನಾವು ಕೇಳುತ್ತಿರುವುದೇನೆಂದರೆ, ಸದನವು ನಡೆಯುತ್ತಿರುವಾಗ, ಅನೇಕ ಕಾರ್ಯಕ್ರಮ ಗಳನ್ನು ಹಾಕಿಕೊಂಡು ಸದನದಲ್ಲಿ ಗೈರು ಹಾಜರಿರುವುದು ಸರಿಯಲ್ಲ ಎಂಬುದು ನಮ್ಮ ವಾದ. ಮಾನ್ಯ ಮಂತ್ರಿಗಳು ಸದನದಲ್ಲಿರಬೇಕು. ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಂಡು ತಪ್ಪಿಸಿಕೊಳ್ಳಬಾರದು. ಎಂಬ ಬಗ್ಗೆ ಈ ಹಿಂದೆ ಅನೇಕ ಸುತ್ತೋಲೆಗಳನ್ನು ತೆಗೆದಿದ್ದೀರಿ. ನೀವೂ ಕೂಡ ಹೇಳಿದ್ದೀರಿ. ಹಾಗಿದ್ದಲ್ಲಿ ಏಕೆ ಈ ಸಮಯದಲ್ಲಿ ಬೇರೆ ಕಾರ್ಯಕ್ರಮವನ್ನು ಹಾಕಿಕೊಂಡು ಮುಖ್ಯಮಂತ್ರಿಗಳು ಹೋದರು ? ಇಲ್ಲಿ ಹೆಲಿಕಾಪ್ಟರ್ ಕೆಟ್ಟು ಹೋಯಿತು ಎನ್ನುವ ಪ್ರಶ್ನೆ ಅಲ್ಲ, ಕಾರ್ಯಕ್ರಮವನ್ನು ಏತಕ್ಕೆ ಹಾಕಿಕೊಂಡು ಹೋದರು ಎನ್ನುವುದು ಮುಖ್ಯವಾದುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ್ದೇನೆ. ಒಬ್ಬರಲ್ಲ ಇಡೀ ಸಂಪುಟದ ಸದಸ್ಯರು ಇಂತಹ ಗಹನವಾದ ವಿಷಯ ಚರ್ಚೆಯಾಗತಕ್ಕಂಥ ಕಾಲದಲ್ಲಿ ಸದನದಲ್ಲಿ ಹಾಜರಿರಬೇಕೆಂದು ಹೇಳಿದ್ದೇನೆ. ಇಲ್ಲಿ ಯಾರೇ ಮಾತನಾಡಲಿ, ಎಂದರೆ ವಿರೋಧಿ ಪಕ್ಷದ ನಾಯಕಿಯವರು ಮಾತ ನಾಡಲಿ, ಅಥವಾ ಕೊನೆಯಲ್ಲಿ ಕುಳಿತಿರುವ ಯಾವ ಸದಸ್ಯರೇ ಮಾತನಾಡಲಿ, ಅದು ಮುಖ್ಯವಲ್ಲ, ಒಟ್ಟಿ ನಲ್ಲಿ ಯಾರೇ ಮಾತನಾಡಿದರೂ ಕೂಡ ಅದನ್ನು ಕೇಳತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯವಾಗಿದೆ

ಶ್ರೀ ಕೆ. ಎಚ್. ಶ್ರೀನಿವಾಸ್.—ಇಷ್ಟು ದಿವಸ ಖಾಲಿ ಕುರ್ಚಿಗಳು ಇದ್ದುವು. ತಾವುಗಳು ಇವೊತ್ತು ಬಂದು ಹೇಳುತ್ತಿದ್ದೀರಿ. ನಿಮ್ಮ ಅಭಿಪ್ರಾಯ ಸರಿಯಾಗಿದೆ. ಆದರೆ ನಿಮ್ಮ ಅಭಿಪ್ರಾಯ ಯಾರಿಗೂ ಪ್ರಯೋಜನ ಆಗುವ ಸ್ಟೇಜ್ ದಾಟಿ ಹೋಗಿದೆ...

ಶ್ರೀ ಎಚ್. ಡಿ. ದೇವೇಗೌಡ.—ನಾನು ಎಲ್ಲಿಯೂ ಹೋಗಿಲ್ಲ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರ ಬಗ್ಗೆ ವೈಯಕ್ತಿಕವಾಗಿ ಈ ಪ್ರಶ್ನೆ ಅಲ್ಲ....

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಯವರು ನೀವೆಲ್ಲರೂ ಹೇಳಿದ್ದನ್ನು ಕಿವಿಗೊಟ್ಟು ಕೇಳಿಕೊಂಡಿದ್ದಾರೆ. ಇಲ್ಲಿಯೇ ಕುಳಿತುಕೊಂಡು ಕೇಳಿದ್ದರು. ಅದರಲ್ಲೂ ಕುತೂಹಲ ದಿಂದ ನಿಮ್ಮ ಭಾಷಣವನ್ನು ಕೇಳಿದ್ದೇನೆ ನಾನು ಹೊರಗಡೆ ಹೋಗಿಲ್ಲ. ಮಾನ್ಯಮುಖ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಾಕಷ್ಟು ಅವಕಾಶ ಇದೆ ಈ ಮನೆಯ ನಾಯಕರಾಗಿ ಅವರು ಉತ್ತರ ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವರ್ಷ ನಿಮ್ಮಿಂದ ಈ ಉತ್ತರ ಪ್ರಾರಂಭ ಏಕೆ ಆಯಿತೆಂದರೆ ಏನಾದರೂ ವಿಶೇಷವಿದೆಯೇ ? ಹೆಲಿಕ್ಯಾಪ್ಟರ್‌ನಿಂದ ಏನಾದರೂ ಸಂಕಲ್ಪವಿದೆಯೇ ? ಇದರಲ್ಲಿ ಶೃಂಗೇರಿಗೆ ಹೋಗಿದ್ದಾರೆ ಅಲ್ಲಿಯ ದೇವರ ಸಂಕಲ್ಪವೇನಾದರೂ ಇದೆಯೇ ? ಮನುಷ್ಯನ ಸಂಕಲ್ಪವೇ, ಹೆಲಿಕ್ಯಾಪ್ಟರ್ ಅನ್ನು ರಿಪೇರಿ ಮಾಡತಕ್ಕಂತಹ ಲೋಕೋಪಯೋಗಿ ಇಲಾಖೆಯ ಮೆಕ್ಯಾನಿಕ್‌ರವರ ಸಂಕಲ್ಪವೇ ? ಇದು ಗೊತ್ತಾಗಬೇಕು.

ಶ್ರೀ ಎಂ. ರಘುಪತಿ.—ಕಳೆದ ವರ್ಷ ಶ್ರೀ ಜೆ. ಹೆಚ್. ಪಟೇಲ್‌ರವರು ಉತ್ತರವನ್ನು ಕೊಟ್ಟರು,

ಶ್ರೀ ಹೆಚ್. ಡಿ. ದೇವೇಗೌಡ.—ಕಾಂಪ್ಲಿಮೆಂಟ್ ಮಾಡಲೇಬೇಕು. ಶ್ರೀ ಮೊಯಿಲಿಯವರ ಪ್ರತಿಯೊಂದು ಮಾತಿಗೂ, ಅದಕ್ಕೆ ಯಾವ ರೀತಿ ಲೇಪ ಹಚ್ಚಬೇಕು ಎಂಬುದರಲ್ಲಿ ಪ್ರಥಮ ಸ್ಥಾನವನ್ನು ಪಡೆಯತಕ್ಕಂತಹವರು, ಅವರು ತುಂಬಾ ಬುದ್ಧಿವಂತರು. ನಮ್ಮ ಸಣ್ಣ ಸರಕಾರ ಇಟ್ಟುಕೊಂಡಿರ ತಕ್ಕಂತಹ ಒಂದು ಸಣ್ಣ ವಿಮಾನ, ಅದೂ ನೀವು ತೆಗೆದುಕೊಟ್ಟದ್ದು. ಹಿಂದೆ ಪ್ರಧಾನ ಮಂತ್ರಿ ಯವರು ಮಾಸ್ಕೋಗೆ ಹೋಗಿದ್ದಾಗ ಇದೇ ರೀತಿಯಾಯಿತು ಆಗ ರಷ್ಯಾದವರು ಅವರನ್ನು ಬೇರೆ ವಿಮಾನದಲ್ಲಿ ಕಳುಹಿಸಿಕೊಟ್ಟರು. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ, ವಾದ ಮಾಡುವುದು ಬೇಡ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆ ವಿಮಾನ ನಮ್ಮ ಕಾಲದಲ್ಲಿ ನಿರಂತರವಾಗಿ ಹಾರಾಡುತ್ತಿತ್ತು ನೀವು ಬಂದು ಅದನೆಲ್ಲಾ ತುಕ್ಕು ಹಿಡಿಸಿರುವುದು. ಸವಾರಿ ಸರಿಯಾಗಿ ಮಾಡುತ್ತೀರೋ ಮಾಡು ವುದಿಲ್ಲವೋ ಹೀಗಾಗಿ ಅಥೋ ಭ್ರಷ್ಟ ತಥೋ ಭ್ರಷ್ಟವಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಶ್ರೀನಿವಾಸ್‌ರವರು ಹೇಳಿದರು ನಿರಾತಂಕರವಾಗಿ ಹಾರಾಡುತ್ತಿತ್ತೆಂದು ಅಂದರೆ ಅವರು ಕೆಳಗೆ ಇಳಿಯಲಿಲ್ಲವೇ. ಯಾವಾಗಲೂ ಮೇಲೆಯೇ ಹಾರಾಡುತ್ತಿದ್ದರೆ ?

ಶ್ರೀ ಗೋಪಾಲ ಮುಕುಂದ ಕಾನಡೆ.—ಮೊದಲು ಹೆಲಿಕ್ಯಾಪ್ಟರ್ ಹತ್ತಬೇಕಾದರೆ ಇವರು ಹೆದರುತ್ತಿದ್ದರು, ಈಗ ಇವರಿಗೆ ಹೆದರಿ ಹೆಲಿಕ್ಯಾಪ್ಟರ್ ಕೆಟ್ಟಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸರಸದ ಸನ್ನಿವೇಶವನ್ನು ಮುಗಿಸಿ ಮುಂದೆ ಹೋಗೋಣ. ಇನ್ನು ಈ ಸದನದಲ್ಲಿ ಸರಕಾರದ ನೀತಿ ಬಗ್ಗೆ ಚರ್ಚೆಯಾಗಿದೆ, ಇದು ಬಹಳ ಸಪ್ಪೆ ಎಂದು ಕೆಲವು ಸನ್ಮಾನ್ಯ ಸದಸ್ಯರು ಈ ಸದನದಲ್ಲಿ ಪ್ರಸ್ತಾಪ ಮಾಡುವಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇತ್ತ ಕಡೆಯಿಂದ ಮಾತನಾಡುವಾಗ ಸ್ವಾಭಾವಿಕವಾಗಿ ಸರಕಾರದ ನೀತಿ ಬಗ್ಗೆ ಅದಕ್ಕೆ ಹೆಚ್ಚು ಒತ್ತು ಕೊಟ್ಟು ಹೇಳತಕ್ಕಂಥಾದ್ದು ಸಹಜ. ನಾನು ಪ್ರಾರಂಭದಲ್ಲಿ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿದರೆ ರಾಜಕೀಯವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದು ಭಾವಿಸಬೇಕಾದುದು ಇಲ್ಲ. ನೀತಿ ಎಂದರೆ ಯಾವ ನೀತಿ, ಒಂದು ಕಡೆ ರಾಜಕೀಯ ನೀತಿ ಇರಬೇಕಾಗುತ್ತದೆ. ಇನ್ನೊಂದು ಕಡೆ ಆರ್ಥಿಕ ನೀತಿ ಇರಬೇಕಾಗುತ್ತದೆ. ಈ ಆರ್ಥಿಕ ನೀತಿ ಮತ್ತು ರಾಜಕೀಯ ನೀತಿ ಎರಡೂ ಕೊನೆಗೆ ಸಾಮಾಜಿಕ ನೀತಿಯನ್ನು ರೂಪಿಸತಕ್ಕಂಥಾದ್ದಕ್ಕೆ ಪೂರಕವಾಗಬೇಕು. ಇದು ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. ಎಲ್ಲರ ಗುರಿಗೆ ಎಲ್ಲರ ಹೋರಾಟಕ್ಕೆ ನಮ್ಮೆಲ್ಲರ ಸಂಘರ್ಷಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಒಂದು ಅಂತಿಮ ನಿರೀಕ್ಷೆ ಇದೆ. ಅದೇನೆಂದರೆ ಈ ದೇಶದಲ್ಲಿರತಕ್ಕಂತಹ ಜನಸಾಮಾನ್ಯರು ಯಾರಿದ್ದಾರೆ ಅವನ ಒಂದು ಕ್ಷೇಮಕ್ಕೋಸ್ಕರ ಅವನ ಸುಧಾರಣೆಗೋಸ್ಕರ ನಮ್ಮ ಒಂದು ಹೋರಾಟ, ಸಂಘರ್ಷ ಸಾಮಾನ್ಯವಾಗಿ ನಡೆಯುತಕ್ಕಂಥಾದ್ದು ನಮ್ಮೆಲ್ಲರಿಗೂ ಗೊತ್ತಿರತಕ್ಕಂತಹ ವಿಷಯ. ರಾಜ್ಯಪಾಲರ ಬಾಯಿಯಿಂದ ಈ ಮಾತನ್ನು ಹೇಳಿಸಿದ್ದೀರೆಂದು ಹೇಳಿದಾಗ ಸರಕಾರದ ನೀತಿಯ ಬಗ್ಗೆ ಸ್ವಾಭಾವಿಕವಾಗಿ ಪ್ರಸ್ತಾಪ ಮಾಡಲೇಬೇಕಾಗುತ್ತದೆ. ನಾನು ವಿರೋಧ ಪಕ್ಷದ ನಾಯಕಿಯವರಿಂದ ಹಿಡಿದು ಉಪನಾಯಕರ ಭಾಷಣವನ್ನು ಕೇಳಿದ್ದೇನೆ. ನಮ್ಮ ಕಚೇರಿಯಲ್ಲಿ ಕುಳಿತುಕೊಂಡು ಹಾಗೂ ಮಾಜಿ ಅರ್ಥ ಸಚಿವರಾದ ಶ್ರೀ ವೀರಪ್ಪ ಮೊಯಿಲಿಯವರ ಭಾಷಣವನ್ನು. ಟೀಕೆಯನ್ನು ಯುದ್ಧ ಕಾಲದ ಶಸ್ತ್ರಾಭ[illegible]ವೆಂದು ತಯಾರಾಗುತ್ತಿದ್ದಾಗ ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕಿಯವರು ಭಾಷಣ ಮಾಡತಕ್ಕಂತಹ ಕಾಲದಲ್ಲಿ ನಾನು ತಪ್ಪಿಸಿಕೊಂಡೆ, ಅದು ನನ್ನ ದುರಾದೃಷ್ಟ. ಅವರ ಆಳವಾದ ಅನುಭವದಿಂದ ಈ ದೇಶದ ಜನಸಾಮಾನ್ಯನ ಒಳತಿಗಾಗಿ ಕೊಡತಕ್ಕಂತಹ ಸಲಹೆ ಆರ್ಥಿಕ ನೀತಿ ಅಥವಾ ರಾಜಕೀಯ ನೀತಿಯ ಬಗ್ಗೆ ಸಲಹೆಯನ್ನು ಕೇಳತಕ್ಕಂಥಾದ್ದು ನನ್ನ ಪಾಲಿಗೆ ಸಿಕ್ಕಲಿಲ್ಲ.ವೆಂದು ಹೇಳಿ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಈ ಸರಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷವಾಗಿದೆ ಆ ನಂತರ ಇವತ್ತು ಹಲವಾರು ರಾಜಕೀಯ ನೀತಿಗಳನ್ನು ನಾವು ರೂಪಿಸಿದ್ದೇವೆ. ಆರ್ಥಿಕ ನೀತಿಯನ್ನು ರೂಪಿಸಿದ್ದೇವೆ. ಅದನ್ನು ಪ್ರಾರಂಭಿಕವಾಗಿ ಹೇಳಲೇಬೇಕಾಗುತ್ತದೆ ರಾಜಕೀಯ ನೀತಿ ಮತ್ತು ಆರ್ಥಿಕ ನೀತಿ ಭಿನ್ನತೆಯ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಕಾಲದಲ್ಲಿ ಇದರ ಮೂಲ ಗುರಿ ನಮ್ಮ ಉದ್ದೇಶವೇನೆಂದರೆ ಶ್ರೀಸಾಮಾನ್ಯನ ಒಂದು ಸುಧಾರಣೆಗೆ ಆರ್ಥಿಕೀಕರಣದ ಸಮಾಜೀಕರಣದ ಸುಧಾರಣೆಯಾಗಬಹುದು. ರಾಜಕೀಯದ ಒಂದು ಶಕ್ತಿಯನ್ನು ಅವನಿಗೆ ಕೊಡತಕ್ಕಂತಹ ಸುಧಾರಣೆಯಾಗಬಹುದು ಈ ದಿಕ್ಕಿನಲ್ಲಿ ನಮ್ಮ ಸರಕಾರ ಹಿಂದಿನ ಸರಕಾರಕ್ಕಿಂತ ಭಿನ್ನವಾಗಿದೆಯೆಂದು ಪ್ರಾರಂಭಿಕವಾಗಿ ನಾನು ಹೇಳಲೇಬೇಕಾಗುತ್ತದೆ. ರಾಜಕೀಯ ಶಕ್ತಿ ಇಲ್ಲದಿದ್ದರೆ ಯಾವ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಅದನ್ನು ಕಾರ್ಯಾಚರಣೆಗೆ [illegible]ಲು ಸಾಧ್ಯವಾಗುವುದಿಲ್ಲ, ಅದನ್ನು ಕಾರ್ಯಾಚರಣೆಗೆ ತರತಕ್ಕಂತಹ ಶಕ್ತಿಯೇ ರಾಜಕೀಯ ಶಕ್ತಿ ಆರ್ಥಿಕ ನೀತಿಯನ್ನು ಕಾರ್ಯಾಚರಣೆಗೆ ತರತಕ್ಕಂತಹ ಶಕ್ತಿಯನ್ನು ಕೊಡತಕ್ಕಂಥಾದ್ದರಲ್ಲಿ ಕಾಂಗ್ರೆಸ್ ಪಕ್ಷಕ್ಕಿಂತಲೂ ಜನತಾ ಸರಕಾರ ವಿಭಿನ್ನ ಇದೆ ಎಂದು ಹೇಳಲೇಬೇಕಾಗುತ್ತದೆ. ಚುನಾವಣೆಯಲ್ಲಿ ಸಂಘರ್ಷ ಜಗಳವಾಯಿತು ಎಂದು ಹಲವು ಸನ್ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದರು. ಅದನ್ನು ಒಪ್ಪಿಕೊಳ್ಳುತ್ತೇನೆ ಇಲ್ಲವೆಂದು ಹೇಳುವುದಿಲ್ಲ. ರಾಜಕೀಯ ರಂಗದಲ್ಲಿ ಹೋರಾಟ ನಡೆಯುತಕ್ಕಂತಹ ಕಾಲದಲ್ಲಿ ಪಕ್ಷ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಸ್ಪರ್ಧೆ ನಡೆಯುತಕ್ಕಂತಹ ಕಾಲದಲ್ಲಿ ಸಂಘರ್ಷ ಅನಿವಾರ್ಯ. ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ನಮ್ಮಲ್ಲಿ ಇರತಕ್ಕಂತಹ ಸಂಘರ್ಷ ಅತ್ಯಂತ

ಕಡಿಮೆ ಎಂದು ಹೇಳಲೇಬೇಕಾಗುತ್ತದೆ. ಬೇರೆ ಕಡೆಗಳಲ್ಲಿ ಗಣನೀಯವಾಗಿ ಸಂಘರ್ಷಗಳಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ಉತ್ತರ ಪ್ರದೇಶ, ಬಿಹಾರಕ್ಕೆ ನಮ್ಮ ರಾಜ್ಯವನ್ನು ಹೋಲಿಸಿಕೊಂಡಾಗ ಗೊತ್ತಾಗುತ್ತದೆ ನಮ್ಮಲ್ಲಿ ಚುನಾವಣೆ ಹೇಗೆ ನಡೆದಿದೆ ಎಂದು. ತಾವುಗಳು ಪತ್ರಿಕೆಯಲ್ಲಿ ಓದಿರಬಹುದು. ಪಕ್ಷ ಯಾವುದೇ ಇರಲಿ ಎಂದು ಎಲ್ಲಾ ಕಾಲದಲ್ಲೂ ಬೇರೆ ಎಲ್ಲಾ ರಾಜ್ಯಗಳಿಗಿಂತ ನಮ್ಮ ರಾಜ್ಯ ವಿಭಿನ್ನವಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿ ನಮ್ಮಲ್ಲಿ ಎಷ್ಟೇ ತೀಕ್ಷ್ಣತೆ ಕಂಡು ಬಂದರೂ ಕೆಲವು ಮೌಲ್ಯಗಳನ್ನು ಎತ್ತಿ ಹಿಡಿಯಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಈ ರಂಗದಲ್ಲಿ ಸದನದ ಗೌರವ ಹೆಚ್ಚು ಮಾಡತಕ್ಕಂಥದ್ದರಲ್ಲಾಗಲೀ ಇಲ್ಲವೇ ಯಾವುದೇ ಸಂದರ್ಭದಲ್ಲಾಗಲಿ ಬೇರೆಯವರಿಂದ ನಾವು ಕಲಿತುಕೊಳ್ಳಬೇಕಾಗಿಲ್ಲ. ಕೆಲವು ಕಾರ್ಯಕ್ರಮಗಳ ಬಗ್ಗೆ ಮಾನ್ಯ ವಿರೋಧೀ ಪಕ್ಷದ ನಾಯಕಿಯವರು ಪ್ರಸ್ತಾಪ ಮಾಡಿದ್ದಾರೆ. ಅವರು ಏನು ಇಲ್ಲಿ ತಿಳಿಸಿಕೊಟ್ಟಿದ್ದಾರೋ ಅದರ ಹಿತ ಚಿಂತನೆಯನ್ನು ಬಡವರ ಹಿತ ಚಿಂತನೆಯನ್ನು ಮಾಡಲಿಕ್ಕೋಸ್ಕರವಾಗಿ ವಿಭಿನ್ನವಾದಂತಹ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ.

ಇವತ್ತು ರಾಜಕೀಯ ಶಕ್ತಿಯನ್ನು ವಿಕೇಂದ್ರೀಕರಣ ಮಾಡತಕ್ಕಂಥ ಉದ್ದೇಶ, ವಿಧಾನಸೌಧದಲ್ಲಿ ಕುಳಿತಿರತಕ್ಕಂಥ ನಮ್ಮಿಂದ ನಮ್ಮ ವ್ಯವಸ್ಥೆಯಲ್ಲಿ ಸರ್ಕಾರವನ್ನು ಕೈಯಲ್ಲಿ ಇಟ್ಟುಕೊಂಡು ಅಧಿಕಾರವನ್ನು ಏನು ವಿಕೇಂದ್ರೀಕರಣ ಮಾಡಬೇಕು ಎಂದು ಪ್ರಯತ್ನ ಮಾಡಿದರೆ, ಯಾವ ಜನಸಾಮಾನ್ಯನಿಗೆ ಈ ಕಾರ್ಯಕ್ರಮಗಳ ಫಲ ಎಷ್ಟು ವೇಗದಲ್ಲಿ ಹೋಗಬೇಕೋ ಅಷ್ಟು ವೇಗದಲ್ಲಿ ಅದನ್ನು ತಲುಪಿಸತಕ್ಕಂಥ ಹೊಸ ವ್ಯವಸ್ಥೆಯನ್ನು ಈ ದೇಶದಲ್ಲಿ ಮೊದಲನೆಯ ಬಾರಿಗೆ ತರತಕ್ಕಂಥ ಒಂದು ಉದಾತ್ತವಾದ ಧ್ಯೇಯದಿಂದ ಈ ನೀತಿಯನ್ನು ರೂಪಿಸಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇದರಲ್ಲಿ ಕೆಲವು ದೋಷಗಳು ಇರಬಹುದು. ದೋಷಗಳು ಇಲ್ಲ ಎಂದು ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಒಂದು ರಾಜಕೀಯದ ಹೊಸ ನೀತಿಯನ್ನು ರೂಪಿಸತಕ್ಕಂಥ ಕಾಲದಲ್ಲಿ ಅದು ಒಂದು ಹೊಸ ಅಧ್ಯಾಯ, ರಾಜಕೀಯ ರಂಗದಲ್ಲಿ ಪ್ರಯತ್ನ ಮಾಡಿದಂಥ ಕಾಲದಲ್ಲಿ, ನಾವು ಹೋಗತಕ್ಕಂಥ ಮಾರ್ಗದಲ್ಲಿ ಕೆಲವು ಸಣ್ಣಪುಟ್ಟ ದೋಷಗಳು ಆಗಿರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ಉದ್ದೇಶದ ಬಗ್ಗೆ ಪ್ರಶ್ನೆ ಮಾಡಲಿಕ್ಕೆ ಆಗುವುದಿಲ್ಲ. ಈ ಉದ್ದೇಶದ ಬಗ್ಗೆ ಯಾರೂ ಕೂಡಾ ಇವೊತ್ತು ಸಂಶಯ ವ್ಯಕ್ತಪಡಿಸಬೇಕಾದ್ದಿಲ್ಲ, ಅನುಮಾನವನ್ನು ವ್ಯಕ್ತಪಡಿಸಬೇಕಾದ್ದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಉದ್ದೇಶದಲ್ಲಿ ಏನಾದರೂ ದೋಷ ಇದ್ದರೆ ಅದನ್ನು ತಿದ್ದಲಿಕ್ಕೆ ನಿಮಗೆ ಅಧಿಕಾರ ಇದೆ. ತಮಗೆ ಜನ ಇವತ್ತು ಏನು ಅಧಿಕಾರವನ್ನು ಕೊಟ್ಟಿದ್ದಾರೆ, ಆಳುವ ಪಕ್ಷಕ್ಕೆ ಎಷ್ಟು ಅಧಿಕಾರ ಇದೆಯೋ ವಿರೋಧ ಪಕ್ಷಕ್ಕೂ ಅಷ್ಟೇ ಅಧಿಕಾರ ಇದೆ. ವಿರೋಧಪಕ್ಷ ತನ್ನ ಪಾತ್ರವನ್ನು ತಾನು ನಿರ್ವಹಣೆ ಮಾಡಬೇಕಾಗುತ್ತದೆ. ಆಳುವ ಪಕ್ಷ ಕೂಡಾ ತನ್ನ ನಿರ್ವಹಣೆಯನ್ನು ಪೂರ್ಣವಾಗಿ ನಿರ್ವಹಣೆ ಮಾಡಬೇಕಾಗುತ್ತದೆ. ಸರ್ಕಾರಿ ನೌಕರರ ಸಂಬಳದ ಬಗ್ಗೆ ಹೇಳಿದ್ದೀರಿ. ಬರಗಾಲದ ಬಗ್ಗೆ ಆಮೇಲೆ ಬರುತ್ತೇನೆ. ನಾನು ಆತುರಾತುರವಾಗಿ ಈ ರಾಜ್ಯಪಾಲರ ಭಾಷಣವನ್ನು ತರಿಸಿಕೊಂಡಿದ್ದೇನೆ. ನೀವು ಏನು ಪ್ರಯತ್ನ ಮಾಡಿದ್ದೀರಿ ಎಂಬುದನ್ನು ನೋಡುತ್ತೇನೆ. ಮೊದಲನೆಯದು ಸಂಕಲ್ಪ, ಇದರಲ್ಲಿ ಗುರಿ ಮುಟ್ಟಬಹುದು ಅಥವಾ ವಿಫಲರಾಗಬಹುದು. ಗುರಿ ಮುಟ್ಟುವ ಆಶಾದಾಯಕವಾದಂಥ ಪ್ರಯತ್ನವನ್ನು ನಾವು ನಡೆಸುತ್ತೇವೆ, ಅಂತಿಮವಾಗಿ ಯಾವ ಪ್ರಯೋಗ ಯಶಸ್ಸನ್ನು ಕಾಣತಕ್ಕಂಥದ್ದು ಇದೆಯೋ ಅದು ಜನತೆಯ ಕೈಯಲ್ಲಿದೆ. ಅದಕ್ಕೆ ಸೂಕ್ತ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ನಾವು ಎಲ್ಲರೂ ಸೇರಿ ನಿರ್ಮಾಣ ಮಾಡಬೇಕು. ಯಾವ ಉದ್ದೇಶವನ್ನು ಇಟ್ಟುಕೊಂಡು ಈ ಸಂಕಲ್ಪವನ್ನು ಇವತ್ತು ಕಾರ್ಯಗತ ಮಾಡಲಿಕ್ಕೆ ನಾವು ಮಾಡಿದ್ದೇವೆಯೋ, ಅದು ಒಳ್ಳೆಯ ರಾಜಕೀಯ ನೀತಿ, ಅಧಿಕಾರ ವಿಕೇಂದ್ರೀಕರಣ ಆಗುತ್ತದೆ. ಇವತ್ತು ಕೆಲವು ಆರ್ಥಿಕ ಕಾರ್ಯಕ್ರಮಗಳ ಬಗ್ಗೆಯೂ ಕೂಡ ಒಂದು ನೀತಿ ನಿರೂಪಣೆಯನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದನ್ನು ಎಲ್ಲರ ಮೇಲೆ ಜಾರಿ ಮಾಡತಕ್ಕಂಥ ಇನ್ನು ಯಾವುದೇ ರೀತಿಯಾದಂಥ ಟೀಕೆ ಈ ಸದನದಲ್ಲಿ ಬಂದರೂ ಒಪ್ಪಿಕೊಳ್ಳಲಿಕ್ಕೆ ತಯಾರಾಗಿದ್ದೇವೆ, ಜನತಾ ಸರ್ಕಾರದ ಆರ್ಥಿಕ ನೀತಿ ಇರಬಹುದು, ರಾಜಕೀಯ ನೀತಿ ಇರಬಹುದು ಸಾಮಾಜಿಕ ನೀತಿ ಇರಬಹುದು. ಇದರಲ್ಲಿ ವಿಭಿನ್ನತೆ ಇದೆ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಸ್ವಾಮಿ, ಮಾನ್ಯ ಮಾಜಿ ಅರ್ಥಸಚಿವರು ಒಂದು ಮಾತನ್ನು ಹೇಳಿದರು. ನಮ್ಮ ಯೋಜನೆಯ ಒಂದು ಗಾತ್ರ ಮತ್ತು ಬಂಡವಾಳ ಹೂಡಿಕೆಯ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಿ.

ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ದೇಶದಲ್ಲಿ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕಂಥ ಕಾಲದಲ್ಲಿ ನಾವು ಹಾಕತಕ್ಕಂಥ ಬುನಾದಿ ನೋಡಿ ತಾವು ಒನೇ ಒನೇ ಪ್ಲಾನನ್ನು ಕಂಪೇರ್ ಮಾಡುತ್ತಿದ್ದೀರಿ. ಸ್ವಾಮಿ ಪರ್‌ಕ್ಯಾಪಿಟಾ ಇನ್‌ವೆಸ್ಟ್‌ಮೆಂಟ್ ತಮ್ಮ ಕಾಲದಲ್ಲಿ ಆರನೇ ಪಂಚ ವಾರ್ಷಿಕ ಯೋಜನೆಯಲ್ಲಿ ೭೧೪ ಕೋಟಿ ರೂಪಾಯಿಗಳು ಏಳನೇ ಪ್ಲಾನ್‌ನಲ್ಲಿ ೨೯೯ ಕೋಟಿ ರೂಪಾಯಿಗಳಷ್ಟು ರೂಪಿಸಿಕೊಂಡಿದ್ದೇವೆ ಯೋಜನೆಯ ವೆಚ್ಚದಲ್ಲಿ ಪರ್‌ಕ್ಯಾಪಿಟಾ ತಲಾವಾರು ವೆಚ್ಚ ಮಾಡುತ್ತೇವೆ ಪರ್ ಕ್ಯಾಪಿಟಾ ಇನ್‌ವೆಸ್ಟ್‌ಮೆಂಟ್ ೭೧೪ ರೂಪಾಯಿನಿಂದ ೨೯೯ ರೂಪಾಯಿನವರೆಗೆ ಆಗಿದೆ. ಆವೊತ್ತಿನ ಸಂದರ್ಭವೇ ಬೇರೆ, ಈವೊತ್ತಿನ ಸನ್ನಿವೇಶವೇ ಬೇರೆ. ಈ ತಲಾವಾರು ವೆಚ್ಚವನ್ನು ಸರಿದೂಗಿಸುವುದಕ್ಕಾಗಿಯೇ ನಾವು ಒಂದು ಯೋಜನೆಯನ್ನು ರೂಪಿಸಿಕೊಂಡಿದ್ದೇವೆ. ಮಾನ್ಯ ಸಭಾಧ್ಯಕ್ಷರೇ, ಇದನ್ನು ನಾನು ಹೇಳುವುದಕ್ಕೆ ಸಂತೋಷಪಟ್ಟುಕೊಳ್ಳುತ್ತೇನೆ. ನಾವು ಇದರ ಬಗ್ಗೆ ಇನ್ನೂ ಮುಂದೆ ಹೋಗಬೇಕು. ನಮ್ಮ ಮುಂದೆ ಇರತಕ್ಕಂಥ ಜವಾಬ್ದಾರಿ, ನಮ್ಮ ಮುಂದೆ ಇರತಕ್ಕಂಥ ಸಮಸ್ಯೆ ಬಹಳ ತೀವ್ರ ಸ್ವರೂಪವಾದಂಥ ಸನ್ನಿವೇಶದಲ್ಲಿರುವುದನ್ನು ನಾನು ಈ ಸಂದರ್ಭದಲ್ಲಿ ಹೇಳಿಲ್ಲ. ಇವೊತ್ತು ನಾನು ಬರೀ ಪರ್ ಕ್ಯಾಪಿಟಾ ಇನ್‌ವೆಸ್ಟ್‌ಮೆಂಟ್ ಬಗ್ಗೆ ಮಾತ್ರ ಹೇಳಿದೆ. ಈಗ ಪರ್ ಕ್ಯಾಪಿಟಾ ಇನ್‌ಕಂ ಬಗ್ಗೆ ಮಾತನಾಡೋಣ. ಸ್ವಾಮಿ, ಇದು ೧೯೮೨–೮೩ರಲ್ಲಿ ೧೬೭೯.೦೭ ಇತ್ತು. ಇವೊತ್ತು ೧೯೮೫–೮೬ ರಲ್ಲಿ ೨೦೬೫.೭೧ ಇದೆ, ಇದರ ಬಗ್ಗೆ ಎಲ್ಲಾ ವಿವರಗಳನ್ನೂ ಎಂದರೆ ಸೆಂಟ್ರಲ್ ಅಸಿಸ್ಟೆನ್ಸ್ ಬಗ್ಗೆ, ಫ್ಯಾಮಿನ್ ರಿಲೀಫ್ ಬಗ್ಗೆ, ಸೆಂಟ್ರಲ್ ರಿಲೀಫ್ ಬಗ್ಗೆ, ಗ್ರ್ಯಾಂಟ್ ಬಗ್ಗೆ ಅಡ್ವಾನ್ಸ್ ಬಗ್ಗೆ ಎಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಎನ್.ಎಂ. ಅಡ್ಯಂತಾಯ.—ಆಗ ರೂಪಾಯಿಯ ಬೆಲೆ ೨೨ ಪೈಸೆ ಇತ್ತು, ಇವೊತ್ತಿ ರೂಪಾಯಿ ಬೆಲೆ ೧೪ ಪೈಸೇ ಆಗಿದೆ. ಅದು ಗೊತ್ತಿದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ.—ಇವೊತ್ತು ಆ ಎಲ್ಲಾ ವಿಷಯಗಳ ಬಗ್ಗೆಯೂ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಗ್ರ್ಯಾಂಟ್, ಇನ್ನೂ ಬೇರೆ ಬೇರೆ ನೆರವು ಬಂದಿರತಕ್ಕಂಥಾದ್ದು ಮತ್ತು ಯಾವ ಯಾವ ಬಾಬಿಗೆ ಎಷ್ಟೆಷ್ಟು ಬಂದಿದೆ, ಯಾವಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಇವೆಲ್ಲದರ ಅಂಕಿಅಂಶಗಳನ್ನು, ವಿವರಗಳನ್ನು ವಿಧಾನ ಪರಿಷತ್ತಿನಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಆವೊತ್ತಿನ ದಿವಸ ಸದನದಲ್ಲಿದ್ದುದರಿಂದ ಇದನ್ನು ಕೇಳಿದ್ದೇನೆ. ಅದಕ್ಕಾಗಿ ಈಗ ನಾನು ಇಲ್ಲಿ ಆ ಬಗ್ಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅವಶ್ಯಕತೆ ಬಿದ್ದರೆ ಮುಂದೆ ಬಡ್ಜೆಟ್ ಡಿಸ್ಕಷನ್‌ನಲ್ಲಿ ಮಾಡಬಹುದು. ಅವರೇ ಬಡ್ಜೆಟ್‌ನ್ನು ಮಂಡನೆ ಮಾಡುವವರಾಗಿದ್ದಾರೆ. ಆದುದರಿಂದ ನಾನು ಈಗ ಆ ಎಲ್ಲಾ ವಿಷಯಗಳಿಗೂ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಾ ಅಂಕಿಅಂಶ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈಗಾಗಲೇ ವಿಧಾನಪರಿಷತ್ತಿನಲ್ಲಿ ಎಲ್ಲಾ ಅಂಕಿಅಂಶಗಳನ್ನೂ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ.

ಶ್ರೀ ಕೆ.ಹೆಚ್. ಪಾಟೀಲ್ —ಈ ಹೌಸ್‌ನಲ್ಲಿ ಏತಕ್ಕೆ ಕೊಡಲಿಲ್ಲ ?

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಅದರ ಬಗ್ಗೆ ಪ್ರಶ್ನೆ ಕೇಳಲ್ಲ ಅದರಿಂದ ಅವರು ಕೊಡಲಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಮಾಡಿದ ಮೇಲೆ ಅದನ್ನು ಈ ಹೌಸ್‌ಗೆ ಏತಕ್ಕೆ ಕೊಡಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ —ಅದು ಪಬ್ಲಿಕ್ ಡಾಕ್ಯುಮೆಂಟ್. ಮುಂದೆ ಬಡ್ಜೆಟ್‌ನಲ್ಲಿ ಡಿಸ್ಕಷನ್ ಮಾಡಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—Per capita contribution to the National Plan ಬಗ್ಗೆ ಹೇಳುವುದಾದರೆ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ೫.೦೯ ಪರ್ಸೆಂಟ್ ಇದ್ದದ್ದು ಏಳನೇ ಪಾಂಚವಾರ್ಷಿಕ ಯೋಜನೆಯಲ್ಲಿ ಅದು ೪.೦೯ ಆಗಿದೆ. ಇಷ್ಟು ಇಳಿದಿವೆ. ಮತ್ತು ಆರನೆಯ

ಯೋಜನೆಯಲ್ಲಿ ಕರ್ನಾಟಕ ೬ನೇ ಸ್ಥಾನದಲ್ಲಿದ್ದುದು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ೯ನೇ ಸ್ಥಾನಕ್ಕೆ ಬಂದಿದೆ. ಇದರಲ್ಲಿ ಮೂರು ಪ್ಲೇಸ್ ಡೌನ್ ಆಗಿದೆ. ಇದು ತಮಗೆ ಗೊತ್ತಿದೆಯೋ ?

ಶ್ರೀ ಹೆಚ್.ಡಿ. ದೇವೇಗೌಡ.—ಈಗ ನಾನು ಎಲ್ಲಾ ವಿವರಗಳನ್ನೂ ಕೂಡ ಕೊಡಲಿಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನೂ ಸನ್ಮಾನ್ಯ ಮುಖ್ಯ ಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಕೊಟ್ಟಿದ್ದಾರೆ. ಆವೊತ್ತು ಆ ದಿನ ನಾನು ಸಭೆಯಲ್ಲಿದ್ದುದರಿಂದ ಅದನ್ನೆಲ್ಲಾ ಕೇಳಿದೆ. ಅವರು ಅಲ್ಲಿ ಮಾಡಿದ ಮೇಲೆ ನಾನು ಮತ್ತೊಮ್ಮೆ ಅದನ್ನು ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಈಗ ನಾನು ಹೇಳುವುದು ಇಷ್ಟೆ. ರಾಜಕೀಯ ನೆಲೆ ಮತ್ತು ಆರ್ಥಿಕ ನೆಲೆಯನ್ನು ರೂಪಿಸತಕ್ಕಂಥಾದ್ದು ಜನಸಾಮಾನ್ಯರನ್ನು ಸುಧಾರಿಸುವುದಕ್ಕೆ ವಿನಹ ಇನ್ನೇನೂ ಅಲ್ಲ. ನಮ್ಮ ನಿಮ್ಮ ಸಂಕೇತ ಯಾವುದೇ ಇರಲಿ, ಈವೊತ್ತು ಶ್ರೀ ಸಾಮಾನ್ಯನನ್ನು ಮೇಲಕ್ಕೆತ್ತುವುದಕ್ಕೆ ಹೋರಾಟ ನಡೆಯಬೇಕಾಗಿದೆಯೋ ವಿನಹ ಮತ್ತೇನೂ ಅಲ್ಲ.

ಅದಕ್ಕೋಸ್ಕರವೇ ನಾನು ಪರ್‌ಕ್ಯಾಪಿಟಾ ಇನ್‌ಕಂ ೧೬೭೯ ರಿಂದ ೨೦೩೫ಕ್ಕೆ ಹೆಚ್ಚಾಗಿದೆ ಎಂದು ಹೇಳಿದ್ದುದು. ನಮ್ಮ ಅನೇಕ ಕಾರ್ಯಕ್ರಮಗಳ ಒಂದು ಫಲಿತಾಂಶದಿಂದ ಇದು ಇಷ್ಟು ಹೆಚ್ಚಿದೆ ಎಂದು ಹೇಳುವುದಕ್ಕಾಗಿ ಇದನ್ನು ನಾನು ಈಗ ಪ್ರಸ್ತಾಪ ಮಾಡಿದ್ದುದು. ನಮ್ಮ ಸರ್ಕಾರದ ನೀತಿ ಮತ್ತು ಅನೇಕ ಕಾರ್ಯಕ್ರಮಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಅವರು ಏನೇನು ಪ್ರಸ್ತಾಪ ಮಾಡಿದ್ದಾರೆ, ಅದೆಲ್ಲವಕ್ಕೂ ನಾನು ಈಗ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅವರು ತಮ್ಮ ಭಾಷಣದ ಕಾಲದಲ್ಲಿ ತಾಳಿ ಭಾಗ್ಯ ಯೋಜನೆ, ಹೆರಿಗೆ ಭತ್ಯ ಯೋಜನೆ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳಿಗೆ ಸಂಬಂಧಪಟ್ಟಂತೆ, ಮೈಸೂರಿನಲ್ಲಿ ನಡೆದಂಥ ಕೋಮು ಗಲಭೆಗೆ ಸಂಬಂಧಪಟ್ಟಂತೆ. ಕೊಳವೆ ಬಾವಿಗಳಿಗೆ ಸಂಬಂಧಪಟ್ಟಂತೆ, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಹೀಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆಗಳಲ್ಲಿರುವಂತಹ ಕೆಲವು ದೋಷಗಳ ಬಗ್ಗೆ ಸಹ ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಮೊದಲೇ ಹೇಳಿದಂತೆ, ನಮ್ಮ ಜನತಾ ಸರ್ಕಾರ ಕೆಲವು ಹೊಸ ಆರ್ಥಿಕ ಕಾರ್ಯಕ್ರಮಗಳನ್ನು ಏನು ರೂಪಿಸಿದೆ, ಅವು ಕಾರ್ಯಗತವಾಗುವ ಕಾಲದಲ್ಲಿ ಏನಾದರೂ ದೋಷಗಳು ಕಂಡುಬಂದರೆ, ಅವುಗಳನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ಮತ್ತೊಮ್ಮೆ ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಕೆಲವು ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು ಮಾತನಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇರುವಂತಹ ದೋಷಗಳನ್ನು ತಿದ್ದಿಕೊಳ್ಳಿ ಎಂದು ಅವರು ನಮಗೆ ಹೇಳಿದ್ದಾರೆ. ಮಾನ್ಯ ವೀರಪ್ಪಮೊಯಿಲಿ ಅವರು ಸಹ ನಮ್ಮ ಸರ್ಕಾರದ ಆರ್ಥಿಕ ನೀತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಅಂಕಿಅಂಶಗಳನ್ನು ಕೊಟ್ಟು ಮಾತನಾಡಿದರು. ನಾನು ಎಲ್ಲವೂ ಸರಿಯಾಗಿದೆ ಎಂದು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಆದರೆ ಮಾನ್ಯ ನಜೀರ್ ಸಾಬ್ ಅವರು ಎಲ್ಲವೂ ಸರಿಯಾಗಿದೆ ಎಂಬ ಅರ್ಥದಲ್ಲಿ ಮಾತನಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರೂ ಸಹ ಆ ರೀತಿ ಹೇಳಿದ್ದಾರೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ನಡೆಯುವ ಕಾಲು ಎಡವದೆ ಇರುವುದಿಲ್ಲ. ಹಾಗೆಂದು ಮನೆಯಲ್ಲಿಯೇ ಇರುವುದಕ್ಕಾಗುವುದಿಲ್ಲ. ಈ ಹಿಂದೆ ನಮ್ಮಲ್ಲಿ ಒಬ್ಬರು ಪಂಚಾಯತಿ ಚೇರ್‌ಮನ್ ಇದ್ದರು. ಅವರು ಅಧಿಕಾರ ಬಿಟ್ಟು ಹೋಗುವಾಗ......

ಶ್ರೀ ಕೆ. ಎಚ್. ಪಾಟೀಲ್.—ನೀವು ಈ ಹಿಂದೆ ವಿರೋಧಪಕ್ಷದಲ್ಲಿದ್ದಾಗ ನೀವು ಕೊಟ್ಟ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತಿದ್ದೆವು. ನೀವೇ ಅಧಿಕಾರದಲ್ಲಿದ್ದೀರಿ. ಆದ್ದರಿಂದ ನಾವು ಸಲಹೆ ಮಾಡುವುದು ಏನಿದೆ ?

ಶ್ರೀ ಹೆಚ್. ಡಿ. ದೇವೇಗೌಡ.—ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ವಿರೋಧ ಪಕ್ಷದವರ ಸಲಹೆಗಳನ್ನು ಕೇಳಬೇಕಾಗುತ್ತದೆ. ಈಗ ನೀವು ಹೇಳಿದ್ದನ್ನು ನಾವು ಕೇಳುತ್ತಿಲ್ಲವೇ ? ಮುಖ್ಯವಾಗಿ ನಮ್ಮ ನಿಮ್ಮ ಹೋರಾಟ ಚುನಾವಣೆಯಲ್ಲಿ ಇರಬೇಕೇ ಹೊರತು ಈ ಮನೆಯಲ್ಲಿ ಅಲ್ಲ.

ಇಲ್ಲಿ ಏನಿದ್ದರೂ ನಮ್ಮಗಳ ಹೋರಾಟ ಶ್ರೀಸಾಮಾನ್ಯನ ಪರವಾಗಿ ಜನಸಾಮಾನ್ಯರ ಪರವಾಗಿ ಇರಬೇಕಾಗುತ್ತದೆ. ನನ್ನ ದೃಷ್ಟಿಕೋನದಲ್ಲಿ ಹೇಳಬೇಕೆಂದರೆ, ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪ ಇರಬಾರದು. ಶ್ರೀಸಾಮಾನ್ಯನ ಕೆಲಸ ಮಾಡುವ ಕಾಲಕ್ಕೆ ಯಾರ ಹಸ್ತಕ್ಷೇಪ ಅವಶ್ಯಕತೆಯೂ ಇಲ್ಲ. ಈ ಮೊದಲೇ ನಾನು ಹೇಳಿದಂತೆ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ನಾನು ಟೀಕೆ ಎಂದು ಹೇಳುವುದಿಲ್ಲ. ಅವು ರಚನಾತ್ಮಕವಾದಂಥ ಸಲಹೆಗಳು ಎಂದು ನಾನು ಹೇಳುತ್ತೇನೆ. ಈಗ ನಾವು ಏನು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಆ ಕಾರ್ಯಕ್ರಮಗಳಲ್ಲಿರುವಂತಹ ದೋಷಗಳನ್ನು ತಿದ್ದಿ, ಅವುಗಳನ್ನು ಸರಿಪಡಿಸಿ, ಅವುಗಳ ಲಾಭ, ಫಲಾನುಭವಿಗಳಿಗೆ ಸರಿಯಾಗಿ ಸಿಗುವಂತಹ ವ್ಯವಸ್ಥೆ ಮಾಡುವುದು ಸರ್ಕಾರದ ಜವಾಬ್ದಾರಿ ಎಂದು ಅವರು ಏನು ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಎಲ್ಲೆಲ್ಲಿ ನ್ಯೂನ್ಯತೆಗಳಿವೆ, ಅವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ನಾವು ಸಿದ್ಧರಾಗಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಇವೊತ್ತು ನಮ್ಮ ಒಂದೊಂದು ಕಾರ್ಯಕ್ರಮಗಳ ಬಗ್ಗೆಯೂ ಸಹ ಹೇಳಲು ಹೋದರೆ ಗಂಟೆಗಟ್ಟಲೆ ಬೇಕಾದರೆ ಭಾಷಣ ಮಾಡಬಹುದು. ಆದರೆ ಸಮಯವಿಲ್ಲ. ನಮ್ಮ ಆರ್ಥಿಕ ನೀತಿಯ ಬಗ್ಗೆ ಒಂದು ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ಹೇಳಬೇಕಾಗುತ್ತದೆ. ಅದೇನೆಂದರೆ, ನಮ್ಮ ಸಮಾಜದಲ್ಲಿ ಎರಡು ವರ್ಗಗಳಿವೆ. ಒಂದನೇ ವರ್ಗವೆಂದರೆ ಉಳ್ಳವರದ್ದು. ಇನ್ನೊಂದು ವರ್ಗವೆಂದರೆ ನಿರ್ಗತಿಕರದ್ದು. ಅವರನ್ನು ಗರೀಬರು ಎಂದು ಕರೆಯೋಣ, ಯಾವ ಭಾಷೆಯಲ್ಲಿ ಬೇಕಾದರೂ ಕರೆಯೋಣ.

೧೨–೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ನೀವು ಏನಾದರೂ ಕರೆಯಿರಿ. ನೀವು ಏನು ಹೇಳಿದರೂ ಅವರು ಕೇಳುವ ಪರಿಸ್ಥಿತಿ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಪಾಪ ಇದಕ್ಕೆ ನೀವೂ ಕಾರಣ ಅಲ್ಲ, ನಾವೂ ಕಾರಣ ಅಲ್ಲ. ನಿಮ್ಮನ್ನು ನಾವು ಬಯ್ಯುವುದು, ನಮ್ಮನ್ನು ನೀವು ಬಯ್ಯುವುದು ಕೇವಲ ನಮ್ಮ ಚಪಲಕ್ಕೋಸ್ಕರ. ಇಲ್ಲಿ ೩ ವರ್ಷ ಮಂತ್ರಿಯಾದವರು ಕಾರಣ ಎಂದು ಹೇಳುವುದಕ್ಕೆ ನಾವು ಹೋಗುವುದಿಲ್ಲ. ಈ ರಾಷ್ಟ್ರದ ನೀತಿಯನ್ನು ರೂಪಿಸತಕ್ಕ ಜನ ಇದ್ದಾರಲ್ಲ, ಅವರು ಇದಕ್ಕೆ ಕಾರಣ.

ಶ್ರೀ ಎಸ್. ಬಂಗಾರಪ್ಪ.—ನಾನು ಅದಕ್ಕೆ ಹೇಳಲಿಲ್ಲ. ನಿಮ್ಮ ಉತ್ತರದ ಧಾಟಿ ನೋಡಿದ ಮೇಲೆ, ನೀವು ಏನು ಹೇಳಿದರೂ ನಾವು ಕೇಳುವ ಪರಿಸ್ಥಿತಿ ಬಂದಿದೆಯೆಂದು ಹೇಳಿದೆ. ರಾಜ್ಯ ರಾಜಕಾರಣ ಇದೆಲ್ಲಾ ಏಕೆಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಬಂಗಾರಪ್ಪನವರನ್ನೂ, ವೀರಪ್ಪ ಮೊಯಿಲಿಯವರನ್ನೂ ಟೀಕೆ ಮಾಡಿದರೆ ಏನು ಪ್ರಯೋಜನವಾಗುತ್ತದೆ. ಒಂದು ರಾಜ್ಯ ಸರ್ಕಾರದ ಆಡಳಿತ ಯಂತ್ರದಲ್ಲಿ ಕೆಲಸ ಮಾಡತಕ್ಕಂಥ ಮುಖ್ಯಸ್ಥರಾದವರು ಇಡೀ ರಾಷ್ಟ್ರದ ನೀತಿಯನ್ನು ರೂಪಿಸ ತಕ್ಕದ್ದು ಕಷ್ಟ ಇದೆ, ಯಾವುದೇ ಅಧಿಕಾರದಲ್ಲಿರಲಿ, ಅಲ್ಲಿ ಬದಲಾವಣೆಯಾಗಬೇಕಾಗುತ್ತದೆ. ಅಮೂಲಾಗ್ರವಾದ ಚಿಂತನೆ ಅಲ್ಲಿ ಆಗಬೇಕಾಗುತ್ತದೆ. ಆ ಚಿಂತನೆ ಆಗುವವರೆಗೆ ಇಲ್ಲಿ ನಡೆಸತಕ್ಕ ಚರ್ಚೆ, ಅದರಿಂದ ಬರತಕ್ಕ ಫಲ ಅತ್ಯಂತ ಕಡಿಮೆ ಪ್ರಮಾಣದ್ದು. ಇದನ್ನು ನಾವು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಹ್ಯಾವ್ಸ್ ಅಂಡ್ ಹ್ಯಾವ್ಸ್ ನಾಟ್ಸ್ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ನಾವು ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೇವೆ ಎಂದು ನೀವು ಹೇಳಬಹುದು, ನೀವು ನಿರ್ಮಾಣ ಮಾಡಿದ್ದೀರಿ ಎಂದು ಹೇಳಬಹುದು. ಈಗಲಾದರೂ ಯಾರಿಗಾದರೂ ಯೋಚನೆ ಇದೆಯೇ ? ದೇಶದಲ್ಲಿ ಬಂಡವಾಳವನ್ನು ತೊಡಗಿಸುವುದರಲ್ಲಿ ಉತ್ಪಾದನಾ ವೆಚ್ಚವನ್ನು ಹೆಚ್ಚು ಮಾಡಿ, ದೇಶದ ಉತ್ಪಾದನೆಯನ್ನು ಹೆಚ್ಚು ಮಾಡಿ ವ್ಯಕ್ತಿಯ ಆದಾಯ ಮೂಲವನ್ನು ಹೆಚ್ಚು ಮಾಡತಕ್ಕಂಥ ದೇಶದ ಆರ್ಥಿಕ ನೀತಿಯನ್ನು ರೂಪಿಸತಕ್ಕ ಬಗ್ಗೆ ಅದು ಚಿಂತನಾ ಚಿಲುಮೆಯಾಗಲಿ ಅದರ ಬಗ್ಗೆ ಇವತ್ತಾದರೂ ಜ್ಞಾನೋದಯವಾಗಿದೆಯೇ ಎಂದು ಪ್ರಶ್ನೆ ಕೇಳಿದರೆ ಸಿಗತಕ್ಕಂಥ ಉತ್ತರ ನಕಾರಾತ್ಮಕವಾದ ಉತ್ತರ. ಇವೊತ್ತು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಹುಶಃ ಹಿಂದೂಸ್ಥಾನದಲ್ಲಿ ೧ ಲಕ್ಷ ೮೦ ಸಹಸ್ರ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಇಷ್ಟೊಂದು ಬೃಹತ್ ಪ್ರಮಾಣದ ಯೋಜನೆಯನ್ನು

ರೂಪಿಸಿದ್ದುದು ಇದೇ ಪ್ರಥಮ. ಒಂದು ಲಕ್ಷ ೮೦ ಸಹಸ್ರ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ. ಈ ದೇಶದ ಆರ್ಥಿಕ ಶಕ್ತಿ ಹೆಚ್ಚಾಗುವುದು ಹೇಗೆ ಸ್ವಾಮಿ. ಇದು ಕೃಷಿ ಪ್ರಧಾನವಾದ ದೇಶ. ೧೦೦ಕ್ಕೆ ೮೦ ಜನ ಹಳ್ಳಿಗಳಲ್ಲಿ ವಾಸಮಾಡತಕ್ಕ ಈ ಕೃಷಿ ಪ್ರಧಾನವಾದಂಥ ಈ ರಾಷ್ಟ್ರದಲ್ಲಿ ನಾವು ರೂಪಿಸಿಕೊಂಡಿರತಕ್ಕ ಆರ್ಥಿಕ ನೀತಿ ಏನು ? ಇವತ್ತು ರೈತ ತನ್ನ ಜೀವನವನ್ನು ಸುಗಮಗೊಳಿಸತಕ್ಕ ವ್ಯವಸಾಯದ ವೃತ್ತಿ ಏನಿದೆ ಅದರಲ್ಲಿ ಸ್ವಲ್ಪಮಟ್ಟಿಗೆ ಏನಾದರೂ ಶಕ್ತಿ ತುಂಬಿ ಕೊಳ್ಳಬೇಕು ಎಂದು ಇದ್ದರೆ ಅವನ ಒಣ ಭೂಮಿಗೆ ನೀರನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯಾಗ ಬೇಕಾಗುತ್ತದೆ. ಅದರ ಬಗ್ಗೆ ತಾವು ಭಾಷಣ ಮಾಡಿ. ಇವೊತ್ತು ಕೇವಲ ೬ ಪರ್ಸೆಂಟ್ ಮಾತ್ರ ನೀರಾವರಿಗೆ ಹಣ ಒದಗಿಸಿದ್ದೇವೆ. ಒಂದು ಲಕ್ಷ ೮೦ ಸಹಸ್ರ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಈ ಬೃಹತ್ ಯೋಜನೆಯಲ್ಲಿ, ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ, ಹಳ್ಳಿಗಳಿಂದಲೇ ಜೀವನ ಮಾಡತಕ್ಕ ಈ ರಾಷ್ಟ್ರದಲ್ಲಿ ನಾವು ನೀರಾವರಿಗೆ ಕೊಡತಕ್ಕಂಥ ಹಣ ಕೇವಲ ೬ ಪರ್ಸೆಂಟ್ ಮಾತ್ರ. ಇವತ್ತು ಕೇವಲ ಜಮೀನು ಹೊಂದಿರತಕ್ಕವರ ಪ್ರಶ್ನೆಯಲ್ಲ. ಇವತ್ತು ಈ ನೀರಾವರಿ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವುದಾದರೆ ಯಾರನ್ನು ಕೃಷಿ ಕಾರ್ಮಿಕರು ಎಂದು ಕರೆಯುತ್ತೇವೆ, ೧೦೦ಕ್ಕೆ ೩೦ ಜನ ಇರತಕ್ಕಂಥ ಕೃಷಿ ಕಾರ್ಮಿಕರು ಏನಿದ್ದಾರೆ ಅವರ ಜೀವನ ಕೂಡ ಸುಗಮವಾಗುತ್ತದೆ. ತಮಗೆ ಅನುಭವ ಇಲ್ಲ ಎಂದು ಈ ಮಾತನ್ನು ನಾನು ಹೇಳುತ್ತಾ ಇಲ್ಲ. ರಾಯಚೂರು ಜಿಲ್ಲೆಗೆ ಹೋದಾಗ ಒಂದು ಕಾಲದಲ್ಲಿ ಬರಡಾಗಿದ್ದ ಭೂಮಿ ಇತ್ತು. ಇವೊತ್ತು ೧೫–೨೦–೨೫ ರೂಪಾಯಿ ದಿನಗೂಲಿಗೆ ಜನ ಅಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಮಂಡ್ಯ ತೆಗೆದುಕೊಳ್ಳಿ, ಮದ್ದೂರು ಕಡೆ ಹೋಗಿ ನೋಡಿ ಗೊತ್ತಾಗುತ್ತದೆ, ತಮಿಳುನಾಡಿನಿಂದ ಕೂಲಿಗೆ ಕರೆದುಕೊಂಡು ಬರಬೇಕು, ಆ ಪರಿಸ್ಥಿತಿಗೆ ನಾವು ಹೋಗಿದ್ದೇವೆ. ಇದರ ಬಗ್ಗೆ ಚಿಂತನೆ ಮಾಡದೇ ಇರುವುದು ದೇಶದಲ್ಲಿ, ದುರ್ದೈವವೆಂದು ಹೇಳಬೇಕಾಗುತ್ತದೆ. ಇವೊತ್ತು ಪಕ್ಷ, ರಾಜಕಾರಣವಲ್ಲ. ಇವತ್ತು ಯಾರಿಗಾದರೂ. ಇದರ ಬಗ್ಗೆ ಚಿಂತನೆ ಮಾಡತಕ್ಕ, ವಿವೇಚನೆ ಮಾಡುವುದಕ್ಕೆ ಬಂದಿಲ್ಲ ಎನ್ನತಕ್ಕ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಮಾತನ್ನು ನೀರಾವರಿ ಮಂತ್ರಿಗಳ ಸಮ್ಮೇಳನದಲ್ಲಿ ನಾನು ಹೇಳಿದ್ದೇನೆ. ಇದು ಹೊಸದಾಗಿ ಹೇಳತಕ್ಕ ವಿಷಯವಲ್ಲ.

ತಾವು ಆದ್ಯತೆ ಬಗ್ಗೆ, ಪ್ರಾದೇಶಿಕ ಅಸಮಾನತೆಯ ಬಗ್ಗೆ ಮಾತನಾಡಿದ್ದೀರಿ, ಸಂತೋಷ. ತಮ್ಮ ನೆನಪಿಗೆ ಈ ಭಾಷಣವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ.

> "ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನ ನೆರವನ್ನು ಪಡೆಯಲಾಗಿದ್ದು ಯೋಜನೆ ಪೂರ್ಣಗೊಂಡಾಗ ಎರಡು ಮಿಲಿಯನ್ ಎಕರೆಗಳಷ್ಟು ಪ್ರದೇಶಕ್ಕೆ ನೀರೊದಗುವುದು. ಇದು ರಾಜ್ಯದ ಅತಿ ದೊಡ್ಡ ಯೋಜನೆಗಳ ಪೈಕಿ ಒಂದಾಗಿದ್ದು ಮೊದಲ ಹಂತವನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸಬೇಕಾಗಿದೆ. ಇಷ್ಟರವರೆಗೆ ಯೋಜನೆಯು ನಿಶ್ಚಿತರೀತಿ ಯಲ್ಲಿ ಮುಂದುವರಿಯುತ್ತಿದೆ. ಮೊದಲ ಹಂತದ ಕಾರ್ಯವನ್ನು ಶೀಘ್ರವಾಗಿ ಪೂರ್ಣ ಗೊಳಿಸುವುದೇ ಅಲ್ಲದೆ, ಎರಡನೇ ಹಂತದ ಕಾರ್ಯವನ್ನು ಸಕಾಲದಲ್ಲಿ ಪ್ರಾರಂಭಿಸ ಬೇಕೆಂಬುದು ನಮ್ಮ ಸರ್ಕಾರದ ಆಶಯವಾಗಿದೆ."

ತಾವು ೧೯೮೦ರಲ್ಲಿ ಹೇಳಿದ್ದು. ಇದು ಪೂರ್ಣಗೊಂಡಿದೆಯೆ ? ೧೯೮೫ರ ಜನವರಿ ೧೦ನೇ ತಾರೀಖು ನಮ್ಮ ಕೈಗೆ ಅಧಿಕಾರ ಕೊಟ್ಟಿದ್ದೀರಿ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪೂರ್ಣವಾಗಿದೆ ಎನ್ನುವುದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ ಮುಂದುವರಿದು.

> "ಕಾವೇರಿ ಜಲಾನಯನ ಯೋಜನೆಗಳಾದ ಹೇಮಾವತಿ. ಹಾರಂಗಿ, ಕಬಿನಿ ಯೋಜನೆ ಗಳು ಮತ್ತು ಕೃಷ್ಣರಾಜಸಾಗರ ಅಣೆಕಟ್ಟಿನ ಬಲದಂಡೆ ಕಾಲುವೆ ಹಾಗೂ ವಿಶ್ವೇಶ್ವರಯ್ಯ ಕಾಲುವೆಯ ನವೀಕರಣ ಯೋಜನೆಗಳು ಆದಷ್ಟುಬೇಗನೆ ಪೂರ್ಣವಾಗುವುದನ್ನು ಕಾಣಲು ನಾವು ಕಾತುರರಾಗಿದ್ದೇವೆ.

ಎಷ್ಟರಮಟ್ಟಿಗೆ ಕೆಲಸ ಆ ಕಾಲದಲ್ಲಿ ಆಯಿತು. ನಾವು ಪ್ರಯತ್ನ ಮಾಡಿದರೂ ಇಲ್ಲಿ ಪೂರ್ಣ ಯಶಸ್ಸು ಕಾಣುವುದಕ್ಕೆ ಆಗಲಿಲ್ಲ. ಅಪ್ಪರ್ ಭದ್ರಾ ಬಗ್ಗೆ ಕೂಡ ಮಾತ ನಾಡಿದ್ದೀರಿ. ಸ್ವಾಮಿ, ನಾವು ೬ ಯೋಜನೆಗಳಿಗೆ ಸಂಬಂಧಪಟ್ಟಂತೆ ಕ್ಲಿಯರೆನ್ಸ್ ಕೊಡಬೇಕೆಂದು ಯೋಜನಾ ಆಯೋಗದವರಿಗೆ ಕಳುಹಿಸಿಕೊಟ್ಟೆವು. ಅದಕ್ಕೆ ಅವರು ಹೇಳಿದರು, ಈಗ ಇರತಕ್ಕ

ಕಮಿಟೆಡ್ ಪ್ರಾಜೆಕ್ಟ್‌ಗಳನ್ನು ಪೂರೈಸದೆ ಹೊಸ ಯೋಜನೆಗಳಿಗೆ ಬರಕೂಡದು ಎಂದು ಯೋಜನಾ ಆಯೋಗದ ವರ್ಕಿಂಗ್ ಗ್ರೂಪ್‌ನವರು ಹೇಳಿ ವಾಪಸ್ಸು ಕಳುಹಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ಸನ್ನು ಸದನದ ಮುಂದಿಡುತ್ತೇನೆ. ಆದ್ದರಿಂದ ಇವತ್ತು ಒಂದು ರಾಜ್ಯ ಸರ್ಕಾರ ತನ್ನ ಇತಿಮಿತಿಯೊಳಗಿನ ಚೌಕಟ್ಟಿನಲ್ಲಿ ಸಂಪನ್ಮೂಲದ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ನಾನು ಮೊದಲು ಹೇಳಿದಂತೆ, ಎರಡು ವರ್ಷಗಳ ಜನಹಿತವನ್ನು ಕಾಪಾಡುವುದರಲ್ಲಿ ಎಷ್ಟರ ಮಟ್ಟಿಗೆ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕೋ, ಆದ್ಯತೆ ಕೊಡಬೇಕೋ ಆ ಒಂದು ಪ್ರಯತ್ನವನ್ನು ಪ್ರಾಮಾಣಿಕವಾಗಿ ನಾವು ನಡೆಸಿಕೊಂಡು ಬಂದಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ. ನೀರಾವರಿಗೂ ಯಾವ ಮಟ್ಟದಲ್ಲಿ ಆದ್ಯತೆ ಕೊಡಬೇಕೋ ಅದನ್ನು ಕೊಡುವುದಕ್ಕೂ ಪ್ರಯತ್ನ ಮಾಡಿದ್ದೇವೆ. ಉಳ್ಳವರು ಎಂದರೆ ಟಾಟಾಗಳು ಬಿರ್ಲಾಗಳು ಅಲ್ಲ ಹಳ್ಳಿಯಲ್ಲಿರತಕ್ಕ ಭೂಮಾಲೀಕ ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳುತ್ತಿದ್ದರು "ಲ್ಯಾಂಡ್ ಹೋಲ್ಡರ್ಸ್'' ಎಂದು ಭೂಮಿ ಹಿಡಿದುಕೊಳ್ಳುವವರು ಎಂದು. ಭೂ ಸುಧಾರಣೆಯನ್ನು ಜಾರಿಗೆ ತರತಕ್ಕಂಥ ಕಾಲದಲ್ಲಿ ನಾನು ಅಲ್ಲಿ ಕುಳಿತಿದ್ದೆ. ಇವತ್ತು ಅವರನ್ನು ನಾನು ದೊಡ್ಡ ಶ್ರೀಮಂತರು ಎಂದು ಕರೆಯುವುದಿಲ್ಲ. ಆ ಒಂದು ವರ್ಗದ ಶ್ರೇಯಸ್ಸಿಗಾಗಿ ಮಾನ್ಯ ಮೊಯಿಲಿಯವರು ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ. ತಾವು ೮೦–೮೧ರಲ್ಲಿ ಅರ್ಥ ಸಚಿವರಾಗಿದ್ದಾಗ ತಮ್ಮ ಎಕ್ಸ್‌ಪೆಂಡೀಚರ್ ೮೯ ಕೋಟಿ ೮೧–೮೨ರಲ್ಲಿ ೯೫ ಕೋಟಿ ೮೨–೮೩ರಲ್ಲಿ ೧೦೪ ಕೋಟಿ, ೮೩–೮೪ರಲ್ಲಿ ೧೧೩ ಕೋಟಿ, ೮೪–೮೫ರಲ್ಲಿ ೧೩೦ ಕೋಟಿ, ೮೫–೮೬ರಲ್ಲಿ ೧೪೦ ಕೋಟಿ, ೮೬–೮೭ರಲ್ಲಿ ೧೮೭ ಕೋಟಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಖರ್ಚು ಮಾಡಿಕೊಂಡು ಬಂದಿರುವುದು ಸ್ವಾಮಿ, ನಾನು ಇದರಿಂದ ತೃಪ್ತನಾಗುವುದಿಲ್ಲ. ನಾನು ಟೀಕೆಗೋಸ್ಕರ ಈ ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಇರುವ ವಾಸ್ತವಾಂಶವನ್ನು ಇಡಬೇಕಾಗುತ್ತದೆ. ತಾವು ಅಲ್ಲಿ ಕುಳಿತು ಕೆಲಸ ಮಾಡತಕ್ಕ ಕಾಲದಲ್ಲಿ ಸಾಕಷ್ಟು ನಿಮ್ಮ ಅಧಿಕಾರವನ್ನು ಉಪಯೋಗ ಮಾಡಿ ಸರ್ಕಾರದ ದೋಷವನ್ನು ಎತ್ತಿ ತೋರಿಸುವ ಕಾರ್ಯಭಾರವನ್ನು ತಾವು ಹೊತ್ತಿದ್ದೀರಿ. ಹಾಗೆಯೇ ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ನಾವು ಹೇಳುತ್ತೇವೆ. ಅದರ ಬಗ್ಗೆ ನಮ್ಮ ನಿಮ್ಮ ಇಬ್ಬರ ಮಾಲೀಕರು ಹೊರಗಡೆ ಇದ್ದಾರೆ. ಆದ್ದರಿಂದ, ಈ ಸದನದಲ್ಲಿ ನಾವು ವಿಚಾರಗಳನ್ನು ತಿಳಿಸ ಬೇಕಾಗುತ್ತದೆ. ಸಣ್ಣ ನೀರಾವರಿಗೆ ವಿಶ್ವಬ್ಯಾಂಕಿನಿಂದ ನೆರವನ್ನು ತೆಗೆದುಕೊಂಡಂಥ ನೀರಾವರಿ ಯೋಜನೆಗಳು ಇವೆ, ೧೯೮೧–೮೨ರಲ್ಲಿ ೧೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ ಮೊದಲು ಸ್ಟೇಟ್ ಗೌರ್ನ್‌ಮೆಂಟ್ ಖರ್ಚು ಮಾಡಬೇಕು, ಅದು ಆದಮೇಲೆ ರೀಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕು. ೧೯೮೨–೮ ರಲ್ಲಿ ೧೫೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ೧೯೮೩–೮೪ರಲ್ಲಿ ೬೫೪ ಲಕ್ಷ ರೂಪಾಯಿಗಳು ಖರ್ಚಾಗಿದೆ. ನಾವು ಬಂದಮೇಲೆ ಮೊದಲ ವರ್ಷ ಇಷ್ಟು ಹಣ ಖರ್ಚು ಮಾಡಿದ್ದೇವೆ. ೧೯೮೪–೮೫ರಲ್ಲಿ ೧,೩೨೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೫–೮೬ರಲ್ಲಿ ೧,೮೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೬–೮೭ಕ್ಕೆ ೨,೧೦೦ ಲಕ್ಷ ರೂಪಾಯಿಗಳನ್ನು ಇಟ್ಟು ಕೊಂಡಿದ್ದೇವೆ. ೨೧ ಕೋಟಿ ರೂಪಾಯಿ ಇಟ್ಟು ಕೊಂಡಿದ್ದೇವೆ. ನಾನು ಎಕ್ಸ್‌ಪೆಂಡೀಚರ್ ಹೇಳುತ್ತಿದ್ದೇನೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಕೇವಲ ಭಾಷಣದ ಮುಖೇನ ಜನರಿಗೆ ತೃಪ್ತಿಪಡಿಸುತ್ತೇವೆ ಎನ್ನುವ ಪ್ರಶ್ನೆ ಅಲ್ಲ. ತಾವು ಭಾಷೆ ಪ್ರಯೋಗ ಮಾಡಿದ್ದು ನನಗೆ ಜ್ಞಾಪಕಕ್ಕೆ ಬರುವುದಿಲ್ಲ ಎಂದು ಬರೆದು ಇಟ್ಟು ಕೊಂಡೆ. ಮಾನ್ಯ ಮೊಯಿಲಿಯವರು ಮಂಗಳೂರು ಕಡೆಯಿಂದ ಬಂದವರು, ಅವರು ಹೇಳುತ್ತಾ ಜನತೆಗೆ ಸ್ಪಂದನ ಆಗತಕ್ಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಿಲ್ಲ ಎಂದು ಹೇಳಿದರು. ಇಲ್ಲಿ ಸರಳ ಮತ್ತು ಅತ್ಯಂತ ಪ್ರಬುದ್ಧವಾದಂಥ ಭಾಷೆಯನ್ನು ಪ್ರಯೋಗ ಮಾಡಿದ್ದಾರೆ. ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಪ್ರಾದೇಶಿಕ ಅಸಮಾನತೆ ಎನ್ನುವ ಮಾತನ್ನು ಹೇಳಿದರು. ಅದು ಅಲ್ಲ. ಇನ್ನು ಅಪ್ಪರ್‌ಕೃಷ್ಣ ಬಗ್ಗೆ ಕೂಡ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನನ್ನ ಇಲಾಖಾ ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ಒಂದು ಮೆಚ್ಚುಗೆ ಮಾತನ್ನು ವ್ಯಕ್ತಪಡಿಸಿದರೆ ಅದು ತಪ್ಪಾಗಲಾರದು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಮ್ಮ ಪ್ಲಾನಿಂಗ್ ಕಮಿಷನ್ ಇರಬಹುದು, ಅಥವಾ ನೀರಾವರಿ ಸೆಕ್ರೆಟರಿಯವರು ಇರಬಹುದು. ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಬೇಕಾಗಿದ್ದರೆ ಬಹಳ ಕಷ್ಟ ಆಗಿದೆ. ಅಲ್ಲಿರತಕ್ಕವರು ನಮ್ಮವರೇ ನೀರಾವರಿ ಮಂತ್ರಿಗಳಾಗಿದ್ದಾರೆ. ಅವರಿಗೆ ಎಷ್ಟೇ ಆಸ್ಥೆ ಎಷ್ಟೇ ತೀವ್ರತೆ ಇದ್ದರೂ ಅಲ್ಲಿ ಇರತಕ್ಕ ಆರೋಪಣೆ ಗಳನ್ನೆಲ್ಲಾ ಸರಿದೂಗಿಸಿಕೊಂಡು ಕ್ಲಿಯರೆನ್ಸ್ ಪಡೆಯಬೇಕಾದರೆ ಒಂದು ವರ್ಷದ ಮೇಲೆ ಆಯಿತು.

೧೯೮೫ರ ಏಪ್ರಿಲ್‌ನಿಂದ ಒಂದು ವರ್ಷ ನಿರಂತರವಾಗಿ ಹೋರಾಟ ಮಾಡಿದಂಥ ಪರಿಣಾಮವಾಗಿ ಇವೊತ್ತು ನಾವು ಎರಡನೆಯ ಫೇಸಿಗೆ ಕ್ಲಿಯರೆನ್ಸ್ ಪಡೆಯಲಿಕ್ಕೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ನಾನು ನಾನಾ ಕಾರಣಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಆವೊತ್ತು ಕೆ. ಎಲ್. ರಾವ್ ಅವರು ಇದ್ದರು, ಒಂದೇ ಸರ್ಕಾರ ಇತ್ತು. ಇಲ್ಲಿ ಜನತಾ ಸರ್ಕಾರವಾಗಲೀ, ವಿರೋಧ ಪಕ್ಷದ ಸರ್ಕಾರವಾಗಲಿ ಇರಲಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರ ಇತ್ತು. ಏತಕ್ಕೆ ಆಗಲಿಲ್ಲ ? ಬಹುಶಃ ಎನ್. ಟಿ. ರಾಮರಾವ್ ಅಥವಾ ರಾಮಕೃಷ್ಣ ಹೆಗಡೆಯವರ ಪ್ರಶ್ನೆ ಅಲ್ಲ ಇದು. ಕೇಂದ್ರದಲ್ಲಿ ನಮಗೆ ಇವೊತ್ತು ಎಷ್ಟರಮಟ್ಟಿಗೆ ಸಹಕಾರ, ಅಥವಾ ಅಸಹಕಾರ ಸಿಕ್ಕಿದೆ ಎಂದು ಈ ಸಂದರ್ಭದಲ್ಲಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ, ಅದರಿಂದ ಪ್ರಯೋಜನವೂ ಆಗುವುದಿಲ್ಲ. ಈ ವಿಚಾರದಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ಸಾಕಷ್ಟು ಶ್ರಮ ವಹಿಸಿದ್ದಾರೆ. ಈ ದಿಕ್ಕಿನಲ್ಲಿ, ಸೆಕೆಂಡ್ ಫೇಸ್‌ನ ೫೫೦ ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ಏನಿದೆ, ಇದರ ಬಗ್ಗೆ ವಿಶ್ವಬ್ಯಾಂಕಿನಿಂದ ನೆರವನ್ನು ಪಡೆದು ಕೊಳ್ಳುವುದಕ್ಕೆ ಸಾಕಷ್ಟು ಇದರಲ್ಲಿ ಶ್ರಮವಹಿಸಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ನೀರಾವರಿ ಬೇಸಿನ್ಸ್‌ಗೆ ೨೦೦ ಕೋಟಿ ರೂಪಾಯಿ ಕೊಡುತ್ತೀರಾ ಎಂದು ಕೇಳಿದರು ಹೌದು ೩೦೦ ಕೋಟಿ ರೂಪಾಯಿ ಕೊಡಬೇಕೆಂದು ಆಸೆ ಇದೆ. ತಾವು ಚೆನ್ನಾಗಿ ಮಾತನಾಡಿದ್ದೀರಿ. ಇನ್ನು ಕಾವೇರಿ ಬೇಸಿನ್‌ಗೂ ಯೋಜನೆಗಳನ್ನು ಕಾರ್ಯಾಚರಣೆಯಲ್ಲಿ ತರತಕ್ಕದ್ದರಲ್ಲಿ ಯಶಸ್ವಿಯಾಗಿದ್ದೀರಿ ಎಂದು ಹೇಳಿದಿರಿ.

SRI K. H. PATIL.—It is a Compliment.

ಶ್ರೀ ಹೆಚ್. ಡಿ. ದೇವೇಗೌಡ.—ನನಗೆ ಹೆಲ್ಪ್ ಆಗುವುದು ಇರಲಿ. ಈ ನಾಡಿನ ನಾಲ್ಕು ಕೋಟಿ ಜನರಿಗೆ ಉಪಯೋಗ ಆಗಲಿ. ಈ ಸ್ಥಾನದಲ್ಲಿ ನಾವು ಇರುತ್ತೇವೆ ಹೋಗುತ್ತೇವೆ. ನೀವು ಹೇಳಿದಿರಿ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ಎಲ್ಲೋ ಫೌಂಡೇಷನ್ ಹಾಕಿದರು ಎಂದು. ಇದು ಚುನಾವಣೆಗೆ ತೆಗೆದುಕೊಂಡ ಹೆಲಿಕ್ಯಾಪ್ಟರ್ ಅಲ್ಲ. ಎಲೆಕ್ಷನ್ ನೋಟಿಫಿಕೇಶನ್ ಆದ ಮೇಲೆ ಏನಾದರೂ ಈ ಹೆಲಿಕ್ಯಾಪ್ಟರನ್ನು ಉಪಯೋಗಿಸಿದ್ದರೆ ನಾವು ತಲೆಬಾಗಬೇಕಾಗುತ್ತದೆ. ಸ್ವಾಮಿ, ನಾನು ಯಾರ ಮೇಲೂ ಗೂಬೆ ಕೂರಿಸುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ. ಬಿಜಾಪುರದಲ್ಲಿ ೨.೭೨ ಲಕ್ಷ ಕುಟುಂಬಗಳು ನಿರಾಶ್ರಿತವಾಗಿವೆ. ನಿಮಗೆ ೧ನೇ ಸ್ಟೇಜ್, ೨ನೇ ಸ್ಟೇಜ್, ೩ನೇ ಸ್ಟೇಜ್‌ನಿಂದ ಸಿಕ್ಕತಕ್ಕ ನೀರು ಎಂದರೆ ಕೇವಲ ೧೦ ಪರ್ಸೆಂಟ್ ಕೂಡ ಇಲ್ಲ. ಈಗ ನಿರಾಶ್ರಿತರಾಗಿರತಕ್ಕ ೨.೭೨ ಲಕ್ಷ ಕುಟುಂಬ ಗಳೇನಿವೆ ಅವುಗಳಿಗೆ ಮೊದಲು ನೀವು ಅನುಕೂಲ ಮಾಡಿಕೊಡಬೇಕಾಗಿತ್ತು. ಆದರೆ ನೀವು ಅವರಿಗೆ ಏತಕ್ಕೆ ಅನುಕೂಲ ಮಾಡಿಕೊಡಲಿಲ್ಲವೆಂದು ನಾನು ಕೇಳುವುದಕ್ಕೆ ಹೋಗು ವುದಿಲ್ಲ. ಅವರು ನಿರಾಶ್ರಿತರಾಗುವುದಕ್ಕೆ ನೀವೇ ಕಾರಣರೆಂದೂ ನಾನು ಹೇಳುವುದಿಲ್ಲ. ನೀವು ಏತಕ್ಕೆ ಹಾಗೆ ಮಾಡಿದಿರೋ ನನಗೆ ಗೊತ್ತಿಲ್ಲ. ಆದರೆ ಒಂದು ಮಾತನ್ನು ಹೇಳುವುದಾದರೆ, ನಾವು ಈ ಯೋಜನೆಯನ್ನು ಕೈಗೊಂಡರೆ ಅದರ ಪರಿಣಾಮವಾಗಿ ೨.೭೨ ಲಕ್ಷ ಕುಟುಂಬಗಳು ನಿರಾಶ್ರಿತರಾಗುತ್ತಾರೆ. ಅವರು ಬೀದಿ ಭಿಕಾರಿಗಳಾಗುತ್ತಾರೆಂದು ನಿಮಗೆ ಗೊತ್ತಿರಲಿಲ್ಲವೇ? ಫಸ್ಟ್ ಸ್ಟೇಜ್‌ನಲ್ಲಿ ೧೧೯ ಟಿ.ಎಂ.ಸಿ. ಎಫ್.ಟಿ. ನೀರನ್ನು ಉಪಯೋಗಿಸತಕ್ಕ ಕಾಲದಲ್ಲಿ ಇವತ್ತು ಯಾರು ನಿರಾಶ್ರಿತರಾಗಿದ್ದಾರೆ ಅವರ ಶ್ರೇಯಸ್ಸಿಗೆ ಉಪಯೋಗಿಸಿದ್ದರೆ ಅನುಕೂಲವಾಗುತ್ತಿತ್ತು. ಅವರಿಗಾಗಿ ಉಪಯೋಗಿಸುತ್ತಿರು ವುದು ಕೇವಲ ೧೦ ಪರ್ಸೆಂಟ್ ಕೂಡ ಇಲ್ಲ. ಈ ಸರ್ಕಾರ ಬಂದಮೇಲೆ ಮುಳಬಾಗಲು ನೀರಾವರಿ ಯೋಜನೆಗೆ ಫೌಂಡೇಷನ್ ಹಾಕಿತು. ಆದರೆ ಇಷ್ಟಕ್ಕೇ ನಾವು ಸಂತೋಷಪಟ್ಟುಕೊಳ್ಳುವುದಿಲ್ಲ. ಕಾರಣ ಈ ಯೋಜನೆಯ ಗಾತ್ರ ಏನು? ನಾವು ಈಗ ಎಷ್ಟು ಹಣವನ್ನಿಟ್ಟಿದ್ದೇವೆ? ಇದು ಸಾಕಾಗುತ್ತದೆಯೋ? ಎಂಬುದು ನನಗೆ ಗೊತ್ತಿದೆ. ಈ ಹಣವನ್ನು ಹೆಚ್ಚು ರೂಢಿಸಿಕೊಳ್ಳತಕ್ಕ ವಿಚಾರ ಬೇರೆ. ಆದರೆ ನಮ್ಮ ಸರ್ಕಾರ ಆ ಜನರಿಗೆ ಆಗಿರತಕ್ಕ ಅನ್ಯಾಯವನ್ನು ಗಮನದಲ್ಲಿಟ್ಟುಕೊಂಡು ಆ ಪ್ರದೇಶಕ್ಕೆ ಮೊದಲನೆಯ ಹಂತದಲ್ಲಿ ಕನಿಷ್ಟಪಕ್ಷ ೫ ಲಕ್ಷ ಎಕರೆಗೆ ಆದರೂ ನೀರನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಈ ಮಾತನ್ನು ನಾನು ಇನ್ನೊಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೃಷ್ಣಾ ಬೇಸಿನ್ ಒಂದೇ ಅಲ್ಲ. ಘಟಪ್ರಭಾ ವಿಚಾರದಲ್ಲಿ ಮಾತನಾಡೋಣ, ಮಲಪ್ರಭಾ ವಿಚಾರದಲ್ಲೇ ಮಾತನಾಡೋಣ, ಇವು ಪ್ರಾರಂಭವಾಗಿ ಎಷ್ಟು ವರ್ಷಗಳಾಯವು ಎಂಬುದು ತಮಗೂ ಗೊತ್ತಿದೆ. ನಾನು ಈ ಶಾಸನ ಸಭೆಗೆ ಬರುವುದಕ್ಕಿಂತ ಮುಂಚೆಯೇ ಈ ಯೋಜನೆಗಳು ಪ್ರಾರಂಭ ವಾದುವು. ಇನ್ನೂ ನಡೆಯುತ್ತಲೇ ಇವೆ. ನಾವು ಈ ಯೋಜನೆಗಳಿಗೆ ಯಾವ ದಿಕ್ಕಿನಲ್ಲಿ ಹಣವನ್ನು

ಖರ್ಚು ಮಾಡುತ್ತಿದ್ದೆವು ಎಂದರೆ ನಮ್ಮ ರಾಜ್ಯದ ವರಮಾನ ಏನಿದೆ ಅದರಲ್ಲಿ ೮೯ ಕೋಟಿ ರೂಪಾಯಿಗಳನ್ನು ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೋಸ್ಕರವಾಗಿಯೇ ಖರ್ಚು ಮಾಡುತ್ತಿದ್ದೆವು. ಆದರೆ ಇವತ್ತು ನಾವು ೧೮೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟು ಹಣವನ್ನು ನಾವು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿದ್ದೇವೆ. ಅಲ್ಪಸ್ವಲ್ಪ ಆಸ್ತಿಯನ್ನು ಯಾರಾದರೂ ರೂಢಿಸಿಕೊಂಡಿದ್ದರೆ ಅವರು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಳ್ಳುತ್ತಾರೆ ನಮ್ಮ ಜನತಾ ಸರ್ಕಾರದ ನೀತಿಯನ್ನು ಹೇಳುವುದಾದರೆ, ಮೊದಲನೆಯದಾಗಿ ಪವರ್‌ಗೆ ಆದ್ಯತೆ ಕೊಡಬೇಕು. ನೀರಾವರಿಗೆ ಆದ್ಯತೆ ಕೊಡಬೇಕು. ಸ್ವಾಮಿ ಪವರ್ ಬಗ್ಗೆ ಹೇಳುವುದಾದರೆ ೩ ವರ್ಷದಲ್ಲಿ ಇನ್‌ಸ್ಟಾಲ್ ಕೆಪ್ಯಾಸಿಟಿ......

ಶ್ರೀ ಎಂ. ವೀರಪ್ಪಮೊಯ್ಲಿ.— ೧೯೮೫-೮೬, ೧೯೮೬-೮೭, ೧೯೮೭-೮೮ಕ್ಕೆ ಸಂಬಂಧಪಟ್ಟಂತೆ ಹೇಳಿ. ನೀವು ಬೇರೆ ಯಾವುದೋ ಹೇಳುವುದಕ್ಕೆ ಹೋಗುತ್ತಿದ್ದೀರಿ. ನನ್ನ ಪ್ರಶ್ನೆಗೆ ಉತ್ತರ ಹೇಳುವುದಾದರೆ ಮೊದಲು ಸರಿಯಾಗಿ ತಿಳಿದುಕೊಳ್ಳಿ......

ಶ್ರೀ ಹೆಚ್. ಡಿ. ದೇವೇಗೌಡ — ನಾನು ಬೇರೆ ಯಾವುದನ್ನೂ ಹೇಳುವುದಕ್ಕೆ ಹೋಗುತ್ತಿಲ್ಲ. ನೀವು ವಕೀಲರು. ಕೊಲೆಗಾರನ ಪರವಾಗಿ ವಾದ ಮಾಡುವಾಗ "ನನ್ನ ಕಕ್ಷಿದಾರ ಕೊಲೆಯನ್ನೇ ಮಾಡಿಲ್ಲ" ಎಂದು ವಾದ ಮಾಡುತ್ತೀರಿ. ಅವನು ಕೊಲೆಗಾರನಾದರೂ ಕೂಡ ನೀವು ಹಾಗೆಯೇ ವಾದ ಮಾಡುತ್ತೀರಿ.

ಶ್ರೀ ಎಸ್. ಬಂಗಾರಪ್ಪ — ನೀವು ಕೂಡ ಬಹಳ ಚೆನ್ನಾಗಿ ವಾದ ಮಾಡುತ್ತಿದ್ದೀರಿ, ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.— ೧೯೮೦-೮೧ರಲ್ಲಿ ೧೫೫೬ ಮೆಗಾವ್ಯಾಟ್ ಇನ್‌ಸ್ಟಾಲ್, ಕ್ಯಾಪಾಸಿಟಿ ೧೯೮೬ಕ್ಕೆ ೨೫೩೦ ಮೆಗಾವ್ಯಾಟ್ಸ್;- ಈ ವರ್ಷದ್ದು ಕಳುಹಿಸಿಕೊಡುತ್ತೇನೆ. ಪವರ್ ಇರಿಗೇಷನ್‌ಗೆ ಆದ್ಯತೆಯನ್ನು ಕೊಟ್ಟಿಲ್ಲವೆಂದು ಹೇಳಿದರು. ನೀರಾವರಿ ಲೋಕೋಪಯೋಗಿ, ವಿದ್ಯುಚ್ಛಕ್ತಿ ಇಲಾಖೆಗಳ ಬಗ್ಗೆ ಚರ್ಚೆ ಬಂದಾಗ ವಿವರವಾಗಿ ವಿವರಣೆಯನ್ನು ಕೊಡುತ್ತೇನೆ. ಎಲ್ಲಾ ವಿವರಣೆಗಳನ್ನು ಸದನದ ಮುಂದೆ ಇಡುತ್ತೇನೆ. ಸದ್ಯ ನೀರಾವರಿ ಒಂದಕ್ಕೆ ಆದ್ಯತೆಯನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸಿದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಸಂಪತ್ತುಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯ. ಮತ್ತೆ ಇದು ನಮ್ಮ ಕರ್ತವ್ಯ. ಏತಕ್ಕೆಂದರೆ ಈಗಿರತಕ್ಕಂಥ ಸನ್ನಿವೇಶದಲ್ಲಿ ನಮಗೆ ಕಾಲ ಬಹಳ ಕಡಿಮೆ ಇದೆ. ಕೃಷ್ಣಾ ನದಿ ನೀರನ್ನು ಎಂದರೆ ಅಪ್ಪರ್ ಕೃಷ್ಣಾ ಒಂದರ ಪ್ರಶ್ನೆಯಲ್ಲ, ಕಾರಂಜಿ, ಘಟಪ್ರಭ, ಮಲಪ್ರಭಾ ಮತ್ತೆ ಈಗಿರತಕ್ಕಂಥ ಮಧ್ಯಮ ನೀರಾವರಿಯ ಎಲ್ಲಾ ಯೋಜನೆಗಳನ್ನು ನಿರೀಕ್ಷಿಸಿದ ವೇಗದಲ್ಲಿ ತೆಗೆದುಕೊಂಡು ಹೋಗಬೇಕಾಗಿತ್ತು. ಆದರೆ ಇದಕ್ಕೆ ನಮ್ಮ ಹಣದ ಬಂಡವಾಳವು ಕೂಡ ದ್ವಿಗುಣಗೊಳ್ಳಬೇಕಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸದನದಲ್ಲಿ ಅದಕ್ಕೆ ಒಂದು ವಾತಾವರಣವನ್ನು ನಿರ್ಮಾಣ ಮಾಡಿದ್ದನ್ನು ಮಾನ್ಯ ವೀರಪ್ಪಮೊಯ್ಲಿಯವರು ಬಹುಶಃ ಮರೆತುಬಿಟ್ಟಿರುವಂತೆ ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನೀವು ಮಾಡಿ.

ಶ್ರೀ ಎಚ್. ಡಿ. ದೇವೇಗೌಡ. — ಅದಕ್ಕೆ ನಾನು ಕೇಳಿಕೊಂಡೆ ಸ್ವಾಮಿ, ಮುನ್ನೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ನಾವೆಲ್ಲರೂ ಸೇರಿ ಒಂದು ನಿರ್ಣಯವನ್ನು ತೆಗೆದುಕೊಂಡೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಾವು ಎಲ್ಲಾ ರೆಸಲ್ಯೂಷನ್ ಮೂವ್ ಮಾಡಿ ಕೊನೆಗೆ ಕೈಬಿಟ್ಟಿರಿ.

ಶ್ರೀ ಹೆಚ್. ಡಿ. ದೇವೇಗೌಡ.— ಆ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕಾದರೆ ಜನತಾ ಸರ್ಕಾರ ಯಾವ ದಿಕ್ಕಿನಲ್ಲಿ ನಡೆದುಕೊಂಡು ಬಂದಿತು, ಅದರ ಬಗ್ಗೆ ತೀರ್ಮಾನ ಹೇಗೆ ಆಯಿತು ಈ ಸದನದಲ್ಲಿ ಎಂಬುದನ್ನು ತಾವು ಗಮನಿಸಬೇಕು. ಈ ಸದನದಲ್ಲಿ ತೆಲಗು ಗಂಗಾ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಅವರ ಬಗ್ಗೆ ಎನ್.ಟಿ. ರಾಮರಾವ್‌ರವರು ೧೯೮೪ನೇ ಇಸವಿಯಲ್ಲಿಯೇ ಕೋಟ್‌ಮಾಡಿದ್ದಾರೆ. ಪೇಪರ್‌ನಲ್ಲಿ ಪಬ್ಲಿಷ್‌ಆಯಿತು. ಆವತ್ತಿನ ದಿವಸ ಎಂದರೆ ೧೯೮೪ರಲ್ಲಿ ಎನ್.ಟಿ.ಆರ್. ರವರ ನಿಲುವು ಏನು ಎನ್ನುವುದನ್ನು ನಾವೆಲ್ಲರೂ ಕೇಳಿಸಿಕೊಂಡಿದ್ದೇವೆ. ಸ್ವಾಮಿ ಯಾರು ಎಷ್ಟೇ ಕಠಿಣವಾದ ನಿಲುವನ್ನು ತೆಗೆದುಕೊಳ್ಳಲಿ,

ನಾನು ಇನ್ನೊಬ್ಬ ಮುಖ್ಯಮಂತ್ರಿಯ ಬಗ್ಗೆ, ಸಭೆಯಲ್ಲಿ ಇಲ್ಲದಿರತಕ್ಕಂಥವರ ಬಗ್ಗೆ ಲಘುವಾಗಿ ಮಾತ್ನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡು ಸಾವಿರ ಇಸವಿಯ ಒಳಗೆ ನಮ್ಮ ಭಾಗದ ನೀರನ್ನು ಏನು ಉಪಯೋಗ ಮಾಡಿಕೊಳ್ಳಬೇಕು ಆ ದಿಕ್ಕಿನಲ್ಲಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ಅಧಿಕಾರದಲ್ಲಿ ಉಳಿದುಕೊಳ್ಳಬೇಕು ಎನ್ನುವ ಚಿಂತೆ ನನಗೆ ಇಲ್ಲ. ಅದರಲ್ಲಿ ಯಶ ಕಾಣಲಿಕ್ಕೆ ಸಾಧ್ಯವಿಲ್ಲದಿದ್ದರೆ ಈ ಸದನದಲ್ಲಿ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅದು ಯಾರು ಏನೇ ಆಗಲಿ ಈ ಮಾತನ್ನು ಕಠಿಣವಾಗಿ ಹೇಳುತ್ತೇನೆ, ಜನತಾ ಸರ್ಕಾರ ಬಂದ ಮೇಲೆ ಇವುಗಳ ಖರ್ಚು ೮೯ ಕೋಟಿಯಿಂದ ೨೨೬ ಕೋಟಿಗೆ ಏರಿ ಹೋಗುತ್ತಿದೆ, ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಶಾಮೀಲಾಗಿದ್ದಾರೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ. — ಪಾಸಿಟೀವ್ ಆಗಿ ಹೇಳಲಿಲ್ಲ.

ಶ್ರೀ ಎಚ್ ಡಿ ದೇವೇಗೌಡ. — ನೆಗೆಟೀವ್ ಆಗಿಯೇ ಹೇಳಿದ್ದೀರಿ ಎಂದು ಇಟ್ಟುಕೊಳ್ಳೋಣ. ತೆಲುಗು ಗಂಗಾ ಯೋಜನೆಯಿಂದ ನನ್ನ ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಂಬಂಧವನ್ನು ಕೆಡಿಸುವಂಥ ಪ್ರಯತ್ನ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಕರ್ನಾಟಕ ಸರ್ಕಾರ ಯಾವ ಕಠಿಣವಾದ ನಿಲುವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಲೆಕ್ಕಾಚಾರ ಮಾಡಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆಂದು ಸನ್ಮಾನ್ಯ ಸದಸ್ಯರಿಗೆ ನಿವೇದನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಯಾರಿಗೂ ಸಂಕೋಚ ಬೇಡವೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ ತೆಲುಗುಗಂಗಾ ವಿಚಾರದಲ್ಲಿ ನೀವು ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಹಿಂದೆ ಇದೇ ಸದನದಲ್ಲಿ ಚರ್ಚೆಗೆ ಬಂದು ನಿಮ್ಮ ನಿಲುವು ಸರಿಯಾಗಿ ಇದೆ ಎಂದು ಸದನದಲ್ಲಿ ಅಭಿಪ್ರಾಯ ಬಂದಿದ್ದು, ಇದೇ ಮಾನ್ಯ ಮುಖ್ಯಮಂತ್ರಿಗಳು ತಳೆದಂಥ ನಿಲುವು ಏನು ಇದೆ ಅದರ ಬಗ್ಗೆ ಅನೇಕ ಜನ ತಕರಾರು ಮಾಡಿದ್ದರು. ಇವೊತ್ತಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಿ ಹೇಳಲಿ. ಈ ಸದನದಲ್ಲಿ ನನ್ನ ವಿಚಾರವನ್ನು ಅರ್ಥಮಾಡಿಕೊಂಡು ಇಂದು ಕೂಡ ಅವರು ಹೇಳಲಿ.

ಶ್ರೀ ಎಸ್. ಬಂಗಾರಪ್ಪ. —ನಾನು ಒಂದು ಸಲಹೆ ಮಾಡುತ್ತೇನೆ. ಕೇಂದ್ರದವರು ಒಪ್ಪಿಗೆ ಕೊಡಲಿ, ಬಿಡಲಿ ನಾವು ಈ ಯೋಜನೆಗಳನ್ನು ಮುಗಿಸಿಯೇ ಮುಗಿಸುತ್ತೇವೆಂದು ಹೋಗುತ್ತಿದ್ದಾರೆ. ಅವರಿಗೆ ಇರತಕ್ಕ ಬಿಗಿತನ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೆ ಇಲ್ಲ ಎಂಬುದು ಜನಜನಿತವಾದ ವಿಚಾರ. ಆದ್ದರಿಂದ ಒಂದು ಕೆಲಸ ಮಾಡಿ, ಎನ್. ಟಿ ಆರ್. ಮುಖ್ಯ ಮಂತ್ರಿಗಳು ಏನಿದ್ದಾರೆ ಅವರ ಕೇಸರಿ ರುಮಾಲು ಮತ್ತು ಪಂಚೆಯನ್ನು ನಮ್ಮ ಮುಖ್ಯ ಮಂತ್ರಿಗಳಿಗೆ ಹಾಕಿ ಇವರ ಪ್ಯಾಂಟನ್ನು ಅವರಿಗೆ ಕಳುಹಿಸಿ ಕೊಡುವುದು ಒಳ್ಳೆಯದು.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಕರ್ನಾಟಕಕ್ಕೆ ಅಧಿಕಾರ ಗಳಿಸಿ ಕೊಟ್ಟವರು ಹೆಗಡೆಯವರು.

ಶ್ರೀ ಎಸ್. ಬಂಗಾರಪ್ಪ —ಅವರ ಬಟ್ಟೆ ಹೊಲಿದು ರೆಡಿ ಇದ್ದರೆ ಅದನ್ನು ತಂದು ಇವರಿಗೆ ಹಾಕಿದರೆ ಗಂಡುಸಂತನ ಬಂದೀತು ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ಮಾತನಾಡುತ್ತಾ ಹೇಳಿದಿ...

ಅಧ್ಯಕ್ಷರು.—ಅವರು ಸರಿಯಾಗಿ ಉತ್ತರ ಹೇಳುವುದು ಬೇಡವೆ ? ಏತಕ್ಕೆ ಇಂಟರ್‌ಫಿಯರ್ ಮಾಡುತ್ತೀರಿ.

ಶ್ರೀ ಎಸ್. ಬಂಗಾರಪ್ಪ. —ಅವರನ್ನು ಬೇರೆ ಸಂದರ್ಭದಲ್ಲಿ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್‌ಪ್ಲಸ್ ವಾಟರ್ ಏನಿದೆ ಅದನ್ನು ನಾವು ಯೂಸ್ ಮಾಡುತ್ತಿಲ್ಲ. ಅದನ್ನು ನಾವು ಯೂಸ್ ಮಾಡುತ್ತೇವೆಂದು ಅವರು ಹೇಳುತ್ತಿದ್ದಾರೆ. ಹಿಂದೂ ಪತ್ರಿಕೆಯಲ್ಲಿ, ಸರ್‌ಪ್ಲಸ್ ವಾಟರ್ ಇಲ್ಲದೆ ನಮಗೆ ಏನು ಕೊಟ್ಟಿದ್ದಾರೆ ಅದರಲ್ಲಿ ನಾವು ಇರಿಗೇಷನ್ ಪ್ರಾಜೆಕ್ಟ್ ಮಾಡುತ್ತೇವೆಂದು ಹೇಳಿದ್ದಾರೆ ಆದಿಲ್ಲದೆ ಅದನ್ನು ಮಾಡುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಸ್ಪಷ್ಟತೆ ಇಲ್ಲ ಅನ್ನಿಸುತ್ತದೆ, ಮಾನ್ಯ ಮುಖ್ಯ ಮಂತ್ರಿಗಳು ಒಂದು ರೀತಿ ಹೇಳುತ್ತಾರೆ, ನೀವು ಒಂದು ರೀತಿ

ಹೇಳುತ್ತಿದ್ದೀರಿ. ಈ ಬಗ್ಗೆ ಭಿನ್ನಾಭಿಪ್ರಾಯ ಇರುವ ಹಾಗೆ ಕಂಡುಬರುತ್ತಿದೆ. ಆದ್ದರಿಂದ ಜಂಟಿ ಹೇಳಿಕೆ ಕೊಡಿ ಒಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ಕಡೆ ೨೫ ಟಿ.ಎಂ.ಸಿ.ಎಫ್.ಟಿ. ಇದೆ ಇನ್ನೊಂದು ಕಡೆ ೮೫ ಟಿ.ಎಂ.ಸಿ.ಎಫ್.ಟಿ. ಇದೆ ಇದರ ಮೇಲೆ ಡಿಫೆಂಡ್ ಮಾಡಬೇಕಾಗಿಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ತಾವೇನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಇಬ್ಬರೂ ಜಂಟಿ ಹೇಳಿಕೆ ಕೊಡಬೇಕಾದ ಅವಶ್ಯಕತೆ ಇಲ್ಲ ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ಯಾವ ಕಾಠಿಣ್ಯದ ನಿಲುವು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಮತ್ತು ಕೇಂದ್ರಕ್ಕೆ ಹೇಳಿದ್ದಾರೆ ಕೇಂದ್ರದ ನೀರಾವರಿ ಮಂತ್ರಿಗಳ ಸಭೆಯಲ್ಲಿ ಹೇಳಿದ್ದಾರೆ. ಲಿಖಿತ ಮೂಲಕ ಕೂಡ ತಿಳಿಸಿದ್ದಾರೆ ನಿಜವಾಗಿ ಮಲಗಿರುವವರನ್ನು ಎಬ್ಬಿಸಬಹುದು. ಆದರೆ ಮಲಗಿದ ಹಾಗೆ ನಟನೆ ಮಾಡಿರುವವರನ್ನು ಎಬ್ಬಿಸುವುದು ಕಷ್ಟ. ಜಂಟಿ ಹೇಳಿಕೆ ಎಂದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನೀವಿಬ್ಬರೂ ಜಂಟಿಯಾಗಿ ಇರಬೇಕೆಂದು...

ಶ್ರೀ ಎಂ.ಎಸ್. ಕೃಷ್ಣನ್.—ನಮಗೆ ವಿಚಾರ ಅನುಮಾನವಾಗಿದೆ. ಆದ್ದರಿಂದ ಜಂಟಿ ಹೇಳಿಕೆ ನೀಡಿದರೆ. ಒಳ್ಳೆಯದು.

ಶ್ರೀ ಹೆಚ್.ಡಿ. ದೇವೇಗೌಡ.—ಬಚಾವತ್ ಕಮಿಟಿಯಲ್ಲಿ ಏನು ಹೇಳಿದ್ದಾರೆ ಅದಕ್ಕೆ ಯಾರೇ ಎಷ್ಟೇ ರಾಜಕೀಯ ಪ್ರಭಾವ ಬೀರಿದರೂ ಅದಕ್ಕೆ ವಿರುದ್ಧವಾಗಿ ಹೋಗುವುದಕ್ಕೆ ಸಾಧ್ಯವಿಲ್ಲ. ಸರ್‌ಪ್ಲಸ್ ತಳಗಡೆ ಇದ್ದರೆ ಎಂಬ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ, ಆ ಪದ ಪ್ರಯೋಗ ಈಗ ಬೇಕಾಗಿಲ್ಲ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಏನೇ ಪ್ರಯತ್ನ ನಡೆಸಿದರೂ ನಮ್ಮ ರಾಜ್ಯದಲ್ಲಿ ಆಗತಕ್ಕದ್ದು ಕೇವಲ ೪೦ ಭಾಗ ಮಾತ್ರ. ಹೊಸ ವಿಧಾನವನ್ನು ಅನುಸರಿಸಿ ನೀರನ್ನು ತುಂಬಾ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳುತ್ತೇವೆಂದರೂ ೪೦ ಪರ್ಸೆಂಟ್ ನೀರಾವರಿಗೆ ತರುವುದು ಕಷ್ಟ. ಭೂಗರ್ಭದ ಜಲವನ್ನೆಲ್ಲಾ ತೆಗೆದರೂ ಅದಕ್ಕಿಂತ ಹೆಚ್ಚಿಗೆ ಸಾಧ್ಯವಾಗಲಾರದು. ೬೦ ಪರ್ಸೆಂಟ್ ಜನ ಒಣ ಭೂಮಿ ಬೇಸಾಯ ಮಾಡಿಕೊಂಡು ಜೀವನ ಮಾಡುವವರಿಗೆ ಬೇರೊಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ.

೧೨-೩೦ ಪಿ.ಎಂ.

ಆ ನೀತಿಯ ಬಗ್ಗೆ ಚರ್ಚೆ ಆಗಬೇಕೆಂಬ ಉದ್ದೇಶದಿಂದ ಚರ್ಚೆ ಮಾಡುತ್ತಿದ್ದೇನೆ. ಸಾಧನೆಯ ಬಗ್ಗೆ ಹೇಳುತ್ತಿಲ್ಲ. ಇವತ್ತು ಒಣ ಖುಷ್ಕಿ ಬೇಸಾಯ ಅಭಿವೃದ್ಧಿಗೆ ಹೊಸ ಕಾರ್ಯಕ್ರಮವನ್ನು ರೂಪಿಸಿ ಕಾರ್ಯಾಚರಣೆಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇವೆ. ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ, ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಆರ್ಥಿಕವಾಗಿ ದುರ್ಬಲರಾದವರಿಗೆ ಏನು ಮಾಡಬೇಕು ಎಂಬ ಪ್ರಶ್ನೆಯ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಅದನ್ನೂ ಮಾಡಬೇಕಲ್ಲವೇ ? ಅದರ ಬಗ್ಗೆ ಒಂದು ಮಾತಾದರೂ ಹೇಳಿದ್ದರೆ ಸಂತೋಷವಾಗುತ್ತಿತ್ತು. ಗಂಗಾಕಲ್ಯಾಣ ಯೋಜನೆ ರೂಪಿಸಿದೆ. ಅದು ಯಾರಿಗೆ ಆಗಿರುವುದು? ಒಂದು ಮಾತಾದರೂ ಖರ್ಗೆಯವರು ಹೇಳಬಹುದಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವೇ ಉತ್ತರ ಕೊಡುತ್ತೀರಿ ಎಂದು ಗೊತ್ತಿದ್ದರೆ ಹೇಳುತ್ತಿದ್ದೆ. ನೀವಿಬ್ಬರೂ ಜಂಟಿ ಎಂದು ನನಗೆ ಗೊತ್ತಿರಲಿಲ್ಲ. ಒಂಟಿಯಾಗಿದ್ದೀರಿ ಎಂದು ಕೊಂಡಿದ್ದೆ.

ಶ್ರೀ ಕೆ. ಲಕ್ಕಪ್ಪ.—ಸಾಮೂಹಿಕ ನೀರಾವರಿ ವ್ಯವಸ್ಥೆ ಎಂದು ಹಿಂದಿನ ಸರ್ಕಾರವೂ ಅದನ್ನು ಮಾಡಿತ್ತು. ಈಗ ಗಂಗಾಕಲ್ಯಾಣ ಎಂದು ಅದಕ್ಕೆ ಹೊಸ ಹೆಸರು ಇಟ್ಟಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಲಕ್ಕಪ್ಪನವರೇ ನನಗೆ ಗೊತ್ತಿದೆ. ಅದರಲ್ಲಿ ೭೦ ಪರ್ಸೆಂಟ್ ಸಬ್ಸಿಡಿ, ೩೦ ಪರ್ಸೆಂಟ್ ಲೋನ್ ಕೊಡುತ್ತಿದ್ದರು, ಬಾಕಿಯ ಮೈಂಟೆನೆನ್ಸ್ ಪೂರ್ಣ ಅವರೇ ಮಾಡಿಕೊಳ್ಳಬೇಕಾಗಿತ್ತು. ಇವೊತ್ತು ಲೋನ್ ಕೊಡುತ್ತಿಲ್ಲ. ಇಡೀ ಹಿಂದೂಸ್ಥಾನದಲ್ಲಿ ಪ್ರಥಮಬಾರಿಗೆ ಮಾದರಿಯಾದ ಸ್ಕೀಮನ್ನು ನಾವು ಜಾರಿಗೆ ತಂದಿದ್ದೇವೆ. ಇದು ಕೇಂದ್ರಸರ್ಕಾರ

ಹೇಳಿದ ಮಾತು. ಟಿ.ವಿ.ಯಲ್ಲಿ ಗಂಗಾ ಕಲ್ಯಾಣದ ಬಗ್ಗೆ ಅಂದು ರಿಲೇ ಆಯಿತು ಎಂದು ಕೇಳಿದೆ. ರಿಲೇ ಮಾಡಿ ಕೊನೆಯಲ್ಲಿ ಇದು ಐ.ಆರ್.ಡಿ.ಪಿ. ಸ್ಕೀಮಿನಲ್ಲಿ ಮಾಡಿರುವುದು ಎಂದು ಹೇಳಿದರು ಎಂದು ಕೇಳಿದೆ. ನಾನು ಟಿ.ವಿ. ನೋಡಲಿಲ್ಲ. ನನಗೆ ಆ ಬಗ್ಗೆ ಚಿಂತೆ ಇಲ್ಲ. ದೇಶದ ಸಮಸ್ಯೆ ಬಗೆಹರಿಸುವಾಗ ಹೆಸರು ಏನಾದರೂ ಕರೆದುಕೊಳ್ಳೋಣ. ಆದರೆ ಪ್ರಾಮಾಣಿಕ ಚಿಂತನೆ ಮಾಡಿದ್ದೇವೆ ಎಂಬ ಮಾತನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿನಯಕುಮಾರ್ ಸೊರ್ಕೆ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದನ್ನು ಮಾಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಲವಾರು ಸ್ಕೀಮನ್ನು ನಾನೇ ಪ್ರಾರಂಭ ಮಾಡಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ನೀವು ಚೆನ್ನಾಗಿದ್ದೀರಲ್ಲ ಅದಕ್ಕೆ ನಿಮಗೆ ಬೇಕಾಗಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಹಳ್ಳಿ ಹೆದ್ದಾರಿ ಯೋಜನೆ ಇಂಪ್ಲಿಮೆಂಟ್ ಮಾಡಿದೆವು. ಸೇತು ಬಂಧನ ಕಾರ್ಯಕ್ರಮ ಮಾಡಿದೆವು. ಇವು ಕಾರ್ಯಕ್ರಮಗಳಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಒಳ್ಳೆಯ ಹೆಸರು.

ಶ್ರೀ ಎಸ್. ಬಂಗಾರಪ್ಪ.—ಕಾರ್ಯಕ್ರಮ ಒಳ್ಳೆಯದಲ್ಲ ಎಂದು ಹೇಳಲಿಲ್ಲ. ಅದೇನಾಯಿತು ಎಂದು ಕೇಳಿದ್ದುದು.

ಶ್ರೀ ಎಚ್.ಡಿ. ದೇವೇಗೌಡ.—ಡ್ರೈ ಲ್ಯಾಂಡ್...

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೆಯ ಎಕ್ಸ್‌ಪರ್ಟ್ ಕಂಡುಹಿಡಿದಿದ್ದೀರಿ ಒಳ್ಳೆಯ ಒಳ್ಳೆಯ ಹೆಸರು ಕೊಟ್ಟಿದ್ದಾರೆ. ಗಂಗಾ ಕಲ್ಯಾಣ, ಸೇತು ಬಂಧನ...

ಶ್ರೀ ಎಚ್. ಜಿ. ಚನ್ನಪ್ಪ.—ಮಾನ್ಯ ಕೃಷ್ಣನ್ ಅವರು ಸಿಟಿಯಲ್ಲಿರುವವರು. ನಿಮಗೆ ಇದೆಲ್ಲಾ ಅರ್ಥವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮಗೂ ಅರ್ಥವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ಉಳ್ಳಂಥವರ ಶಕ್ತಿಯನ್ನು ಸ್ವಲ್ಪ ಮಟ್ಟಿಗೆ ತಡೆಹಿಡಿಯಬೇಕು ದೊಡ್ಡ ಶ್ರೀಮಂತರ ಬಗ್ಗೆ ನಾನು ಹೇಳುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಎರಡು ವರ್ಗದ ಜನರು ಇದ್ದಾರೆ. ಒಂದು, ೧೦೦ಕ್ಕೆ ೩೦ ಜನ ಕೃಷಿ ಕಾರ್ಮಿಕರು ಇದ್ದಾರೆ. ಒಂದು ಗುಂಟೆ ಜಮೀನೂ ಇಲ್ಲದೇ ಇರುವವರು, ನಿಲ್ಲುವುದಕ್ಕೆ ನೆಲೆ ಇಲ್ಲದೇ ಇರುವವರು ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಅವರ ಪಾಯಿಂಟ್. ನಮ್ಮ ಪಾಯಿಂಟ್‌ಗೆ ಬನ್ನಿ

ಶ್ರೀ ಎಚ್.ಡಿ. ದೇವೇಗೌಡ.—ನೀವು ಹೇಳಿದ್ದುದು ಒಳ್ಳೆಯದು ಮಾಡಿ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಕೃಷಿ ಕಾರ್ಮಿಕರು ಮತ್ತು ಬಡರೈತರ ಬಗ್ಗೆ ಮಾತನಾಡಿ, ಒಪ್ಪಿಕೊಳ್ಳುತ್ತೇವೆ. ಶ್ರೀಮಂತರ ಪರವಾಗಿರುವವರು ಮಾತನಾಡಿಕೊಂಡು ಹೋಗಲಿ.

ಶ್ರೀ ಎಚ್. ಡಿ. ದೇವೇಗೌಡ.—ಹಳ್ಳಿಗಳಲ್ಲಿ ಶ್ರೀಮಂತ ರೈತ ಎಂಬ ಮಾತನ್ನು ಮರೆಯಬೇಕು. ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದಂಥ [illegible] ಅರಸು ಸರ್ಕಾರ ಇರಲಿ, ಮಾನ್ಯ ವೀರಪ್ಪ ಮೊಯಿಲಿ ಅವರ ಸರ್ಕಾರ ಇರಲಿ ಕರ್ನಾಟಕದಲ್ಲಿ ಹಿಂದೆ ಇದ್ದ ಯಾವುದೇ ಸರ್ಕಾರ ಇರಲಿ ಆ ಶ್ರೇಯಸ್ಸನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ [illegible]ಲ್ಲಿ ಪ್ರಾಮಾಣಿಕ ಪ್ರಯತ್ನ ಏನಾದರೂ ನಡೆದಿದ್ದರೆ ಅದು ಕರ್ನಾಟಕದಲ್ಲಿ ಎಂದು ನಾವು ಹೇಳಬೇಕಾಗುತ್ತದೆ. ನಾವು ಆ ಕಾಯಿದೆಯನ್ನು ಈ ಸದನದಲ್ಲಿ ಪಾಸು ಮಾಡಿದಾಗ, ಆ ಒಂದು ಲೆಜಿಸ್ಲೇಷನ್ ಅವಿರೋಧವಾಗಿ ಆಯಿತು. ಅಂದು ನಾನು ವಿರೋಧಪಕ್ಷದ ನಾಯಕನ ಸ್ಥಾನದಲ್ಲಿದ್ದೆ. ಪಕ್ಷದ [illegible]ವನ್ನು ತಾಳದೆ ಒಮ್ಮತದ ನಿಲುವನ್ನು ಅಂದಿನ ಸಭೆ ತಾಳಿತು. ತಾವೂ ಕೂಡ ಸಭೆಯಲ್ಲಿದ್ದಿರೆಂದು [illegible]ಣುತ್ತದೆ. ಇವೊತ್ತು ಬಿಹಾರ್‌ನಲ್ಲೂ ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ, ಈ [illegible]ಜ್ಯದಲ್ಲಿ ಶ್ರೀಮಂತ ರೈತ ಇಲ್ಲ, ೧೦ ಎಕರೆ ಇಟ್ಟುಕೊಂಡಿರತಕ್ಕಂತಹ ಒಬ್ಬ ರೈತ ಕಬ್ಬು ಬೆಳೆದು [illegible] ಲಕ್ಷ ರೂಪಾಯಿಗಳವರೆಗೆ ಸಂಪಾದನೆ ಮಾಡಬಹುದು. ಆದರೆ ಎಲ್ಲರೂ ಅಲ್ಲ. ಆದರೆ ಆ ಒಂ[illegible] ವಾತಾವರಣವನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ನೀರಾವರಿಯನ್ನು ಸ್ವಲ್ಪ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಾನು

ಅವರನ್ನು ಬಿಟ್ಟು ಎರಡನೆಯ ದರ್ಜೆಗೆ ಬರುತ್ತೇನೆ. ರೈತಾಪಿ ಕಸುಬನ್ನೇ ನೆಚ್ಚಿ ಜೀವನ ಮಾಡತಕ್ಕಂತಹ ವರಿಗೆ ಹೆಚ್ಚು ಸಹಾಯವನ್ನು ಮಾಡುವ ದಿಸೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಅದಕ್ಕಿಂತ ೩೦ ಪರ್ಸೆಂಟ್ ಜನರು ಯಾರು ಕೃಷಿ ಕಾರ್ಮಿಕರು ಇದ್ದಾರೆ, ವಿರೋಧ ಪಕ್ಷದ ನಾಯಕರು ಎಲ್ಲಿ ದೋಷ ಇದೆ ಎಂಬುದಾಗಿ ಹೇಳಿದ್ದಾರೋ, ಈ ಕಾರ್ಯಕ್ರಮ ರೂಪಿಸಿದ್ದೇ ಅವರಿಗೋಸ್ಕರ. ಅವರನ್ನು ಗುರುತು ಮಾಡುವಾಗ ವಿಲೇಜ್ ಅಕೌಂಟೆಂಟರು ಕೆಲವು ದೋಷಗಳನ್ನು ಮಾಡಿರಬಹುದು. ದೋಷ ಇರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರೋ ಒಬ್ಬ ಹೆಣ್ಣುಮಗಳು, ೫೦ ರೂಪಾಯಿ ಸಿಕ್ಕುತ್ತದೆಂದು ಗಂಡ ಇಲ್ಲ ಸತ್ತುಹೋಗಿದ್ದಾನೆ ಎಂದು ಸುಳ್ಳು ಅಫಿಡವಿಟ್ ಕೊಟ್ಟು ಸಹಾಯವನ್ನು ತೆಗೆದುಕೊಂಡಿರಬಹುದು. ಆದರೆ ಈ ಕಾರ್ಯಕ್ರಮವನ್ನು ರೂಪಿಸಿದ್ದೇ ಈ ವರ್ಗದ ಜನರ ಏಳಿಗಾಗಿ ಎನ್ನುವುದನ್ನು ಮರೆಯಬಾರದು ಅದು ಇಲ್ಲ ಎಂದು ಯಾರೂ ಹೇಳಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ೨.೦೫ ರೂಪಾಯಿಗೆ ಒಂದು ಕೇಜಿ ಅಕ್ಕಿಯನ್ನು ಕೊಡತಕ್ಕಂತಹ ಕಾರ್ಯಕ್ರಮ ಇರಬಹುದು. ಯಾರು ಕಾರ್ಮಿಕರು ಇದ್ದಾರೆ, ಕೇವಲ ನಗರದಲ್ಲಿರತಕ್ಕ ಸಂಘಟಿತ ಕಾರ್ಮಿಕರ ಪ್ರಶ್ನೆ ಅಲ್ಲ. ಅಸಂಘಟಿತ ಕಾರ್ಮಿಕರು ಯಾರು ಗ್ರಾಮಾಂತರ ಪ್ರದೇಶದಲ್ಲಿ ಕೂಲಿ ಮಾಡಿ ಜೀವನ ಮಾಡುತ್ತಿದ್ದಾರೆ, ಅವರಿಗೆ ಎಲ್ಲಾ ಕಡೆ ೨೦-೨೫ ರೂಪಾಯಿಗಳವರೆಗೆ ಸಂಪಾದನೆ ಮಾಡತಕ್ಕ ವಾತಾವರಣವನ್ನು ನಾವು ನಿರ್ಮಾಣ ಮಾಡಿಲ್ಲ. ನಾನು ಮೊನ್ನೆ ಪಾವಗಡಕ್ಕೆ ಹೋಗಿದ್ದೆ. ಅಲ್ಲಿ ಯಾವ ಮೇಲ್ವರ್ಗದವರೂ ಇಲ್ಲ. ಇಡೀ ತಾಲ್ಲೂಕಿನಲ್ಲಿ ಸುತ್ತಾಡಿದ್ದೇನೆ. ಅಲ್ಲಿರತಕ್ಕವರು ಹಿಂದುಳಿದ ವರ್ಗದವರು, ಹರಿಜನರು ಹಾಗೂ ನಾಯಕ ಜನಾಂಗದವರು. ನಾನು ಪ್ರತಿ ಹಳ್ಳಿಗೆ ಹೋಗಿ ವಿಚಾರ ಮಾಡಿದ್ದೇನೆ, ಇವೊತ್ತೂ ಅಲ್ಲಿ ೨ ರೂಪಾಯಿಗಳಿಗಿಂತ ಕೂಲಿ ಹೆಚ್ಚು ಸಿಕ್ಕುವುದಿಲ್ಲ. ದಿನಕ್ಕೆ ೨ ರೂಪಾಯಿಗಳ ಕೂಲಿ ತೆಗೆದುಕೊಂಡು ೪ ರೂಪಾಯಿಗಳನ್ನು ಕೊಟ್ಟು ಮಾರುಕಟ್ಟೆಯಲ್ಲಿ ಅವನು ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವೇ ? ಇಲ್ಲ. ಅದಕ್ಕಾಗಿ ೨ ರೂಪಾಯಿಗೆ ಒಂದು ಕೇಜಿ ಅಕ್ಕಿಯನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರಕ್ಕೂ ಸಂಪನ್ಮೂಲದ ಇತಿಮಿತಿ ಇದೆ. ಇನ್ನೊಂದು ಉತ್ಪಾದನಾ ವೆಚ್ಚವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ಉತ್ಪಾದನಾ ಶಕ್ತಿಯನ್ನೂ ಹೆಚ್ಚು ಮಾಡುವುದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಇದರ ಬಗ್ಗೆ ಏನಾದರೂ ದೋಷ ಇದ್ದರೆ, ಆ ದೋಷವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಆದರೆ ಈ ಕಾರ್ಯಕ್ರಮ ಹಿಂದಿನ ಸರ್ಕಾರಕ್ಕಿಂತ ವಿಭಿನ್ನವಾದ ಕಾರ್ಯಕ್ರಮವೆಂದು ಈ ಸದನದಲ್ಲಿ ನಾನು ಹೇಳಲೇಬೇಕಾಗುತ್ತದೆ. ಅದಕ್ಕೋಸ್ಕರ, ರಾಜಕೀಯವಾಗಿಯಾಗಲಿ, ಆರ್ಥಿಕವಾಗಿಯಾಗಲಿ ಈ ಮೂರು ವರ್ಷಗಳಲ್ಲಿ ನಮ್ಮ ಹಿಂದಿನ ಸರ್ಕಾರಕ್ಕಿಂತ ವಿಭಿನ್ನವಾದ ಹಲವಾರು ಕಾರ್ಯಕ್ರಮಗಳನ್ನು ನಾವು ರೂಪಿಸಿದ್ದೇವೆ. ಆರ್ಥಿಕ ನೀತಿಯ ಬಗ್ಗೆಯಾಗಲಿ. ರಾಜಕೀಯ ನೀತಿಯ ಬಗ್ಗೆಯಾಗಲಿ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಈ ಮಾತನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಸನ್ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮಾತನ್ನು ಹೇಳಿದರು. ದುರ್ಬಲ ವರ್ಗದವರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಬಡ್ತಿಯನ್ನು ಕೊಡುವಾಗ ಅನ್ಯಾಯ ಮಾಡಿದ್ದೀರಿ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗಿದೆ. ರೂಲ್ಸ್ ಆ ರೀತಿ ಇದೆ.

ಶ್ರೀ ಎಚ್.ಡಿ. ದೇವೇಗೌಡ.—ಯಾವ ರೂಲ್ಸು ಅದು. ನೀವು ಮಾಡಿದ್ದ ರೂಲ್ಸೇ ಅದು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅದನ್ನು ತಿದ್ದುಪಡಿ ಮಾಡಬಾರದು ಎಂದು ಇದೆಯೋ ?

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಖರ್ಗೆಯವರು ಮಾಡಿದ ರೂಲ್ಸನ್ನೇ ನಾನು ಜಾರಿಗೆ ಕೊಟ್ಟಿರುವುದು. ನಾವು ಯಾವುದೇ ಹೊಸ ರೂಲ್ಸನ್ನು ತಂದಿದ್ದೇವೆಂದರೆ ಆ ದೋಷಕ್ಕೆ ನಾನು ಒಳಗಾಗುತ್ತೇನೆ. ಅವರು ಹೇಳಿದ ರಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಎ.ಇ ಯಿಂದ ಎ.ಇ.ಇ. ಹುದ್ದೆಗೆ ೫೩೦ ಜನರಿಗೆ ಪ್ರಮೋಷನ್ ಕೊಟ್ಟಿದ್ದು ಇದರಲ್ಲಿ ೮೨ ಜನ ಎಸ್.ಸಿ ಹಾಗೂ ೧೭ ಎಸ್.ಟಿ ಇದ್ದಾರೆ. ಹಾಗೆಯೇ ಎ.ಇ.ಇ ಯಿಂದ ಇ.ಇ. ಹುದ್ದೆಗೆ ೬೦ ಜನರಲ್ಲಿ ೧೯ ಜನ ಎಸ್.ಸಿ ಗೆ ಪ್ರಮೋಷನ್ ಸಿಕ್ಕಿದೆ. ಹಾಗೆಯೇ ಇ.ಇ.ನಿಂದ ಎಸ್.ಇ. ಹುದ್ದೆಗೆ ೬೫ ಜನರಿಗೆ ಪ್ರಮೋಷನ್ ಕೊಟ್ಟಿದ್ದು ಅದರಲ್ಲಿ ೧೦ ಜನ ಎಸ್.ಸಿ. ಹಾಗೂ ಎಸ್.ಟಿ.ಗಳಿಗೆ ಪ್ರಮೋಷನ್ ಸಿಕ್ಕಿದೆ. ಎಸ್.ಇ.ನಿಂದ

ಸಿ.ಇ.ಗೆ ೨೦ ಜನರಲ್ಲಿ ೩ ಜನ ಎಸ್.ಸಿ. ಜನರಿಗೆ ಪ್ರಮೋಷನ್ ಸಿಕ್ಕಿದೆ. ಸಿ.ಇ.ಗೆ ಕೆಲವರಿಗೆ ಸೂಪರ್ ಟೈಮ್ ಸ್ಕೇಲ್ ಕೊಟ್ಟಿದ್ದು ಅದರಲ್ಲಿ ೭ ಜನರ ಪೈಕಿ ೨ ಜನರಿಗೆ ಎಸ್.ಸಿ ಯವರಿಗೆ ಸಿಕ್ಕಿದೆ. ಏಳರಲ್ಲಿ ಇಬ್ಬರಿಗೆ ಎಂದರೆ ಎಷ್ಟು ಪರ್ಸೆಂಟ್ ಆಗುತ್ತದೆ? ಪ್ರಮೋಷನ್‌ನಲ್ಲಿ ಅನ್ಯಾಯ ಆಗಿದೆ ಎಂದು ಅವರು ಹೇಳಿದರು. ಇವೊತ್ತು ನೆಟ್ ಇಂಪ್ಯಾಕ್ಟ್ ಏನು ಎಂಬುದನ್ನು ತಾವು ನೋಡಬೇಕಾಗುತ್ತದೆ. ನನ್ನ ಇಲಾಖಾ ಬೇಡಿಕೆಯ ಚರ್ಚೆಗೆ ಬಂದಾಗ ನಾನು ವಿವರವಾದ ಉತ್ತರ ಕೊಡುತ್ತೇನೆ. ಸಿ.ಇ. ಹಾಗೂ ಎಸ್.ಇ. ಗಳನ್ನು ತೆಗೆದುಕೊಳ್ಳುವುದಾದರೆ ಇನ್ನು ೧೦ ವರ್ಷದಲ್ಲಿ ಎಸ್.ಸಿ, ಕಮ್ಯೂನಿಟಿ ೯೦ ಪರ್ಸೆಂಟ್‌ಗೆ ಹೋಗುತ್ತದೆ. ನಾನು ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿಸಿದ್ದೇನೆ. ಇದೊಂದೇ ವರ್ಗಕ್ಕೆ ೯೦ ಪರ್ಸೆಂಟ್ ಆಗ, ಹೋಗುತ್ತದೆ. ಒಂದು ಟೈಮ್ ಕನ್‌ಸೆಷನ್ ಎಂದು ಏನು ಇತ್ತು ಅದನ್ನು ಇಮ್ಮಿಡಿಯೆಟ್ ತೆಗೆದುಹಾಕಬೇಕೆಂದು ಫೈಲ್ ಬಂತು. ಟೂ ಟೈಮ್ಸ್‌ಗೆ ನಾವು ಮತ್ತೆ ಅದನ್ನು ಎಕ್ಸ್‌ಟೆಂಡ್ ಮಾಡಿದ್ದೇವೆ, contrary to the decision taken by the then Cabinet.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ - ನಾವು ಅಷ್ಟು ಮಾಡಿದ್ದೇವೆ. ಒನ್ ಟೈಮ್ ಎಂದು ಏನು ಆಗ ಬಂತು ಆ ಕಾಲದಲ್ಲೂ ಕೆಲವು ಜನ ಸದಸ್ಯರು ಅದಕ್ಕೆ ವಿರುದ್ಧ ಇದ್ದರು. ಆಗ ಒನ್ ಟೈಮ್ ಎಂದು ಮಾಡಿದೆವು. ತದನಂತರ ಪೇ ಸ್ಕೇಲ್‌ನಲ್ಲಿ ಜ್ಯೂನಿಯರ್ ಸ್ಕೇಲ್, ಸೀನಿಯರ್ ಸ್ಕೇಲ್ ಎಂದು ಹೇಳಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಪೋಸ್ಟ್ ಆದವು. ಎ.ಇ.ಇ.ನಿಂದ ಇ.ಇ.ಗೆ ಬರಬೇಕಾದರೆ ಈ ಪೇ ಸ್ಕೇಲ್‌ನಲ್ಲಿ ಬರುತ್ತಾ ಇಲ್ಲ. ಆದುದರಿಂದ ಈ ರೋಸ್ಟರ್ ಸಿಸ್ಟಮ್‌ನಲ್ಲಿ ಅವರಿಗೆ ಬೆನಿಫಿಟ್ ಸಿಗುತ್ತಾ ಇಲ್ಲ. ಅದಕ್ಕೆ ನೀವು ತಿದ್ದುಪಡಿ ತನ್ನಿ. ಒಂದೊಂದು ಕಾಲದಲ್ಲಿ ಒಂದೊಂದು ಕಮಿಟಿ ಯವರು ನೂರು ಪರ್ಸೆಂಟ್ ಇದ್ದರು. ಆದರೆ ಇವತ್ತು ಸಂತೋಷ ಏನೆಂದರೆ ಅಟ್ ಲೀಸ್ಟ್ ೯೦ ಪರ್ಸೆಂಟ್ ಜನಾ ಸಿಕ್ಕುತ್ತಾರಲ್ಲಾ ಎಂಬುದು. ಇದು ಮುಂದೆ ನಡೆದುಕೊಂಡು ಹೋದರೆ ಆಫ್ಟರ್ ೧೦ ಇಯರ್ಸ್ ಯಾರೂ ಸಿಗುವುದಿಲ್ಲ. ಈಗ ಸೀನಿಯರ್ ಪೇ ಸ್ಕೇಲ್ ಹೆಚ್ಚು ಆಗಿರುವುದರಿಂದ ಅವರಿಗೆ ಏನು ತೊಂದರೆ ಬಂದಿದೆ ಆ ಬಗ್ಗೆ ಅಮೆಂಡ್‌ಮೆಂಟ್ ತನ್ನಿ ಅಥವಾ ತಮ್ಮ ಕ್ಯಾಬಿನೆಟ್‌ನಲ್ಲಿ ಇದನ್ನು ಇಟ್ಟು ರೆಟ್ಟಿಫೈ ಮಾಡಬೇಕಲ್ಲವೇ?

ಶ್ರೀ ಬಿ. ಬಸವಲಿಂಗಪ್ಪ,—ಕಾಂಗ್ರೆಸ್ ಸರ್ಕಾರದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆ ಕ್ಲಾಸ್–೧೧ ಇತ್ತು ಈಗ ಏನು ನಾವು ಮಾಡಿದ್ದೇವೆ? ಪ್ರಮೋಷನ್ ಪೋಸ್ಟ್ ರಿಸರ್ವೇಷನ್ ಜೂನಿಯರ್ ಕ್ಲಾಸ್–೧ ವರೆಗೆ ಎಂದು ನಾವು ಮಾಡಿದ್ದೆವು. ಕ್ಯಾಬಿನೆಟ್‌ನಲ್ಲೂ ಭಿನ್ನಾಭಿಪ್ರಾಯ ಇತ್ತು ಎಂದು ಮಾಡಿದೆವು. ಈಗ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕ್ಲಾಸ್–೧೧ ಇರುವವರನ್ನು ಸಂಬಳ ಜಾಸ್ತಿ ಮಾಡಿ ಕ್ಲಾಸ್–೧ ಎಂದು ಮಾಡಿದ್ದೀರಿ. ಎಂದರೆ ಅವರಿಗೆ ಪ್ರಮೋಷನ್ ಇಲ್ಲವೇ ಇಲ್ಲ. ಇವತ್ತು ಜೂನಿಯರ್ ಇಂಜಿನಿಯರ್ಸ್‌ಗೆ ಪ್ರಮೋಷನ್ ಇದೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರಮೋಷನ್ ಇಲ್ಲ. ಆದುದರಿಂದ ನಾನು ಹಲವಾರು ಸಾರಿ ಇದನ್ನು ಈ ಸದನದಲ್ಲಿ ಹೇಳಿದ್ದೇನೆ. ಮತ್ತು ಅವರಿಗೆ ಕಾಗದವನ್ನೂ ಸಹಾ ಬರೆದಿದ್ದೇನೆ. ಅದನ್ನು ಸರಿಮಾಡಿ. ಸರ್ಕಾರದವರು ಪ್ರಮೋಷನ್ ಕೊಡಲಿಕ್ಕೆ ಪ್ರಯತ್ನ ಪಡುವುದಾದರೆ ಪೇ ಸ್ಕೇಲ್ ಮೇಲೆ ಮಾಡಬಾರದು. ಪೇ ಸ್ಕೇಲ್ ಮೇಲೆ ಕೊಟ್ಟರೆ ಮೊದಲಿದ್ದ ಹಾಗೆ ಕ್ಲಾಸ್–೧, ಕ್ಲಾಸ್–೨, ಕ್ಲಾಸ್–೩ ಆ ರೀತಿ ಮಾಡಲಿಕ್ಕೆ ತಾವು ಒಪ್ಪುತ್ತೀರಾ?

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಹಿರಿಯರಾದ ಬಸವಲಿಂಗಪ್ಪನವರು ಹಾಗೂ ಕಾಂಗ್ರೆಸ್ ಪಕ್ಷದ ಉಪ ನಾಯಕರಾದ ಖರ್ಗೆಯವರು ಎತ್ತಿದಂತಹ ಪ್ರಶ್ನೆಗೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಜೆ.ಇ.ಯಿಂದ ಎ.ಇ.ಇ. ಎ.ಇ.ಇ.ಯಿಂದ ಇ.ಇ.ಗೆ ರೋಸ್ಟರ್ ಪ್ರಕಾರ ಪ್ರಮೋಷನ್ ಕೊಡುವಾಗ ಫ್ರೀಜ್ ಮಾಡಿದ್ದೇವೆ. ಸಂಬಳ ಹೆಚ್ಚಿರುವುದರಿಂದ ಶ್ರೇಣಿಗೆ ಅವಲಂಬನೆ ಮಾಡುವುದಕ್ಕೆ ಆಗುವುದಿಲ್ಲ ವೆನ್ನುವ ಮಾತನ್ನು ಹೇಳಿದ್ದೇನೆ. ಇದು ಲೋಕೋಪಯೋಗಿ ಇಲಾಖೆಗೆ ಮಾತ್ರ ಅನ್ವಯ ವಾಗತಕ್ಕದ್ದಲ್ಲ. ರಾಜ್ಯದಲ್ಲಿರತಕ್ಕ ಇತರೆ ಇಲಾಖೆಗಳಲ್ಲಿ ಇದೇ ಶ್ರೇಣಿಯ ಸಂಬಳ ತೆಗೆದುಕೊಳ್ಳುವವರು ಇದ್ದರೆ ಅವರುಗಳಿಗೆಲ್ಲ ಮಾಡಬೇಕೇ ಬೇಡವೆ? ಎನ್ನುವ ಪ್ರಶ್ನೆ ಉದ್ಭವವಾಗುವುದಿಲ್ಲವೇ? ಲೋಕೋಪಯೋಗಿ ಇಲಾಖೆಯ ಬಗ್ಗೆ ಚರ್ಚೆ ಮಾಡಿದ್ದಾರೆ, ಇದು ಪಾಲಿಸಿ ಡಿಸೀಸನ್ ಆಗುತ್ತದೆ. ಅದರ ಬಗ್ಗೆ ಸಾಧಕಬಾಧಕಗಳನ್ನು ನಾವು ನಿರ್ಣಯ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು

ವಿಚಾರವನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಾಲಕ್ಕೆ ನೂರಕ್ಕೆ ಎಂಟು ಪರ್ಸೆಂಟ್ ಇತ್ತು. ಇದರಿಂದಾಗಿ ಆಡಳಿತದಲ್ಲಿ ಆಗತಕ್ಕ ಏರುಪೇರುಗಳನ್ನು ನಾವು ಸರಿಪಡಿಸ ಬೇಕಾಗುತ್ತದೆ. ೧೮ ಪರ್ಸೆಂಟ್ ಇದ್ದದನ್ನು ೨೫ ಪರ್ಸೆಂಟ್‌ಗೆ ಹೆಚ್ಚಿಸಿ ರಿಕ್ರೂಟ್‌ಮೆಂಟ್ ಪಾಲಿಸಿಯಲ್ಲಿ ಇದನ್ನು ಜಾರಿಗೆ ತಂದಿದ್ದೇವೆ. ಪರ್ಸೆಂಟೇಜ್ ಅನ್ನು ಜಾಸ್ತಿ ಮಾಡಿದ್ದೇವೆ, ಏತಕ್ಕೆ ಮಾಡಿದ್ದೇವೆ? ಜೆ.ಇ ಯಿಂದ ಎ ಇ. ಇರಬಹುದು, ಎ ಇ. ಯಿಂದ ಎ ಇ.ಇ ಇರಬಹುದು ಎ ಇ.ಇ. ಯಿಂದ ಇ.ಇ. ಇರಬಹುದು ಡೈರೆಕ್ಟ್ ರಿಕ್ರೂಟ್‌ಮೆಂಟ್‌ನಲ್ಲಿ ಜಾಸ್ತಿ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿಲ್ಲ ಎಂದರೆ ಹೇಗೆ? ಹೋದವರ್ಷ ೧೯೮೫ ಷೆಡ್ಯೂಲ್ಡ್ ಕಾಸ್ಟ್ ಜನರನ್ನು ನೇಮಕ ಮಾಡಿದ್ದೇವೆ. ಅದರ ಬಗ್ಗೆ ಈಗ ವಿವರಣೆ ಕೊಡಲಿಕ್ಕೆ ಹೋಗುವುದಿಲ್ಲ. ತಾವು ಹೇಳಿದ್ದಕ್ಕೆ ಇದನ್ನು ಹೇಳಬೇಕಾಯಿತು.

ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ನೀತಿಯ ವಿಶ್ಲೇಷಣೆ ಮಾಡಲಿಕ್ಕೆ ಪ್ರಯತ್ನ ಮಾಡಿ, ಸಮಾಜದಲ್ಲಿರತಕ್ಕ ಅಂತರವನ್ನು ಅಂದರೆ ಬಡವ-ಶ್ರೀಮಂತ ಆ ಒಂದು ಅಂತರವನ್ನು ಕಡಿಮೆ ಮಾಡಲಿಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಕಾಳಜಿ ವಹಿಸುತ್ತವೆ. ನಮ್ಮ ಆರ್ಥಿಕ ರೂಪುರೇಷಗಳನ್ನು ನಿರೂಪಿಸುವಾಗ ಹ್ಯಾವ್‌ನಾಟ್ಸ್ ಯಾರಿದ್ದಾರೆ ಅವರಿಗೆ ಕೆಲವು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ನೀರಾವರಿ ಕಾರ್ಯಕ್ರಮಗಳನ್ನು ಮುಗಿಸಿದ್ದೇವೆ. ಅದರಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸನ್ನು ಕಾಣಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಚುನಾವಣೆಯ ವಿಷಯದ ಬಗ್ಗೆ ಮಾನ್ಯ ಸದಸ್ಯರು ನಿಮ್ಮ ಪಕ್ಷದ ಜನಪ್ರಿಯತೆ ಕಡಿಮೆಯಾಗಿದೆಯೆಂದು ಹೇಳಿದರು. ಮಾನ್ಯ ಮಾಜಿ ವಿರೋಧಿ ಪಕ್ಷದ ನಾಯಕರಾದ ಬಂಗಾರಪ್ಪನವರು ಭಾರಿ ಪ್ರಚಾರಕ್ಕೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂದು ಹೇಳಿದರು. ಪ್ರಚಾರಕ್ಕೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದರು ಅದಕ್ಕೆ ಉತ್ತರ ತರಿಸಿದ್ದೇನೆ This House is very Anxious to know how much money we have spent on that ಯಾರು ಯಾರು ಎಷ್ಟೆಷ್ಟು ಖರ್ಚು ಮಾಡಿದ್ದಾರೆ. ಯಾವ ಸರ್ಕಾರ ಎಷ್ಟು ಖರ್ಚು ಮಾಡಿದೆ, ಕೇಂದ್ರ ಸರ್ಕಾರ ಎಷ್ಟೆಷ್ಟು ಖರ್ಚು ಮಾಡುತ್ತಿದೆ ಎನ್ನುವ ಫಿಗರ್ಸ್ ತಮಗೆ ಕಳುಹಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಪಾರ್ಲಿಮೆಂಟ್‌ಗೆ ಕಳುಹಿಸಿ. ಕರ್ನಾಟಕದ ವ್ಯವಹಾರ ನೋಡಿಕೊಳ್ಳಿ. ಇಲ್ಲಿಯ ವ್ಯವಹಾರವನ್ನು ಸುಧಾರಿಸಲಿಕ್ಕೆ ನಿಮಗೆ ಸಾಧ್ಯವಿಲ್ಲ...

ಶ್ರೀ ವೇದಾಂತ ಹೆಮ್ಮಿಗೆ.—ನಮ್ಮ ಪಕ್ಷದ ಪ್ರಚಾರಕ್ಕೆ ಮಾನ್ಯ ಬಂಗಾರಪ್ಪನವರು ಜಾಸ್ತಿ ಕಾಂಟ್ರಿಬ್ಯೂಟ್ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.—೧೨ ಸಾವಿರ ರೂಪಾಯಿಗಳ ಸಂಬಳ ಕೊಟ್ಟು ಪ್ರೆಸ್ ಸೆಕ್ರೆಟರಿಯನ್ನು ಇಟ್ಟುಕೊಂಡಿದ್ದಂತಹ ಕಾಲ ಇತ್ತು. ನಾವು ಅಲ್ಲಿದ್ದೆವು, ನೀವು ಇಲ್ಲೆಯೇ ಇದ್ದಿರಿ.

ಒಬ್ಬ ಮಾನ್ಯ ಸದಸ್ಯರು ನಿಮ್ಮ ಥಿಂಕ್‌ಟ್ಯಾಂಕ್?

ಶ್ರೀ ಎಸ್. ಬಂಗಾರಪ್ಪ.—ನಾನು ಮರೆತೇ ಬಿಟ್ಟಿದ್ದೆ, ನಿಮ್ಮ ಥಿಂಕ್‌ಟ್ಯಾಂಕ್ ಥಿಂಕ್ ಮಾಡಿ ಥಿಂಕ್ ಮಾಡಿ ಹೊರಟು ಹೋಯಿತೇ?

ಶ್ರೀ ಎಚ್.ಡಿ. ದೇವೇಗೌಡ.—ನೋಡಿ ಎಲ್ಲಿ ಎಲ್ಲಿಗೋ ಹೋಗುತ್ತಿದ್ದಾರೆ.........

ತಿಂಗಳಿಗೆ ೧೨ ಸಾವಿರ ರೂಪಾಯಿಗಳನ್ನು ಕೊಟ್ಟು, ಮನೆ ಎಲ್ಲಾ ಕೊಟ್ಟು ಇಟ್ಟುಕೊಂಡಿದ್ದರು...

ಶ್ರೀ ಎನ್. ಎಂ. ಅಡ್ಯಂತಾಯ.—ಇವರ ಥಿಂಕ್ ಟ್ಯಾಂಕ್ ಹೋಗಿ ಸ್ಟಿಂಕ್ ಟ್ಯಾಂಕ್ ಆಗಿದೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಇವರನ್ನು ಆಧಾರವಾಗಿಟ್ಟುಕೊಂಡು ಅಂಕಿಅಂಶಗಳನ್ನು ಕೊಟ್ಟರೆ ರಾಜ್ಯದ ಗತಿಯೇನು? ಬೇರೆ ರೀತಿಯಲ್ಲಿ ಅಧಿಕಾರ ಮಾಡಿ ಎಂದು ಜನ ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಯಡಿಯೂರಪ್ಪನವರು ಕೆರೆಗೆ ಗುದ್ದಲಿಪೂಜೆ ಮಾಡಿ ನಮ್ಮನ್ನು ಕರೆಯುತ್ತಾರೆ ಏಕೆ? ಇದನ್ನು ಯಡಿಯೂರಪ್ಪನವರು ಮಾಡಿಸಿದರು ಎಂದು ಪ್ರಚಾರ ಮಾಡುವುದಕ್ಕೆತಾನೆ? ನಾನು ಹೊಳೆನರಸೀಪುರಕ್ಕೆ ಮಂತ್ರಿಯಾಗಿದ್ದಾಗ, ಎಲ್ಲಾ ಮಂತ್ರಿಗಳನ್ನೂ ಕರೆಯಿಸಿಕೊಂಡಿದ್ದೆ ಈ ಕೆಲಸವನ್ನು ದೇವೇಗೌಡರು ಮಾಡಿಸಿದರು ಎಂದು ಜನರಿಗೆ ತೋರಿಸಬೇಕು ಎನ್ನುವ ಉದ್ದೇಶದಿಂದ ಸ್ವಾಮಿ, ಹೆರಿಗೆಭತ್ಯೆ ಎನ್ನುವ ಹೊಸ ಕಾರ್ಯಕ್ರಮ ರೂಪಿಸಿದ್ದೇವೆ ಎಂದು

ಜನರಿಗೆ ತಿಳಿಸಬೇಕಾಗುತ್ತದೆ. ಇದನ್ನು ಪ್ರಚಾರ ಮಾಡುವುದಕ್ಕೆ ಎಂದು ಹೇಳಿದರೆ ಹೇಗೆ? ಅವರಿಗೆ ತಿಳಿಸಬೇಕೋ ಬೇಡವೆ? ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಈ ಕೆಲಸ ಮಾಡಬೇಕಾಗುತ್ತದೆ. ಗ್ರಾಮಾಭಿವೃದ್ಧಿ ಒಗ್ಗೆ ಇವೊತ್ತು ಜನತೆಗೆ ಅದನ್ನು ಮುಟ್ಟಿಸತಕ್ಕ ಸಾಧನ ಪ್ರಚಾರ ಮಾಧ್ಯಮ. ಇದಕ್ಕೆ ಹಣ ಖರ್ಚು ಮಾಡುತ್ತೇವೆ ಎಂದು ಹೇಳಿದರೆ ಹೇಗೆ? ವಾರ್ತಾ ಇಲಾಖೆ ಇರುವುದು ಈ ಕೆಲಸ ಮಾಡಲಿಕ್ಕೆ. ಕೇಂದ್ರದಲ್ಲೇ ಆಗಲಿ, ರಾಜ್ಯದಲ್ಲಿ ಆಗಲೀ, ಮಹಾರಾಷ್ಟ್ರದಲ್ಲಿ ಆಗಲೀ, ಯಾವುದೇ ರಾಜ್ಯವಾಗಲಿ, ಈ ಇಲಾಖೆ ಇರುವುದು ಈ ಕೆಲಸ ಮಾಡುವುದಕ್ಕೆ, ಅದಕ್ಕೋಸ್ಕರ ಇಮೇಜ್ ಬಿಲ್ಡಿಂಗ್—ಇದು ದೇವೇಗೌಡರ ಮತ್ತೊಬ್ಬರ ಪ್ರಶ್ನೆ ಅಲ್ಲ. ಜ್ಯೂಡಿಶಿಯರಿ ಬಗ್ಗೆ ಸರ್ಕಾರದ ನೀತಿಯನ್ನು ಹೇಳುವಾಗ, ಸಂಪರ್ಕಮಾಧ್ಯಮದ ಅವಶ್ಯಕತೆ ಇರುತ್ತದೆ. ಇದು ಪ್ರಚಾರ ಮಾಧ್ಯಮ. ಇದು ವೈಯಕ್ತಿಕ ಪ್ರಶ್ನೆ ಅಲ್ಲ, ಸರ್ಕಾರದ ಪ್ರಶ್ನೆ, ಸರ್ಕಾರದ ನೀತಿಯ ಪ್ರಶ್ನೆ. ನಾಳೆ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಯಾದರೂ ಇಷ್ಟೇ.

ಶ್ರೀ ಎಸ್. ಬಂಗಾರಪ್ಪ.—ಇದು ನೀತಿಯ ಕಾರ್ಯಕ್ರಮವಾಗಿದ್ದರೆ, ಸರ್ಕಾರದ ಪರವಾಗಿ ವಾರ್ತಾ ಇಲಾಖೆ ಅದನ್ನು ಪ್ರಕಟಿಸುತ್ತದೆ. ನಾನು ಹೇಳುತ್ತಿರುವುದು ಎರಡು ಪ್ರಶ್ನೆ. ಒಂದು ಪರ್ಸನಲ್ ಥಾಟ್ಸ್ ಅಥವಾ ಪರ್ಸನಲ್ ಬುಕ್ಸ್ ಅನ್ನು ಸರ್ಕಾರದ ಖರ್ಚಿನಲ್ಲಿ ಅಚ್ಚುಹಾಕಿಸುವುದು. ನನ್ನ ಅಭಿಪ್ರಾಯ ಏನಿದೆ ಎಂದರೆ, ಜ್ಯುಡಿಶಿಯರಿ ಬಗ್ಗೆ ಅಥವಾ ಮತ್ತೊಂದು ಪ್ಲಾನಿಂಗ್ ಬಗ್ಗೆ ಪುಸ್ತಕಗಳನ್ನು ಪ್ರಿಂಟ್ ಮಾಡಿರಿ. ಆದರೆ ವೈಯಕ್ತಿಕವಾಗಿ ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ವಿಚಾರವನ್ನು ಸರ್ಕಾರದ ಖರ್ಚಿನಲ್ಲಿ ಪ್ರಿಂಟ್ಸ್ ಮಾಡಬಹುದೇ? ಅವರು ಬೇಕಾದರೆ ತಮ್ಮ ಸ್ವಂತ ಖರ್ಚಿನಿಂದ ಪ್ರಿಂಟ್ ಮಾಡಿ ಲಿ. ಅದು ಸರ್ಕಾರದ ಕಾರ್ಯಕ್ರಮ ಇದ್ದರೆ ಅದನ್ನು ಪ್ರಿಂಟ್ ಮಾಡಿಸುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಅವರು ಹಿಂದೆ ಪಾರ್ಲಿಮೆಂಟ್ ಮೆಂಬರ್ ಇದ್ದಾಗ ಏತಕ್ಕೆ ಬರೆಯಲಿಲ್ಲ? ಆಗ ಏಕೆ ಪ್ರಿಂಟ್ ಮಾಡಲಿಲ್ಲ? ಆಗ ಅವರಿಗೆ ಪುರಸೊತ್ತು ಸಿಗಲಿಲ್ಲವೆ? ಮುಖ್ಯ ಮಂತ್ರಿಯಾದ ಮೇಲೆ ಅವಕಾಶ ಆಯಿತೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ತೊಂದರೆ ಮಾಡಬೇಕೆಂದು ಅಲ್ಲ. ಗಂಗಾಕಲ್ಯಾಣದ ಬಗ್ಗೆ, ಸೇತುಬಂಧನ ಬಗ್ಗೆ, ಹತ್ತು ಪುಸ್ತಕ ಬಂದರೂ ನಾವು ಸ್ವಾಗತ ಮಾಡುತ್ತೇವೆ. ನಿಮ್ಮ ಸಾಧನೆಗಳ ಬಗ್ಗೆ ಒಂದು ಪುಸ್ತಕವೂ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರ ಬಗ್ಗೆ ಮಿಾಡಿಯಾ ಅಂಡ್ ಮ್ಯಾಂಡೆಂಟ್ ಬಗ್ಗೆ ಒಂದು ಚಾಪ್ಟರೇ ಇದೆ.

ಶ್ರೀ ಎಸ್. ಬಂಗಾರಪ್ಪ —ಹಿಂದಿಯಲ್ಲಿ ಒಂದು ಪುಸ್ತಕ ಪ್ರಿಂಟ್ ಆಗಿದೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕೇಳುತ್ತೇವೆ. ಹಿಂದಿಯಲ್ಲಿ ಪ್ರಿಂಟ್‌ಮಾಡಿ ಉತ್ತರ ಭಾರತದ ಲೋಕಸಭಾ ಸದಸ್ಯರಿಗೆ ಕಳಿಸಿಕೊಡುವುದನ್ನು ತಾವು ಒಪ್ಪುತ್ತೀರಾ? ಇದೇನು ಹೊರನಾಡು ಕನ್ನಡಿಗರಿಗಾಗಿ ಯೇನು?

ಶ್ರೀ ಹೆಚ್. ಡಿ. ದೇವೇಗೌಡ.—ಈಗ, ಪಾರ್ಲಿಮೆಂಟ್ ಮೆಂಬರುಗಳಿಗೆಲ್ಲಾ ಈ ಪುಸ್ತಕಗಳನ್ನು ಏಕೆ ಕಳುಹಿಸಿದಿರಿ ಎಂದರು. ನಾನು ಹಲವಾರು ಹಳೇಯ ಕಡತಗಳನ್ನು ಸುಟ್ಟುಹಾಕಿಲ್ಲ, ಇನ್ನೂ ಕೆಲವನ್ನು ಇಟ್ಟಿದ್ದೇನೆ. ಈ ದೇಶದಲ್ಲಿ ೨೦ ಅಂಶದ ಕಾರ್ಯಕ್ರಮದ್ದು ಯಾರ ಹೆಸರಿನಲ್ಲಿ ಪ್ರಿಂಟ್ ಆಗಿದೆ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ತಾಳಿ ಭಾಗ್ಯ ಯೋಜನೆಯ ಪುಸ್ತಕಕ್ಕೆ ತಾಳಿ ಚಿತ್ರ ಹಾಕಿ, ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —ಇಲ್ಲಿ ನಾವು ವಾದದಲ್ಲಿ ಗೆಲ್ಲಬೇಕು. ಕುಸ್ತಿ ಮಾಡಿಗೆಲ್ಲ ಬೇಕಾಗಿಲ್ಲ. ೨೦ ಅಂಶದ ಕಾರ್ಯಕ್ರಮದ್ದು ಶ್ರೀಮತಿ ಇಂದಿರಾಗಾಂಧಿ ಎಂಬ ವ್ಯಕ್ತಿಯ ಮೇಲೆ ಪ್ರಚಾರವಾಯಿತು ನನ್ನ ಹತ್ತಿರ ಲಿಟರೇಚರ್ ಇದೆ ಬ್ರೋಚರ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ — ೨೦ ಅಂಶದ ಕಾರ್ಯಕ್ರಮ ಗವರ್ನಮೆಂಟ್ ಆಫ್ ಇಂಡಿಯಾ ಕಾರ್ಯಕ್ರಮ. ಇಲ್ಲಿ ನಿಮ್ಮ ಮುಖ್ಯಮಂತ್ರಿಗಳೂ ಕಾರ್ಯಕ್ರಮ ಹಾಕಿದ್ದೀರಿ. ತಾಳಿ ಭಾಗ್ಯ ವಿಡೋ ಪೆನ್‌ಷನ್ ಇವುಗಳಿಗೆಲ್ಲಾ ಸರಿಯಾದ ಪೀಠಿಕೆ ಕೊಟ್ಟು, ಮಾನ್ಯ ಹೆಗಡೆಯವರ ಫೋಟೋ ಹಾಕಿ, ಬೇಕಾದರೆ ಸಿಂಗಪುರದಲ್ಲಿಯೇ ಪ್ರಿಂಟ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೇಮಾವತಿ ಯೋಜನೆಯ ಬಗ್ಗೆ ಒಂದು ಬುಕ್ ಮಾಡಿಸಿ, ಮಾನ್ಯ ದೇವೇಗೌಡರ ಹೆಸರಿನಲ್ಲಿಯೇ ಮಾಡಿಸಿ.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರದ ವಾದವನ್ನು ಸಮರ್ಥನೆ ಮಾಡಿಕೊಳ್ಳಬೇಕೆಂದರೆ, ಇವತ್ತು ಕೇಂದ್ರದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಸರ್ಕಾರದ ನೀತಿ ಮತ್ತು ಕಾರ್ಯಕ್ರಮವನ್ನು ಜನತೆಯ ಮುಂದೆ ಇಡತಕ್ಕಂಥ ಕಾಲದಲ್ಲಿ ಯಾರೇ ಇರಲಿ ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇದರಲ್ಲಿ ವಿಶೇಷವಾಗಿ ಏನೂ ಕಾಣಬೇಕಾಗಿಲ್ಲ. ಆದ್ದರಿಂದ ಇಷ್ಟು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಖರ್ಚು ಮಾಡಿರತಕ್ಕಂಥ ಕೋಟ್ಯಾಂತರ ರೂಪಾಯಿಗಳು ಏನಿವೆ ಅದರ ಬಗ್ಗೆ ಏನು ವಾದ ಮಾಡಿದ್ದಾರೆ, ಅವುಗಳಲ್ಲಿ ಕೆಲವನ್ನು ಸಭೆಯ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಿಂದಿಯಲ್ಲೂ ಪುಸ್ತಕ ಪ್ರಕಟಿಸಿದ್ದಾರೆ, ಇದನ್ನು ತಾವು ಒಪ್ಪುತ್ತೀರಾ?

SRI H. D. DEVE GOWDA.—Sir sardar Patel Lectures—Rs. 45,000, Freedom of Media – Rs. 38,000, Administrative & Socio-economic changes Rs. 28,290, Speech delivered at the National Development Council, Judiciary Total Rs. 62,380 and Planning Process Rs. 51,566. ನಮ್ಮ ಸರ್ಕಾರದ ನೀತಿ ಅಥವಾ ಕಾರ್ಯಕ್ರಮಗಳ ಬಗ್ಗೆ ಜನತೆಗೆ ಮುಟ್ಟಿಸುವುದಕ್ಕೆ ಹಣ ಖರ್ಚು ಮಾಡಿದ್ದೇವೆ...

ಶ್ರೀ ಎನ್.ಎಂ. ಅಡ್ಯಂತಾಯ.—ಅವು ಕನ್ನಡದಲ್ಲಿ ಪ್ರಿಂಟ್ ಆಗಿದೆಯೋ ಅಥವಾ ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿದೆಯೋ ?

ಶ್ರೀ ಹೆಚ್.ಡಿ. ದೇವೇಗೌಡ.—ಎರಡರಲ್ಲೂ ಆಗಿದೆ.

ಶ್ರೀ ಎನ್.ಎಂ. ಅಡ್ಯಂತಾಯ.—ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿರುವುದು ಇದೆ, ಕನ್ನಡದಲ್ಲಿ ಪ್ರಿಂಟ್ ಆಗಿರುವುದು ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಕನ್ನಡದಲ್ಲಿಯೂ ಆಗಿದೆ, ಅದನ್ನು ಕಳುಹಿಸಿಕೊಡುತ್ತೇನೆ. ಡೆಲ್ಲಿಯಲ್ಲಿ ನಡೆಯುವಂಥದ್ದನ್ನು ನಮಗೆ ಕಳುಹಿಸಿಕೊಡುತ್ತಾರೆ. ನಾವು ಕಳುಹಿಸಿಕೊಡಬೇಡವೇ ?

ಶ್ರೀ ವೇದಾಂತ ಹೆಮ್ಮಿಗೆ.—ನಾವು ಮಾಡಿರುವ ಸಾಧನೆಗಳು ಬೇರೆ ರಾಜ್ಯಗಳಿಗೂ ಗೊತ್ತಾಗಲಿ ಎಂದು ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರ ಪ್ರದೇಶದಲ್ಲಿ ಅವರು ಮಾಡಿರುವ ಸಾಧನೆಗಳನ್ನು ನಿಮಗೆ ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ಕಳುಹಿಸಿಕೊಡುತ್ತಾರೆಯೋ ? ಬೇರೆ ಬೇರೆ ರಾಜ್ಯಗಳವರು ನಿಮಗೆ ಕನ್ನಡದಲ್ಲಿ ಕಳುಹಿಸಿದ್ದಾರೆಯೋ ?

೧-೦೦ ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ.—ಇದಕ್ಕೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗಿದೆ ಎಂಬ ವಾದವನ್ನು, ಪ್ರಚಾರಕ್ಕೋಸ್ಕರ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಸನ್ಮಾನ್ಯ ವಿರೋಧಿ ಪಕ್ಷದ ನಾಯಕರು ಏನು ಹೇಳಿದ್ದಾರೆ ಅದು ಸರಿಯಲ್ಲ. ಇರತಕ್ಕಂಥ ಸತ್ಯಾಂಶವನ್ನು ವಾಸ್ತವಾಂಶವನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಕೋಟ್ಯಾಂತರ ರೂಪಾಯಿಗಳು ಖರ್ಚಾಗಿಲ್ಲ, ಲಕ್ಷಾಂತರ ರೂಪಾಯಿಗಳು ಖರ್ಚಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಗಿದೆಯಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಮೂರು ಲಕ್ಷ, ನಾಲ್ಕು ಲಕ್ಷ, ಐದು ಲಕ್ಷ ಖರ್ಚಾಗಿರಬಹುದು. ಆದುದರಿಂದ ನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆಯ ಮುಂದೆ ಇಡತಕ್ಕಂಥ ಕಾರ್ಯಕ್ರಮದಲ್ಲಿ ಇದರ ಬಗ್ಗೆ ಖರ್ಚು ಮಾಡಿರತಕ್ಕಂಥ ಹಣ ಅತ್ಯಂತ ಕಡಿಮೆ ಎಂಬ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ

ಎಂದು ಹೇಳಿ, ಕೊನೆಯದಾಗಿ ಮಾನ್ಯ ವೀರಪ್ಪ ಮೊಯಿಲಿಯವರು ನಮ್ಮ ಪಾಪ್ಯುಲಾರಿಟಿ ಬಗ್ಗೆ ಒಂದು ಮಾತನ್ನು ಹೇಳಿದರು. ಅದರ ಬಗ್ಗೆ ಹೇಳುತ್ತೇನೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ನಮ್ಮ ಪಾಪ್ಯುಲಾರಿಟಿ ಒಂದು ಪರ್ಸೆಂಟ್ ಡಿಕ್ಲೀನ್ ಆಗಿದೆ ಎಂಬ ಮಾತನ್ನು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ.—೧.೬೨ ಪರ್ಸೆಂಟ್.

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ಕಾಲದಲ್ಲಿ ಇವರು ಹೇಳುತ್ತಿದ್ದರು, ನೀವೇ ಅಲ್ಲ, ದೇಶದ ಜನ ಎಲ್ಲೆಲ್ಲೂ ಹೇಳುತ್ತಿದ್ದರು, ಜನತಾ ಪಕ್ಷ ಗ್ರಾಮಾಂತರ ಪ್ರದೇಶದಲ್ಲಿ ಬೇರೂರಿಲ್ಲ. ಅದಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಇದು ನೆಲೆಗಟ್ಟಿಲ್ಲ ಎಂಬ ಮಾತನ್ನು ಹೇಳಿದ್ದರು. ಬೆಂಗಳೂರು, ಹುಬ್ಬಳ್ಳಿ ಮೈಸೂರಿನಂಥ ನಗರ ಪ್ರದೇಶಗಳಲ್ಲಿ ಮಾತ್ರ ಜನತಾಪಕ್ಷ ಇದೆ, ಎಂದು ಹೇಳಿದರು. ಇವೊತ್ತು ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಪುರಸಭೆಗಳಿಗೂ ಚುನಾವಣೆ ನಡೆಸಿದ್ದೇವೆ, ಎಲ್ಲಾ ಕಾರ್ಪೊರೇಷನ್‌ಗಳಿಗೆ ಚುನಾವಣೆ ನಡೆಸಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಎರಡು ಚುನಾವಣೆ ನಡೆದಿದೆ. ದೋಷಗಳ ಬಗ್ಗೆ ಎರಡೂ ಕಡೆ ಮಾತನಾಡಬಹುದು, ಎರಡೂ ಕಡೆ ಘಟನೆಗಳಾಗಿರಬಹುದು ಇದು ಒನ್‌ವೇ ಟ್ರಾಫಿಕ್ ಅಲ್ಲ. ಘರ್ಷಣೆ ಕಾಂಗ್ರೆಸ್ ಪಕ್ಷದಿಂದ ನಡೆಯುವುದಿಲ್ಲ, ಜನತಾದಿಂದ ನಡೆಯುತ್ತದೆ, ಅಥವಾ ಜನತಾ ಪಕ್ಷದಿಂದ ನಡೆಯುವುದಿಲ್ಲ, ಕಾಂಗ್ರೆಸ್‌ನಿಂದ ನಡೆಯುತ್ತದೆ ಎಂಬ ಮಾತನ್ನು ನಾನು ಹೇಳುವುದಿಲ್ಲ. ಅಸೆಂಬ್ಲಿ ಎಲೆಕ್ಷನ್‌ಗಳಲ್ಲಿ ಘರ್ಷಣೆ ಆಗುವುದಿಲ್ಲವೇ ? ಮಾನ್ಯ ಬಂಗಾರಪ್ಪನವರ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಆಗಿಲ್ಲವೇ ! ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಆಗಿಲ್ಲವೇ ? ಮೊಯಿಲಿಯವರ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಆಗಿಲ್ಲವೇ ? ಘರ್ಷಣೆಗಳು ಎಲ್ಲಾ ಚುನಾವಣೆಯಲ್ಲಿಯೂ ಆಗಿವೆ. ಅದೇನೂ ಹೊಸ ವಿಷಯ ಅಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ನಮ್ಮ ಮತದಾರರನ್ನು ಬಹಳ ಪ್ರಬುದ್ಧ ಮತದಾರರು ಎಂದು ಕರೆಯಬೇಕು. ಬಿಹಾರದಲ್ಲಿ ಗನ್ ತೆಗೆದುಕೊಂಡು ಹೋಗಿ ಓಟು ಮಾಡಿಸುತ್ತಾರೆ, ಪೆಟ್ಟಿಗೆ, ಪೆಟ್ಟಿಗೆಯನ್ನೇ ಹೊತ್ತುಕೊಂಡು ಹೋಗುತ್ತಾರೆ. ಇಲ್ಲಿ ಆ ಸ್ಟೇಜ್ ಬಾದಿಲ್ಲ. ಕರ್ನಾಟಕದ ಮತದಾರರಿಗೆ ನಾವು ಇನ್ನೂ ನಮಸ್ಕಾರ ಮಾಡಬೇಕಾಗುತ್ತದೆ ಹೆದರಿಸಿ ವೋಟು ತೆಗೆದುಕೊಂಡಿರಿ ಎಂದು ನಾವು ಇಲ್ಲಿ ಭಾಷಣ ಮಾಡಬಹುದು. ಸೋತವರು ಒಂದು ಕಡೆ, ಗೆದ್ದವರು ಒಂದು ಕಡೆ ಮಾತನಾಡಬಹುದು. ಮಂಡಲ ಪಂಚಾಯತ್‌ನಲ್ಲಿ ಸೋತರೆ ಹೆದರಿಸಿದರು ಎಂದು ಹೇಳುವುದು, ಜಿಲ್ಲಾ ಪರಿಷತ್‌ನಲ್ಲಿ ಗೆದ್ದರೆ ಸರಕಾರದ ಫೇಲ್ಯೂರ್. ಪ್ರತಿಪಕ್ಷದ ಬಗ್ಗೆ ಇರತಕ್ಕಂಥ ಅಭಿಮಾನ ಈ ಮಾತು ಇನ್ನೊಂದು ಕಡೆ. ಇದಕ್ಕೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಕುಡಿಯದೇ ಇರುವವರು ಯಾರು ? ರಾಜಕಾರಣಿಗಳು ಕುಡಿಯುವುದಿಲ್ಲವೇ ? ರಾಜ್ಯದ ಮತದಾರ ಇದ್ದಾನಲ್ಲ ಅವರು ಇವತ್ತು ಅಕ್ಷರ ಕುಕ್ಷಿ ಅಲ್ಲದಿರಬಹುದು, ಅವಿದ್ಯಾವಂತ ಇರಬಹುದು, ಆದರೆ ಅವನಿಗಿರತಕ್ಕಂಥ ಕಾಮನ್ ಸೆನ್ಸ್ ಇದೆಯಲ್ಲ. ಅದರಿಂದ ಈ ದೇಶದ ಜನತಂತ್ರವನ್ನು ಜೀವಂತವಾಗಿ ಉಳಿಸತಕ್ಕ ಕೀರ್ತಿ, ಆ ಮತದಾರನಿಗೆ ಹೋಗಬೇಕು. ಅವನು ಕುಡುಕ ಅಲ್ಲ. ಬಸವಲಿಂಗಪ್ಪನವರೇ ಸ್ವಲ್ಪ ಇರಿ, ೧೯೭೭ರಲ್ಲಿ ಇಂದಿರಾ ಗಾಂಧಿಯವರನ್ನು ಸೋಲಿಸಿ, ಪುನಃ ೧೯೮೦ರಲ್ಲಿ ಜನತಾ ಪಕ್ಷದವರು ಕಚ್ಚಾಡಿದರು ಎಂದು ಅವರನ್ನು ಮನೆಗೆ ಕಳುಹಿಸಿದ, ಎರಡೂ ಕೀರ್ತಿ ಅವನಿಗೆ ಹೋಗಬೇಕು. ನಮ್ಮ ಮತದಾರ ಪ್ರಭು ಯಾರಿದ್ದಾನೆ ನಮಗೆ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಅಧಿಕಾರ ಕೊಟ್ಟಿರುವವನು ಆತ. ಅವನ ಬಗ್ಗೆ ಲಘುವಾಗಿ ಮಾತನಾಡತಕ್ಕ ಪ್ರವೃತ್ತಿ ಬರಕೂಡದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರೂ ಆ ರೀತಿ ಹೇಳಿಲ್ಲ, ನಾವು ಹೇಳಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಇಲ್ಲಿ ಇದೆ, ವೀರಪ್ಪ ಮೊಯಿಲಿಯವರು ಹೇಳಿದರು ಎಂದು ನಾನು ಹೇಳಿಲ್ಲ. ನೀವು ಏತಕ್ಕೆ ಹಾಗೆ ಮಾತನಾಡುತ್ತೀರಿ...

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ.—ತಾವು ೧.೬ ಪರ್ಸೆಂಟ್...

ಅಧ್ಯಕ್ಷರು.—ಅವರು ಮುಗಿಸಿ ಬಿಡಲಿ, ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮೊನ್ನೆಯ ದಿವಸ ಮಾನ್ಯ ಅಬ್ಕಾರಿ ಸಚಿವರು ಉತ್ತರ ಕೊಡುತ್ತಾ ಹೇಳಿದರು ಕಳೆದ ವರ್ಷಕ್ಕಿಂತ ಈ ವರ್ಷ ಸಾರಾಯಿ ಮಾರಾಟ ಮೂರು ಪಟ್ಟು ಜಾಸ್ತಿಯಾಗಿದೆಯೆಂದು. ಇದನ್ನು ಯಾರು ಉಪಯೋಗಿಸಿದರು ?

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಈ ಪ್ರಶ್ನೆಯನ್ನು ಕೇಳುತ್ತೀರೆಂದೆ ನಾನು ಉತ್ತರವನ್ನು ತರಿಸಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಒಂದು ಮಾಡೋಣ. ಮಾನ್ಯ ಅಬ್ಕಾರಿ ಸಚಿವರು ಈ ಸದನದಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಹೆಚ್ಚು ಮಾರಾಟವಾಗಿದೆ ಎನ್ನುವ ಅಂಕಿ ಅಂಶಗಳನ್ನು ಸಹ ತರಿಸೋಣ. ಯಾವ ಜಿಲ್ಲೆಯಲ್ಲಿ, ಯಾರ ಕ್ಷೇತ್ರದಲ್ಲಿ ಹೆಚ್ಚು ಮಾರಾಟವಾಗಿದೆ ಎನ್ನುವುದೂ ಸಹ ಗೊತ್ತಾಗಲಿ. ಅದೊಂದು ವಿಚಾರಣೆ ಮಾಡಿ.

ಅಧ್ಯಕ್ಷರು.—ಇದು ಬಹಳ ಮಹತ್ವದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಾ ಜಿಲ್ಲೆಗಳಲ್ಲಿ ಆಗಿಲ್ಲ. ಅದಕ್ಕೆ ನಾನು ಹೇಳಿದ ಹಾಗೆ ಅಂಕಿ ಅಂಶಗಳನ್ನು ತರಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಪ್ರಶ್ನೆ ಕೇಳಿದವನು ನಾನೆ. ಕಳೆದ ವರ್ಷ ೩೦ ಲಕ್ಷ ಲೀಟರ್ ಮಾರಾಟವಾಗಿತ್ತು, ಈ ವರ್ಷ ೮೫ ಲಕ್ಷ ಲೀಟರ್ ಮಾರಾಟವಾಗಿದೆ ಎಂದು ಉತ್ತರ ಮಾನ್ಯ ಮಂತ್ರಿಗಳು ಕೊಟ್ಟರು. ಮತ್ತೆ ೩ ಲಕ್ಷ ಬೀರ್ ಹೋಗಿ ೭ ಲಕ್ಷ ಲೀಟರ್ ಮಾರಾಟವಾಗಿದೆ. ಇದು ಯಾರಿಗಾದರೂ ಅವಮಾನ ಮಾಡಬೇಕೆಂದು ಅಲ್ಲ. ಚುನಾವಣೆಯ ಮುನ್ನ ನಾಲ್ಕು ದಿವಸಗಳ ಕಾಲ ಮಾರಾಟ ಮಾಡಬಾರದೆಂದು ಆಜ್ಞೆ ಇದ್ದರೂ ಸಹ ಹೇಗೆ ಇದು ಹೊರಗಡೆ ಬರುತ್ತದೆ ಎನ್ನುವುದೇ ಒಂದು ದೊಡ್ಡ ಪ್ರಶ್ನೆ.

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಾದರೆ ಸಮಾಜದಲ್ಲಿ ಹಲವರಿಗೆ ಹಲವಾರು ಅಭ್ಯಾಸಗಳು ಇರುತ್ತವೆ. ಅದು ಕೇವಲ ಒಂದೊಂದೇ ವರ್ಗಕ್ಕೆ ಸೀಮಿತವಲ್ಲ. ಕುಡಿಯುವ ಅಭ್ಯಾಸ ರಾಜಕಾರಣಿಗಳಿಗೆ, ಶಾಸಕರಿಗೆ, ಮಂತ್ರಿಗಳಿಗೂ ಕೂಡ ಇದೆ. ಇದನ್ನು ನಾವು ಅರ್ಥ ಮಾಡಿಕೊಂಡು ಮಾತನಾಡಬೇಕು. ಇದೊಂದೇ ಉದ್ದೇಶದಿಂದ ಚುನಾವಣೆಯನ್ನು ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಹಣ ಕೊಟ್ಟು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಈಗ ಮಾನ್ಯ ಸದಸ್ಯರಾದಂಥ ಬಂಗಾರಪ್ಪನವರ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ಸೋತರು. ಮತ್ತೆ ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದರು. ಕಾರಣ ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ಅವರು ಎಚ್ಚರ ವಹಿಸಿದರು. ಈಗ ನಮ್ಮ ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿ ಚನ್ನರಾಯಪಟ್ಟಣ ಕ್ಷೇತ್ರದಲ್ಲಿ, ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ನಾವು ಗೆದ್ದೆವು. ಅದೇ ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ಸೋತೆವು. ಆಗ ನಾವು ಸೋಲನ್ನು ಒಪ್ಪಿಕೊಳ್ಳಲಿಲ್ಲವೇ? ಒಂದು ಸಾರಿ ಸೋತ ಮೇಲೆ ಪಕ್ಷದ ಕಾರ್ಯಕರ್ತರು ಎಚ್ಚರ ವಹಿಸಿ ಕೆಲಸ ಮಾಡಿರಬಹುದು. ಎಲ್ಲಿ ಗೆದ್ದಿದ್ದಾರೋ ಅದು ಹಣ ಮತ್ತು ಹೆಂಡ ಕೊಟ್ಟು ಓಟು ಕೊಂಡುಕೊಂಡಿದ್ದಾರೇದು ಅರ್ಥವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವ್ಯಾರು ಆ ರೀತಿ ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈ ದೇಶದಲ್ಲಿ ಹಣ ಮತ್ತು ಹೆಂಡ ಕೊಟ್ಟು ಯಾರೂ ಮತ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಕೊನೆಯದಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದೇನೆಂದರೆ ಜನತಾ ಪಕ್ಷಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ನೆಲೆ ಇಲ್ಲ ಎಂದು ಏನು ಹೇಳುತ್ತಿದ್ದರೋ ಅದನ್ನು ನಾವು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ಚುನಾವಣೆಗಳಲ್ಲಿ ತೋರಿಸಿಕೊಟ್ಟಿದ್ದೇವೆ. ಜನತಂತ್ರ ವ್ಯವಸ್ಥೆಯಲ್ಲಿ ಯಾವುದನ್ನು ಸಹ ದಾವಾಶಾ ಹೇಳುವುದಕ್ಕೆ ಬರುವುದಿಲ್ಲ. ಜನತಾ ಪಕ್ಷದ ಒಲವು ಹಳ್ಳಿಗಳಲ್ಲಿ ಕೂಡ ಇವತ್ತು ಜಾಸ್ತಿಯಾಗಿದೆ. ಅದು ಯಾವ ಪಕ್ಷಕ್ಕೂ ಸೀಮಿತವಾಗಿಲ್ಲ. ನಿಮ್ಮ ಅಧ್ಯಕ್ಷರನ್ನೇ ತೆಗೆಯಬೇಕೆಂದು ಹೇಳಿ ನಿಮ್ಮ ಹೈಕಮಾಂಡ್‌ಗೆ ಟೆಲಿಗ್ರಾಮ್ ಕೊಟ್ಟಿರಲಿಲ್ಲವೇ ? ನಿಮ್ಮ ಶಾಸಕರಲ್ಲೇ ಕೆಲವರು ಆ ರೀತಿ ಮಾಡಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.— ನಾವು ಒಪ್ಪುತ್ತೇವೆಂದು ಇಟ್ಟುಕೊಳ್ಳಿ, ನಿಮ್ಮ ಇಮೇಜ್ ಕಡಿಮೆಯಾಗಿದೆ ಎಂದರೆ ನೀವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಇವತ್ತು ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಆಂತರಿಕವಾಗಿ ವಿಚಾರ ಮಾಡುವುದಕ್ಕಾಗುವುದಿಲ್ಲ, ಒಂದು ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದರೆ ಕೂಡಲೇ ಅದಕ್ಕೆ ಪ್ರತಿಯಾಗಿ ಹೇಳಬಹುದು. ಆದ್ದರಿಂದ ಇದನ್ನು ಇಲ್ಲಿಗೇ ಬಿಡೋಣ. ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರನ್ನೊಳಗೊಂಡು ಎಲ್ಲಾ ಮಾನ್ಯ ಸದಸ್ಯರು ಕೊಟ್ಟಂಥ ಅಮೂಲ್ಯವಾದ ಸಲಹೆಗಳು ಏನು ಇವೆ, ಅವುಗಳನ್ನು ಈ ಕಾರ್ಯಕ್ರಮಗಳನ್ನು ಜಾರಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮುಂದುವರಿಸುತ್ತೇವೆಂದು ಹೇಳಿ ಈ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರು, ನಾನು ಕೇಳಿದ್ದಕ್ಕೆ ಏನೂ ಉತ್ತರ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ನಾನು ಎರಡು ಮೂರು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳುತ್ತಿದ್ದೇನೆ. ನಾನು ಏಳನೇ ಪಂಚವಾರ್ಷಿಕ ಯೋಜನೆ ಬಗ್ಗೆ ಕೇಳಿದ್ದೇ ಒಂದು, ಅವರು ಅದಕ್ಕೆ ಉತ್ತರ ಕೊಟ್ಟಿದ್ದೇ ಒಂದು. ಇದರ ಬಗ್ಗೆ ಪಂಚವಾರ್ಷಿಕ ಯೋಜನೆಯು ವಿಚಾರ ಬಂದಾಗ ಮಾತನಾಡೋಣ, ನನ್ನ ಮೂಲಭೂತವಾದ ಪ್ರಶ್ನೆ ಎಂದರೆ, ೫.೯ ಪರ್ಸೆಂಟ್ ಪರ್ ಕ್ಯಾಪಿಟಾ ಇನ್‌ಕಮ್ ಇದ್ದರೆ, ನೀವು ೪.೯೭ಗೆ ಇಳಿದಿದೆ ಎಂದು ಹೇಳಿದ್ದಿರಿ. ೪೫೦೦ ಕೋಟಿ ರೂಪಾಯಿಗಳನ್ನು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಬಹುದಾಗಿತ್ತು. ಆದರೆ ನೀವು ಮೂರೂವರೆ ಸಾವಿರ ಕೋಟಿ ರೂಪಾಯಿಗಳಿಗೆ ಮಾತ್ರ ಯೋಜನೆಯನ್ನು ಸಿದ್ಧ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಒಂದು ಸಾವಿರ ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಇದರಿಂದ ಕಡಿಮೆಯಾಯಿತು. ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀವು ನೀರಾವರಿ ಯೋಜನೆಗೆ ಖರ್ಚು ಮಾಡಿದ್ದಿದ್ದರೆ ಎಷ್ಟು ಪ್ರಯೋಜನವಾಗುತ್ತಿತ್ತು ? ನೀವು ಯೋಜನಾ ವೆಚ್ಚವನ್ನು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆ ಮಾಡಿದ್ದೀರಿ. ಮತ್ತೊಂದು ಪ್ರಶ್ನೆ ಎಂದರೆ, ಟ್ಯಾಂಕ್ ಪ್ರಾಜೆಕ್ಟ್ ಬಗ್ಗೆ, ವರ್ಲ್ಡ್ ಬ್ಯಾಂಕಿನವರು ಟ್ಯಾಂಕ್ ಪ್ರಾಜೆಕ್ಟ್ ೮೦-೮೧ರಲ್ಲಿ ೧೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಅದನ್ನು ನೀವು ಖರ್ಚು ಮಾಡಿದ್ದೀರಿ. ಇದರಿಂದ ಮೈನರ್ ಇರಿಗೇಷನ್‌ಗೆ ಬಹಳ ಅನುಕೂಲವಾಗುತ್ತದೆ. ಈ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗೆ ಫಾರ್ಮುಲೇಷನ್ ಹಾಕಿದ್ದುದು ನಮ್ಮ ಸರ್ಕಾರ, ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್‌ಗೆ ಅಪ್ರೂವ್ ಸಿಕ್ಕಿದ್ದು ನಿಮ್ಮ ಸರ್ಕಾರ ಬಂದ ಮೇಲೆ. ಮೈನರ್ ಇರಿಗೇಷನ್‌ಗೆ ಇನ್ನೂ ಹೆಚ್ಚಿನ ಆದ್ಯತೆಯನ್ನು ನೀವು ಕೊಡಬಹುದಾಗಿತ್ತು.

ಇನ್ನು ಅಪ್ಪರ್ ಭದ್ರ ಪ್ರಾಜೆಕ್ಟ್‌ಗೆ ನೀವು ಹಣವನ್ನು ಒದಗಿಸಿದ್ದಿದ್ದರೆ, ಚಿತ್ರದುರ್ಗ ಜಿಲ್ಲೆಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ನೀವು ಈ ಅಪ್ಪರ್ ಭದ್ರ ಯೋಜನೆಗೆ ಹಣ ಒದಗಿಸದೇ 'ಎಗಚಿ' ಪ್ರಾಜೆಕ್ಟ್‌ಗೆ ಹಣವನ್ನು ಒದಗಿಸಿದ್ದೀರಿ. ೧೯೮೭–೮೮ನೇ ವರ್ಷಕ್ಕೆ ಮೂರು ಕೋಟಿ ರೂಪಾಯಿಗಳನ್ನು ಈ ಎಗಚಿ ಪ್ರಾಜೆಕ್ಟ್‌ಗೆ ಹಣವನ್ನು ಕೊಟ್ಟಿದ್ದೀರಿ. ಇದೇ ರೀತಿ ಅಪ್ಪರ್ ಭದ್ರ ಪ್ರಾಜೆಕ್ಟ್‌ಗೆ ಹಣವನ್ನು ಕೊಟ್ಟಿದ್ದಿದ್ದರೆ ಕೆಲಸವನ್ನು ಪ್ರಾರಂಭ ಮಾಡಬಹುದಾಗಿತ್ತು. ಎಗಚಿ ಪ್ರಾಜೆಕ್ಟ್‌ಗೆ ಪ್ಲಾನಿಂಗ್ ಬಜೆಟ್‌ನಲ್ಲಿ ಹಣವನ್ನು ಇಟ್ಟ ಹಾಗೆ ಅಪ್ಪರ್ ಭದ್ರಯೋಜನೆಗೆ ಏಕೆ ಹಣ ಇಡಲಿಲ್ಲ ? ನೀವು ಮೊದಲು ಪ್ಲಾನಿಂಗ್‌ನಲ್ಲಿ ಇದನ್ನು ಸೇರಿಸಬೇಕಾಗಿತ್ತು ಆಮೇಲೆ, ಪ್ಲಾನಿಂಗ್ ಕಮೀಷನರ್‌ರವರು ಒಪ್ಪುವುದು ಬಿಡುವುದು ಮಾಡಬಹುದಾಗಿತ್ತು. ಅಪ್ಪರ್ ಭದ್ರ ಪ್ರಾಜೆಕ್ಟ್‌ಗೆ ನಿಜವಾಗಿಯೂ ಆದ್ಯತೆ ಕೊಡಬೇಕಾಗಿರುವಂಥ ಸಂದರ್ಭದಲ್ಲಿ ನಿಮ್ಮ ಡಾಕ್ಯುಮೆಂಟ್‌ನಲ್ಲಿ ಅದರ ಪ್ರಸ್ತಾಪವೇ ಇಲ್ಲ. ನೀವು ಒಪ್ಪಿ, ಕೇಂದ್ರದವರು ಇದರ ಬಗ್ಗೆ ಒಪ್ಪಲಿಲ್ಲ ಎಂದಿದ್ದರೆ, ನೀವು ಹೇಳಿದ್ದನ್ನು ನಾವು ಒಪ್ಪಬಹುದಾಗಿತ್ತು. ಇಲ್ಲವಿದ್ದರೆ ಹೇಗೆ ಒಪ್ಪುವುದು ಮಾನ್ಯ ಅಧ್ಯಕ್ಷರೆ? ಇನ್ನು ಮೂರನೇಯದು, ಮುಳವಾಡ ಏತ ನೀರಾವರಿ ಯೋಜನೆಯ ಬಗ್ಗೆ. ಬಿಜಾಪುರದ ಲಕ್ಷಾಂತರ ಜನರು ಬರಗಾಲ ಪೀಡಿತರಾಗಿದ್ದಾರೆ, ಮತ್ತು ಅಲ್ಲಿಯ ಜಾಗ ನಿಮ್ಮ ವಾಟರ್ ಪ್ಲಾನ್‌ನಲ್ಲಿ ಹೋಗಿ, ಆ ಜನರಿಗೆ ಮನೆ, ಮಠ, ಇಲ್ಲದ ಹಾಗೆ ಆಗಿದೆ ಎಂದು ನೀವು ಹೇಳಿದ್ದೀರಿ. ಈ ವಿಷಯದಲ್ಲಿ ತಮ್ಮ ಅನುಕಂಪ ಸರಿಯಾಗಿದೆ. ಆದರೆ ನಾನು ಕೇಳುವುದೇನೆಂದರೆ, ಮುಳವಾಡ ಏತ ನೀರಾವರಿ ಯೋಜನೆಗೆ ತಾವುಗಳು

ಈಗಾಗಲೇ ಶಂಕುಸ್ಥಾಪನೆ ಮಾಡಿಬಿಟ್ಟಿದ್ದೀರಿ. The document is here. ಆದರೆ ಅದಕ್ಕೊಂದು ಒಂದು ನಯಾ ಪೈಸೆಯನ್ನು ಕೂಡ ಕೊಟ್ಟಿಲ್ಲ. ಹಾಗೆ ಏನಾದರೂ ಹಣವನ್ನು ನಿಗದಿ ಮಾಡಿ ಇಟ್ಟಿದ್ದೀರಾ ? There is not even a single rupee provided ನಮ್ಮ ಶಾಸಕ ಮಿತ್ರರಾದ ಮಾನ್ಯ ಉಸ್ತಾದ್‌ರವರು ಹೇಳಿದರು. ಆ ಯೋಜನೆಗೆ ಇನ್ನೂ ಟೆಕ್ನಿಕಲ್ ಅಪ್ರೂವಲ್ ಇಲ್ಲ, ಪ್ಲಾನಿಂಗ್ ಕಮೀಶನ್‌ನವರ ಅಪ್ರೂವಲ್ ಇಲ್ಲ ಹಾಗೆಯೇ ೧೯೮೭-೮೮ರಲ್ಲಿ ಆದಕ್ಕಾಗಿ ಹಣವನ್ನೂ ಕೂಡ ಇಟ್ಟಿಲ್ಲ, ಹೀಗೆ ಯಾವುದೂ ಕೂಡ ಇಲ್ಲದೆ, ಡಿಸೆಂಬರ್ ೮ನೇ ತಾರೀಖಿಗೆ ಶಂಕುಸ್ಥಾಪನೆ ಮಾಡಿದ್ದೀರಿ. ಅದು ಏಕೆಂದರೆ, ಮುಂದೆ ನಡೆಯಲಿರುವ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಚುನಾವಣೆಗಳಲ್ಲಿ ಅನುಕೂಲ ಮಾಡಿಕೊಳ್ಳುವ ದೃಷ್ಟಿಯಿಂದ ಮಾತ್ರ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ತಾವುಗಳು ಭಾಷಣ ಮಾಡುತ್ತಿದ್ದೀರಿ. ಕ್ಲಾರಿಫಿಕೇಶನ್ ಮತ್ತು ಭಾಷಣ ಏನು ಎನ್ನುವುದನ್ನು ತಾವುಗಳು ತಿಳಿದಿದ್ದೀರಿ...

ಶ್ರೀ ಎಂ. ವೀರಪ್ಪ ಮೊಯಿಲಿ.—ಕೊನೆಯದಾಗಿ ನಾನು ಕೇಳುವುದೇನೆಂದರೆ, ತಾವುಗಳು ಪವರ್ ಬಗ್ಗೆ ಹೇಳಿದ್ದೀರಿ. ಪೇಜ್ ೨೨೪ರಲ್ಲಿ ಇದೆ. ಅದರಲ್ಲಿನ ಸ್ಟೇಟ್‌ಮೆಂಟ್ ನಂಬರ್ ಎರಡರಲ್ಲಿ they have given the figures and the cumulative figures stand one and the same for continuously three years.

1985-86	...	2,530 M.W.
1986-87	...	2,530 M.W.
1987-88	...	2,530 M.W.

ಒಂದು ಯೂನಿಟ್ ಕೂಡ ತಾವು ೧೯೮೭-೮೮ರ ವರೆಗೆ You have not increased. Please go through it. These are all cumulative figures. ಆದ್ದರಿಂದ ಇವೊತ್ತು, ಒಂದು ಯೂನಿಟ್ ಕೂಡ ಪವರ್ ಜಾಸ್ತಿ ತರತಕ್ಕಂಥ ಯೋಜನೆ ಇಲ್ಲದಿದ್ದರೂ ಖರ್ಚು ಮಾಡುವುದು, ಕೆಲಸ ಮಾಡುವುದು, ಮತ್ತೊಂದು ಮಾಡುವುದು, ಇವುಗಳನ್ನು ನೋಡಿದರೆ ಪ್ಲಾನ್ ಬಗ್ಗೆ ತಮಗೆ ಕಳಕಳಿ ಇದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾಲ್ಕು ವಿಷಯಗಳಿಗಾಗಿ ಕ್ಲಾರಿಫಿಕೇಶನ್ ಕೇಳಿದ್ದಾರೆ. ಒಂದನೆಯದು ಗ್ರೋತ್ ರೇಟ್ ಬಿದ್ದಿದ್ದರಿಂದ ಪ್ಲಾನ್ size ಕಡಿಮೆಯಾಯಿತು. That is the sum and substance of his argument. ಈಗ ನಾನು ಬೇರೆ ಬೇರೆ ರಾಜ್ಯಗಳ ಉದಾಹರಣೆ ಕೊಟ್ಟು ಸಮರ್ಥನೆ ಮಾಡುವುದು it is my duty The plan outlay proposed by the U.P. Government was Rs. 16,842 crores but the Centre gave clearance only for Rs. 10,447 crores. 10,447 ಕೋಟಿ ಕ್ಲಿಯರೆನ್ಸ್ ಆಯಿತು. ಹಾಗೆಯೇ ಇತರ ರಾಜ್ಯಗಳು ಅಂದರೆ ನಾನು ಕೇವಲ ಕಾಂಗ್ರೆಸ್ ಆಡಳಿತ ರಾಜ್ಯಗಳ ಬಗ್ಗೆ ಮಾತ್ರ ಹೇಳುತ್ತಿಲ್ಲ. ಆಂಧ್ರ ಪ್ರದೇಶ್ proposed the plan outlay for Rs. 7,500 crores but the Centre gave clearance for Rs. 5,200 crores. Likewise, West Bengal Government proposed the plan outlay for Rs. 6646 crores ಪ್ಲಾನ್ ಪ್ರಾಜೆಕ್ಟ್ ಮಾಡಿದರು, ಆದರೆ ೪೧೨೫ ಕೋಟಿ ರೂಪಾಯಿಗಳ ಕ್ಲಿಯರೆನ್ಸ್ ಆಯಿತು. ನಮ್ಮದು Rs. 4,500 crores proposed but, the clearance came for Rs. 3,500 crores. ಇದನ್ನು ತಮ್ಮ ಉದಾಹರಣೆಯನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೇಳುತ್ತಿದ್ದೇನೆ.

ಇನ್ನು ಅಪ್ಪರ್-ಭದ್ರಾ ಬಗ್ಗೆ ಹೇಳಿದರು. ಎಗಚಿ, ಕಾವೇರಿ ಬೇಸಿನ್‌ನ ಯಾವುದೇ ಯೋಜನೆಗಳೂ planned projects ಅಲ್ಲ. ಅದಕ್ಕೆ ಪ್ಲಾನಿಂಗ್ ಕಮಿಶನ್‌ನವರು ಕ್ಲಿಯರೆನ್ಸ್ ಕೊಡಬೇಕಾಗಿಲ್ಲ, All the projects which come under the purview of Kaveri basin are non-planned projects. ಆದುದರಿಂದ ಪ್ಲಾನಿಂಗ್ ಕಮೀಶನ್‌ನವರ ಮುಂದೆ ಅವು ಹೋಗಬೇಕಾಗಿಲ್ಲ. ಇದು ಕೃಷ್ಣ ಬೇಸಿನ್‌ನ ಹಂಚಿಕೆಯಾಗಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು

ನೀರಿನ ಉಪಯೋಗ ಮಾಡಿಕೊಳ್ಳಬೇಕೆನ್ನತಕ್ಕಂಥಾದ್ದು ಈಗಾಗಲೇ ಆ ಕುರಿತ ಮಾಸ್ಟರ್ ಪ್ಲಾನ್ ಒಪ್ಪಿದ್ದು ನಾನು ಅಲ್ಲ. It is not me. ಅಪ್ಪರ್ ಭದ್ರಾಕ್ಕೆ, ಅಪ್ಪರ್ ತುಂಗಕ್ಕೆ 8 TMC ft. ನೀರನ್ನು ಕೇಳಬೇಕೆಂದು ಮಾಡಿದ್ದಾರೆ. ಅಂದರೆ ಕೇವಲ ೮ ಟಿ.ಎಂ.ಸಿ. ಮಾತ್ರ. ಈ ಬಗ್ಗೆ ನಾನು ಈಗ ಮಾತನಾಡಲಿಕ್ಕೆ ಹೋಗುವುದಿಲ್ಲ. ನೀರಾವರಿ ಇಲಾಖೆಯ ಮೇಲೆ ಚರ್ಚೆ ಬಂದಾಗ ಮಾತನಾಡುತ್ತೇನೆ. ಮೂರನೆಯದಾಗಿ ಮಾನ್ಯ ಮೊಯಿಲಿಯವರು ಮುಳವಾಡ ಏತ ನೀರಾವರಿ ಬಗ್ಗೆ ಹೇಳಿದರು. ಆ ಭಾಗದ ಮಾನ್ಯ ಶಾಸಕರು ಹೇಳಿದ್ದನ್ನೂ ಕೇಳಿದ್ದೇನೆ. ೫೫೦ ಕೋಟಿ ರೂಪಾಯಿಗಳ ಯೋಜನೆಯನ್ನು ವಿಶ್ವಬ್ಯಾಂಕ್ ಆರ್ಥಿಕ ನೆರವಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಈಗ ಅದು ಟೆಕ್ನಿಕಲ್ ಕ್ಲಿಯರೆನ್ಸ್ ಆಗಿದೆ ಮತ್ತು ಇಕನಾಮಿಕ್ ಮಿನಿಸ್ಟ್ರಿನಿಂದ ಕ್ಲಿಯರೆನ್ಸ್ ಆಗಿ ವಿಶ್ವಬ್ಯಾಂಕ್‌ಗೆ ಸೂಚನೆಯೂ ಹೋಗಿದೆ, ಅದರಲ್ಲಿ ಈ ಯೋಜನೆಯೂ ಸೇರಿದೆ.

ಯರಿಂಕೆಪಿಯ ಎಲ್ಲಾ ಯೋಜನೆಗಳನ್ನೂ ಸೇರಿಸಿ ಹೇಳುತ್ತಿದ್ದೇನೆ, ಸೆಂಟ್ರಲ್ ಗವರ್ನಮೆಂಟಿನಿಂದ, ವರ್ಲ್ಡ್ ಬ್ಯಾಂಕಿನಿಂದ ಮತ್ತು ಸೆಂಟ್ರಲ್ ವಾಟರ್ ಬೋರ್ಡಿನಿಂದ ಏನು ಕ್ಲಿಯರೆನ್ಸ್ ಅಗತ್ಯವಿದೆಯೋ ಅವೆಲ್ಲಾ ಸಿಕ್ಕಿವೆ. ಮುಳುವಾಡ ಏತ ನೀರಾವರಿ ಯೋಜನೆಯು ಈಗಾಗಲೇ ಶಂಕುಸ್ಥಾಪನೆಯಾಗಿ ಕೆಲಸ ನಡೆದಿದೆ.

ಶ್ರೀ ಎಂ. ವೀರಪ್ಪ ಮೊಯಲಿ.—ಶಂಕುಸ್ಥಾಪನೆ ಮಾಡಬೇಕಾದರೆ ಪ್ಲಾನ್‌ನಲ್ಲಿ ಅದು ಬರಬೇಕಾಗುತ್ತದೆ. There must be some provision. It should come under the plan.

ಶ್ರೀ ಹೆಚ್. ಡಿ. ದೇವೇಗೌಡ.—ಹೌದು ಸ್ವಾಮಿ, ಶಂಕುಸ್ಥಾಪನೆಯಾಗಿ ಕೆಲಸ ಆಗಲೇ ಶುರುವಾಗಿದೆ. ಪ್ಲಾನ್‌ನಲ್ಲಿ ಸೇರಿದೆ ಅದು. It is one of the components of JIP project, phase I,

ಶ್ರೀ ಕೆ ಲಕ್ಕಪ್ಪ.—ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಲೋಕಸೇವಾ ಆಯೋಗದಲ್ಲಿ ನಡೆದಿರುವ ಅವ್ಯವಹಾರಗಳನ್ನು ಸರ್ಕಾರದ ಗಮನಕ್ಕೆ ತಂದು ಅದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಕೋರಿದ್ದೆ. ಇದಕ್ಕೆ ಉತ್ತರ ಹೇಳಬೇಕು. ಅವುಗಳ ಜೊತೆಗೆ ೨೬ ಆಪಾದನೆಗಳ ಪಟ್ಟಿ ನನ್ನಲ್ಲಿದೆ. ಇವುಗಳ ಬಗ್ಗೆಯೂ ಸಿಬಿಐ ತನಿಖೆ ಮಾಡಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಆ ಪಟ್ಟಿಯನ್ನು ಕಳುಹಿಸಿಕೊಡಲಿ. ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಮಂತ್ರಿಗಳು ಹೇಳುತ್ತಿರುವ ನೂರಾರು ಕೋಟಿ ರೂಪಾಯಿಗಳು ಕಾಗದದ ಮೇಲಿವೆಯೋ ರಿಸರ್ವ್‌ಬ್ಯಾಂಕಿನಲ್ಲಿದೆಯೋ ಗೊತ್ತಾಗುತ್ತಿಲ್ಲ. ನಮ್ಮ ಸಿದ್ದಾಪುರ ಸಿರ್ಸಿ ಮುನಿಸಿಪಾಲಿಟಿಯಲ್ಲಿ ಕಳೆದ ೬ ತಿಂಗಳಿಂದ ಅವರ ನೌಕರಿಗೆ ಸಂಬಳ ಕೊಡಲು ದುಡ್ಡಿಲ್ಲದೆ ಸಂಬಳ ಕೊಟ್ಟಿಲ್ಲ. ತಾಲ್ಲೂಕು ಬೋರ್ಡಿನ ಜೀಪಿಗೆ ಪೆಟ್ರೋಲ್ ಹಾಕಿಸಲೂ ದುಡ್ಡಿಲ್ಲ. 'ಚೆಕ್ ಇಷ್ಯೂ' ಮಾಡಿದರೆ ಅವು ಹಿಂದಕ್ಕೆ ಬರುತ್ತಿವೆ. ಈ ಸ್ಥಿತಿ ಬಗ್ಗೆ ಸರ್ಕಾರ ಉತ್ತರಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಸಿದ್ದಾಪುರ ಸಿರ್ಸಿ ಮುನಿಸಿಪಾಲಿಟಿಯ ಆರ್ಥಿಕ ಸ್ಥಿತಿ ಬಗ್ಗೆ ವಿಚಾರಿಸುತ್ತೇನೆ. ಅಲ್ಲದೆ ಆಯಾ ಮುನಿಸಿಪಾಲಿಟಿಗಳು ತಮ್ಮ ಸಂಪನ್ಮೂಲವನ್ನು ತಾವೇ ರೂಢಿಸಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೇವೇಗೌಡರು ಬಹಳ ಎಫಿಶಿಯಂಟಾಗಿ ಮುಖ್ಯವಾಗಿ ನೀರಾವರಿ ಇಲಾಖೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಉತ್ತರ ಕೊಡುತ್ತಿರುವ ಹಾಗಿದೆ. ಅದನ್ನೂ ಅವರೂ ಒಪ್ಪಿಕೊಂಡಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟುತ್ತಿರುವ ಈ ಯೋಜನೆಗಳ ಫಲಿತಾಂಶ ಯಾರನ್ನೂ ಸ್ಟ್ರೆಂಥನ್ ಮಾಡುತ್ತವೆ ? ಉಳ್ಳವರನ್ನೋ ಅಥವಾ ಉಳ್ಳದಿರುವವರನ್ನೋ ಎಂಬುದು ಮುಖ್ಯ. ಅವರ ಅಭಿಪ್ರಾಯದ ಪ್ರಕಾರ ಮತ್ತೆ ಪ್ಲಾನಿಂಗ್ ಕಮಿಷನ್‌ರವರ ಮತ್ತು ಪ್ಲಾನಿಂಗ್ ಸೆಕ್ರೆಟರಿ ಶ್ರೀ ನಂಜುಂಡಪ್ಪನವರ ಪ್ರಕಾರ ಯಾರು ಉಳ್ಳವರೋ ಅವರನ್ನೇ ಸ್ಟ್ರೆಂಥನ್ ಮಾಡುತ್ತವೆ. Re-distribution of Income of Irrigation projects in Karnataka-This is a very good document produced by Dr.

Nanjundappa the Planning Commissioner. ರೈತಾಪಿ ವರ್ಗದಲ್ಲಿ ಉಳ್ಳವರು ಇದ್ದಾರೆ, ಉಳ್ಳದೇ ಇದ್ದವರೂ ಇದ್ದಾರೆ, ಉಳ್ಳದೇ ಇದ್ದವರನ್ನು ಸ್ಟ್ರೆಂಥನ್ ಮಾಡುವುದಕ್ಕೋಸ್ಕರ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇನ್ನು ಎರಡನೆಯದಾಗಿ ಹೇಳುವುದಾದರೆ ಕೃಷಿ ಕಾರ್ಮಿಕರ ಬಗ್ಗೆ ಹೆಚ್ಚು ಕಾಳಜಿ ವಹಿಸಿದ್ದೀರಿ ಆದರೆ ಅಂತಹವರ ಸ್ಟ್ರೆಂಥನ್ ಮಾಡಿಲ್ಲ. ಕೂಲಿ ಬಗ್ಗೆ ಮಾತನಾಡುತ್ತೀರಿ ಮೂಲಭೂತವಾಗಿ ಬೇಸ್ ಸ್ಟ್ರೆಂಥನ್ ಮಾಡಬೇಕಾದರೆ ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತರಬೇಕು. ಹಿಂದುಳಿದ ವರ್ಗದ ಮತ್ತು ಹರಿಜನ ಗಿರಿಜನರು ಬಹಳ ಭಾಗವಿರುತ್ತಾರೆ, ಅಂತಹವರನ್ನು ಸ್ಟ್ರೆಂಥನ್ ಮಾಡಿಲ್ಲ ಎನ್ನುವ ತೀರ್ಮಾನಕ್ಕೆ ನಮ್ಮ ದೇಶದಲ್ಲಿನ ತಜ್ಞರು ನಮ್ಮ ರಾಜ್ಯದಲ್ಲಿನ ತಜ್ಞರು ಬಂದಿದ್ದಾರೆ. ಇದರ ಬಗ್ಗೆ ನಮ್ಮ ರಾಜ್ಯದಲ್ಲಿ ಕಾನೂನನ್ನು ಜಾರಿಗೆ ತರಬೇಕು. ಇದರ ಬಗ್ಗೆ ಏನು ಮಾಡುತ್ತೀರಿ ? ಇದನ್ನು ಮಾಡುವಂತಹ ಯೋಜನೆಯನ್ನು ಮಾಡುತ್ತೀರಾ ? ಈ ಬಗ್ಗೆ ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಮೂಲಭೂತವಾಗಿ ಭೂ ಸುಧಾರಣಾ ಮಸೂದೆಯನ್ನು ಜಾರಿಗೆ ತಂದರೂ ಕಾನ್ಸೆಂಟ್ರೇಷನ್ ಆಫ್ ವೆಲ್ತ್ ಹೆಚ್ಚು ಬೇರೆ ಕಡೆಗೆ ಹೋಗಿದೆ. ಇದು ಆಗದ ಹಾಗೆ ನೋಡಿಕೊಳ್ಳುವಂತಹ ಕಾರ್ಯಕ್ರಮವನ್ನು ಈ ಸರಕಾರ ಮತ್ತು ಹಿಂದಿನ ಸರಕಾರ ಕೂಡ ಮಾಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ತಮಗೂ ಇದರ ಬಗ್ಗೆ ತಕ್ಷಣ ಹೇಳುವುದಕ್ಕೆ ಕಷ್ಟವಾಗುತ್ತದೆ ಇದರ ಬಗ್ಗೆ ಮೂಲಭೂತವಾದಂತಹ ಯೋಚನೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ನೀರಾವರಿಯಿಂದ ಉಳ್ಳಂತಹವರ ಸ್ಥಿತಿ ಹೆಚ್ಚಾಗುತ್ತದೆ ಎಂದು ಹೇಳುವಂತಹ ನಿಮ್ಮ ವಾದ ಏನು ಇದೆ ಇದರಲ್ಲಿ ತಜ್ಞರ ವಾದ ಬೇರೆ ಬೇರೆ ತರಹ ಇದೆ. ಮೇಜರ್, ಮೀಡಿಯಂ ಇರಿಗೇಷನ್‌ಗೆ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಮೈನರ್ ಇರಿಗೇಷನ್‌ಗೆ ಮಾಡಿದ್ದರೆ. ರಿಸಲ್ಟ್ ಕ್ವಿಕ್ ಆಗಿ ಬರುತ್ತದೆ. ಈ ಬಗ್ಗೆ ವಾದ ವಿವಾದ ಇದೆ ಒಂದು ಎಕರೆ ನೀರಾವರಿ ಹೆಚ್ಚು ಮಾಡಿದರೆ ಯಾರು ನಾಲ್ಕು ಜನರು ಇವತ್ತು ಭೂಮಿ ಇಲ್ಲದೇ ದೈಹಿಕ ಶ್ರಮದಲ್ಲಿ ದುಡಿಯತಕ್ಕಂತಹ ಜನರಿದ್ದಾರೆ ಅವರಿಗೆ ಕೂಲಿ ಸಿಗತಕ್ಕಂತಹ ಅವಕಾಶವಾಗುತ್ತದೆ. ಇದರಿಂದಾಗಿ ಒಬ್ಬರಿಗೆ ಸಿಗುವ ಕೆಲಸ ನಾಲ್ಕು ಜನಗಳ ಕೈಗೆ ಸಿಗುತ್ತದೆ. ಬರಡು ಭೂಮಿಯಲ್ಲಿ ಕೆಲಸ ಮಾಡತಕ್ಕಂತಹವನು ಎರಡು ರೂಪಾಯಿ ಸಂಪಾದನೆ ಮಾಡಿದರೆ ಇವನು 20 ರೂಪಾಯಿ ಸಂಪಾದನೆ ಮಾಡುವಂತಹ ಶಕ್ತಿಯನ್ನು ಪಡೆಯುತ್ತಾನೆ. ಇವನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಸಾಮಾನ್ಯವಾಗಿ ಯೋಚನೆ ಮಾಡುವುದಾದರೆ, ಅನುಭವದಿಂದ ಯೋಚನೆ ಮಾಡುವುದಾದರೆ ಒಂದು ಎಕರೆಯನ್ನು ನೀರಾವರಿಗೆ ಒಳಪಡಿಸಿದರೆ ನಾಲ್ಕು ಜನರಿಗೆ ಕೆಲಸ ಕೊಡಲು ಅವಕಾಶವಾಗುತ್ತದೆ ಮತ್ತು ಭೂ ಮಾಲೀಕನ ಆದಾಯ ಕೂಡ ಹೆಚ್ಚಾಗುತ್ತದೆ. ಆದಾಯ ಬೇರೆಯವರಿಗೆ ವಿತರಣೆಯಾಗುವುದಕ್ಕೆ ಸಾಧ್ಯವಾಗುತ್ತದೆ.

SRI C. M. REVANNASIDDAIAH.—Irrigation projects will have to be taken up and completed not for the farmers but it is for the prosperity of the country. It is not correct to say that only farmers are benifitted by these projects. If there are no projeets. then Engineers will become unemployed, and the country will not progress at all.

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಇರಿಗೇಷನ್ ಪ್ರಾಜೆಕ್ಟ್ ಮಾಡಬೇಡಿ ಎಂದು ಕೇಳಿಲ್ಲ. ಹೆಚ್ಚು ಮಾಡಬೇಕಾಗುತ್ತದೆ ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ ಇನ್ನೂ ಹೆಚ್ಚು ಖರ್ಚು ಮಾಡಬೇಕು. ಅವರೊಬ್ಬರೇ ರೈತರ ಹಿತ ರಕ್ಷಣೆ ಮಾಡುವವರೆಂದು ತಿಳಿದುಕೊಂಡಿದ್ದಾರೆ ಅವರ ಹಿತರಕ್ಷಣೆ ಮಾಡುವವರು ನಾವೂ ಕೂಡ ಇದ್ದೇವೆ ನಮ್ಮ ಪಕ್ಷ ಕೂಡ ಇದೆ. ಅದರ ಫಲಿತಾಂಶ ಬಡವರಿಗೆ ಹೋಗಬೇಕು.

ಶ್ರೀ ಸಿ. ಎಂ. ರೇವಣ್ಣ ಸಿದ್ಧಯ್ಯ.—ಮಾನ್ಯ ಅಧ್ಯಕ್ಷರೇ ರೈತರ......

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

೧–೩೦ ಪಿ. ಎಂ.

†ಶ್ರೀ ಆರ್ ವೆಂಕಟರಾಮಯ್ಯ .—ಮಾನ್ಯ ಅಧ್ಯಕ್ಷರೇ, ಈಗ ಉಳ್ಳವರು ಇದರ ಬಗ್ಗೆ ಬಂದಾಗ ಸ್ವಲ್ಪ ಹೇಳಿದರು. ಇವತ್ತು ಯಾ. ಕೃಷಿ ಕಾರ್ಮಿಕನಾಗಲೀ, ಬಡ ರೈತನಾಗಲೀ ಜಮೀನು ಇಲ್ಲದೇ ಸಾಧಾರಣವಾಗಿ ಅವನ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದಿಲ್ಲ. ನಾನು ಅದಕ್ಕೆ ಹೇಳಿದ್ದೆ. ಹೀಗೆ ಏನಾದರೂ ಅಕ್ರಮ ಸಾಗುವಳಿ ಮಾಡಿಕೊಂಡಿರುವವರು, ಇವರುಗಳಿಗೆ ಸರ್ಕಾರಿ ಬಂಜರು ಜಮೀನುಗಳನ್ನು ಹಂಚುವುದು ಮತ್ತೆ ಸರ್‌ಪ್ಲಸ್ ಜಮೀನನ್ನು ಹಂಚುವುದರ ಬಗ್ಗೆ ಸರ್ಕಾರದವರು ಬೇಗ ಈ ಕಾರ್ಯವನ್ನು ಮಾಡುತ್ತಾರೆಯೋ ? ಇನ್ನು ಕಾಫಿ ಪ್ಲಾಂಟೇಷನ್‌ನವರು ಸಕ್ಸೆಸ್‌ಫುಲ್ ಆಗಿ ಎರಡು ವರ್ಷಗಳಿಂದ ವಿಧಾನ ಮಾಡುತ್ತಿದ್ದಾರೆ, ಅದನ್ನು ಬೇಗ ಮಾಡಿಸಬೇಕು. ಬಯಲು ಸೀಮೆ ಪ್ರದೇಶಗಳಲ್ಲಿ ಡ್ರೈಲ್ಯಾಂಡ್ ಬೋರ್ಡ್ ಎಂದು ಮಾಡಿದರು. ಇದು ಪ್ರಾಕ್ಟಿಕಲ್ ಆಗಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಈಗ ಏನಾಗಿದೆ ಎಂದರೆ ನಿಜವಾಗಿ ಅಲ್ಲಿ ನೀರಾವರಿ ವ್ಯವಸ್ಥೆ ಆಗುತ್ತಿಲ್ಲ. ಮತ್ತು ಗಂಗಕಲ್ಯಾಣ ಮತ್ತು ಸಾಮೂಹಿಕ ಬಾವಿಗಳನ್ನು ಕೊಡುವ ಒಂದು ಸ್ಕೀಮ್ ಇವೆ. ಆದರಲ್ಲಿ ಏನಾಗಿದೆ ಎಂದರೆ ಮಾನ್ಯ ದೇವೇಗೌಡರಿಗೆ ಒಂದು ಕಾಳಜಿ ಇದೆ, ಅಲ್ಲಿ ನಿಜವಾಗಿ ವರ್ಕ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯೋಜನೆ ಹಾಕುವುದು ಒಂದು, ಅದು ಆಗುವುದು ಒಂದು. ಜಿಯಾಲಜಿಸ್ಟ್ ಎಂದು ಒಂದು ಏಜೆನ್ಸಿ ಇದೆ. ಈ ಏಜೆನ್ಸಿಯಿಂದ ಸರಿಯಾಗಿ ಗಂಗಾಕಲ್ಯಾಣವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಕೋಲಾರ ತಾಲ್ಲೂಕಿನಲ್ಲಿ ಎರಡು ಮೂರು ಕೂಡಾ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ತಾವು ಸರಿಪಡಿಸುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ದೇವೇಗೌಡರು ಕೃಷಿ ಪ್ರಧಾನವಾದ ಈ ರಾಷ್ಟ್ರದಲ್ಲಿ ೭೦–೮೦ ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ ಕೇವಲ ಒಂಭತ್ತು ಪರ್‌ಸೆಂಟ್ ಮಾತ್ರ ಇವತ್ತು ನೀರಾವರಿ ಯೋಜನೆಗೆ ನಾವು ಖರ್ಚು ಮಾಡುತ್ತಿದೇವೆ ಎಂದು ತಮ್ಮ ಕಳಕಳಿಯನ್ನು ವ್ಯಕ್ತ ಪಡಿಸಿದ್ದಾರೆ. ಮತ್ತೆ ಕಳೆದ ನಾಲ್ಕು ವರ್ಷಗಳಿಂದ ಭೀಕರ ಬರಗಾಲ ಬಂದು ಸರ್ಕಾರದ ಬೊಕ್ಕಸಕ್ಕೆ ೬೫ ಪರ್‌ಸೆಂಟ್ ಆದಾಯ ಕಡಿಮೆಯಾಯಿತು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇವೆಲ್ಲಾ ಪರಿಣಾಮ ರಾಜ್ಯದಲ್ಲಿ ರೈತನ ಮೇಲೆ ಆಗಿದೆ ಅವನ ಉತ್ಪಾದನಾ ವೆಚ್ಚವನ್ನು ಆಧಾರವಾಗಿ ಇಟ್ಟುಕೊಂಡು ಅವನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಒಂದು ಸಮಿತಿಯನ್ನು ರಚಿಸಿ, ಅವನು ಬದುಕುವುದಕ್ಕೆ ದಾರಿ ಮಾಡಿಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಸರ್ಕಾರ ಯೋಜನೆ ಹಾಕಿದೆಯೇ ? ಎರಡನೆಯದು ಸದನ ಮುಗಿಸಿಕೊಂಡು ಮತ್ತೆ ೨೭ಕ್ಕೆ ಸೇರುತ್ತಿದ್ದೇವೆ. ಪೌರಕಾರ್ಮಿಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ನಾಳೆಯಿಂದ ರಸ್ತೆರೋಖೋ ಮಾಡಬೇಕೆಂದಿದ್ದಾರೆ, ಆದರಿಂದ ಕಸಕಡ್ಡಿಗಳು ರೋಡ್‌ನಲ್ಲಿ ಬಿದ್ದಿರುತ್ತವೆ ಮತ್ತು ಕುಡಿಯುವ ನೀರಿಗೆ ಅಡ್ಡಿ ಮಾಡುವಂಥ ಸಂದರ್ಭ ಬರಬಹುದು ಅದಕ್ಕಾಗಿ ನಾವು ವಾಪಸ್ಸು ಬರುವುದರೊಳಗಾಗಿ ಸರಿಯಾದಂಥ ಪರಿಹಾರ ಮತ್ತು ನಾವು ಅವರಿಗೆ ಮುಖ ತೋರಿಸುವುದಕ್ಕೆ ಅವರಿಗೆ ಒಂದು ಸರಿಯಾದಂಥ ಒಂದು ವ್ಯವಸ್ಥೆಯನ್ನು ತಾವು ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಈಗ ರೈತನು ಬರಗಾಲ ಬಂದು ಕಷ್ಟಕ್ಕೆ ತುತ್ತಾಗಿದ್ದಾನೆ. ಪರಿಸ್ಥಿತಿ ಸುಧಾರಣೆಯಾಗಲಿಕ್ಕೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಇನ್ನು ಏನಾದರೂ ಹೊಸ ಕಾರ್ಯಕ್ರಮಗಳು ತಮ್ಮ ಮನಸ್ಸಿನಲ್ಲಿ, ಹೃದಯದಲ್ಲಿ ಅಡಕವಾಗಿದ್ದರೆ ತಿಳಿಸಿದರೆ ರೈತನ ಉಪಯೋಗಕ್ಕಾಗಿ. ಅವನ ಅನುಕೂಲಕ್ಕೋಸ್ಕರ ಅದನ್ನು ಸ್ವೀಕಾರ ಮಾಡುತ್ತೇವೆ. ಮತ್ತು ಅದನ್ನು ಕಾರ್ಯಾನುಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ ರಾಜುಗೌಡ.—ಜನತಾ ಪಕ್ಷದ ಶಾಸನಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ೨೦೦ ಕೋಟಿ ರೂಪಾಯಿಗೂ ಕಡಿಮೆ ಇಲ್ಲದಂತೆ, ಮತ್ತು ಕಾವೇರಿ ಯೋಜನೆಗೆ ೧೦೦ ಕೋಟಿ ರೂಪಾಯಿಗೂ ಕಡಿಮೆ ಇಲ್ಲದಂತೆ ಖರ್ಚು ಮಾಡುತ್ತೇವೆ ಎಂದು ಹೇಳಿದ್ದಿರಿ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಉತ್ತರ ಕೊಡುತ್ತಾ ನಮ್ಮ ನೀರಾವರಿ ಸಚಿವರು ೨೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಇದರ ಭಿನ್ನಾಭಿಪ್ರಾಯದ ಬಗ್ಗೆ ನನಗೆ ವಿವರಣೆ ಬೇಕು. ಎರಡನೆಯದು ರಾಜಕೀಯ ಶಕ್ತಿ ಇರುವಲ್ಲಿ ಆರ್ಥಿಕ ಕಾರ್ಯಕ್ರಮವನ್ನು ಕ್ಷಿಪ್ರ ಗತಿಯಲ್ಲಿ ಫಲಾನು

ಭವಿಗಳಿಗೆ ತಲುಪಿಸಲಿಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಹೇಳಿದರು. ಸ್ವಾಮಿ ತಾವು ಹಿಂದೆ ವಿರೋಧ ಪಕ್ಷದ ಅಧ್ಯಕ್ಷರಾಗಿದ್ದಾಗ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿದ್ದಾಗ ತಾವು ಸೂಚಿಸಿರತಕ್ಕಂಥ ಕೆಲವು ಕಾರ್ಯಕ್ರಮಗಳನ್ನು ನಾನು ರಾಜಕೀಯಕ್ಕೆ ಇಳಿದು ಬಂದರೂ ಇನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಸರ್ಕಾರದ ಆರ್ಥಿಕ ಕಾರ್ಯಕ್ರಮವನ್ನು ಜನತೆಗೆ ತಲುಪಿಸುತ್ತೀರಾ ? ತಮ್ಮ ಅನುಭವದ ಮೇಲೆ ದಯಮಾಡಿ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ೨೦೦ ಕೋಟಿ ರೂಪಾಯಿ, ೧೦೦ ಕೋಟಿ ರೂಪಾಯಿಯನ್ನು ಮುಂದಿನ ವರ್ಷ ಖರ್ಚು ಮಾಡತಕ್ಕಂಥ ನಿರ್ಣಯ ಮಾಡಿದ್ದೇವೆ. ಆ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರು ಇಲ್ಲಿ ವಿರೋಧ ಪಕ್ಷಕ್ಕೆ ಆದ್ಯತೆ ಕೊಡಬೇಕೆಂದು ಹೇಳಿದ್ದಾರೆ. ಆ ದಿಕ್ಕಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಬುರೆಡ್ಡಿ ಪಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಏತ ನೀರಾವರಿ ಯೋಜನೆಯ ನಿಗಮದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳುತ್ತೇನೆ, ಈ ಸಣ್ಣ ನೀರಾವರಿ ಯೋಜನೆ ಮತ್ತು ಏತ ನೀರಾವರಿ ಯೋಜನೆಗಳಿಗೆ ಎಲ್ಲಿ ರೈತರು ೨೫ ಪರ್ಸೆಂಟ್ ಹಣ ಕೊಡಲಿಕ್ಕೆ ಮುಂದೆ ಬರುತ್ತಾರೋ ಅವರಿಗೆ ಇಂತಹ ಯೋಜನೆಗಳನ್ನು ಆರಂಭಿಸಲು ಸರ್ಕಾರದವರು ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸುತ್ತೀರಾ ?

ಎರಡನೆಯದಾಗಿ ಸದ್ಯದಲ್ಲಿ ಈಗ ಇರತಕ್ಕಂಥ ಏತ ನೀರಾವರಿ ಯೋಜನೆಗಳನ್ನು ಏತ ನೀರಾವರಿ ಯೋಜನೆಯ ನಿಗಮಕ್ಕೆ ಹಚ್ಚುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈಗಾಗಲೇ ಈ ಬಗ್ಗೆ ಸದನದಲ್ಲಿ ನಾನು ಆಶ್ವಾಸನೆ ಕೊಟ್ಟಿದ್ದೇನೆ. ಎಲ್ಲಿ ಅವರು ೨೫ ಪರ್ಸೆಂಟ್ ಹಣ ಕೊಡಲಿಕ್ಕೆ ಮುಂದೆ ಬರುವರೋ ಅಲ್ಲಿ ಈ ಏತ ನೀರಾವರಿ ಯೋಜನೆಗಳಿಗೆ ಮೊದಲು ಆದ್ಯತೆ ಕೊಡಬೇಕು ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರಾದ ಶ್ರೀ ಹೆಚ್. ಡಿ. ದೇವೇಗೌಡರು ಉತ್ತರ ಕೊಡುವುದರಲ್ಲಿ ಸಮರ್ಥರಿದ್ದಾರೆ. ಯಾವ ವೀಕ್ ಕೇಸ್ ಆಗಿದ್ದರೂ ಸಹ ಸಮರ್ಥನೆ ಮಾಡುತ್ತಾರೆ. ಈಗ ನಾನು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಬಗ್ಗೆ ಮಾತನಾಡಬೇಕಾಗಿದೆ. ಇದರ ಪರಿಸ್ಥಿತಿ ಹೇಗೆ ಇದೆ ಎಂದರೆ ಒಂದು ಗಾದೆ ಹೇಳಬೇಕಾದರೆ ಊರ ಹೊರಗಡೆ ಇದ್ದಂಥ ಹನುಮಂತರಾಯ ಹಗ್ಗ ಹಿಡಿದುಕೊಂಡು ಜಗಿದ್ದನಂತೆ ಹಾಗೆ ಇದೆ ಈ ಮುನಿಸಿಪಾಲಿಟಿಗಳ ಸ್ಥಿತಿ. ಈಗ ಹಗ್ಗ ಹಿಡಿದುಕೊಂಡು ಜಗಿಯುತ್ತಿರುವ ಈ ಮುನಿಸಿಪಾಲಿಟಿಗಳಿಗೆ ತಾವು ಮೂರು ತಿಂಗಳಿನಿಂದಲೂ ಏನೂ ಮಾಡಿಲ್ಲ. ಇದಕ್ಕೆ ಕೊಡಬೇಕಾದರೆ ಕಾಂಟ್ರಿಬ್ಯೂಷನ್ ಸಹ ಕೊಡುತ್ತಾ ಇಲ್ಲ. ಮೊದಲು ಅವರಿಗೆ ಆಕ್ಟ್ರಾಯಿ ಬರುತ್ತಿತ್ತು. ಈಗ ಅದು ಇಲ್ಲ. ಅದರ ಬದಲು ಅವರಿಗೆ ಕೊಡಬೇಕಾದಂಥಾ ಕಾಂಟ್ರಿಬ್ಯೂಷನ್ ಕೊಟ್ಟಿಲ್ಲ. ಅದಕ್ಕೋಸ್ಕರ ಅವರು ತಮ್ಮ ನೌಕರರಿಗೆ ೩ ತಿಂಗಳಿಂದಲೂ ಸಂಬಳವನ್ನು ಕೊಟ್ಟಿಲ್ಲ. ಅವರಿಗೆ ಸಂಬಳವನ್ನು ಕೊಟ್ಟಿಲ್ಲ, ಅವರಿಗೆ ಸಂಬಳವನ್ನು ಕೊಡುವುದಕ್ಕಾಗುತ್ತಾ ಇಲ್ಲ. ಅವರಿಗೆ ತಾವು ಕೊಡಬೇಕಾದ ಷೇರ್‌ನ್ನು ಕೊಡದೇ ಹೋದರೆ ಅವರು ಸಂಬಳ ಕೊಡುವುದಕ್ಕಾಗುವುದಿಲ್ಲ. ಆಕ್ಟ್ರಾಯಿ ಪುನಃ ತರಲಿಕ್ಕೆ ನೀವು ಅಂಜುತ್ತೀರಿ. ಏತಕ್ಕೆ ಅಂಜುತ್ತೀರೋ ಗೊತ್ತಿಲ್ಲ. ಅದು ನಮ್ಮ ಕಾಲದಲ್ಲಿ ಆದುದ್ದು. ಸರಿ ಅದನ್ನೆ ಆಮೇಲೆ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಮುಂದುವರೆಸಿಕೊಂಡು ಬಂದಿದ್ದಾರೆ. ಅದೇನೇ ಇರಲಿ ಈಗ ತಾವುಗಳು ಬೇಕಾದರೆ ಮತ್ತೊಮ್ಮೆ ಅದನ್ನು ಪರಿಶೀಲನೆ ಮಾಡಿ ಸರ್ಕಾರ ಇದಕ್ಕೆ ತಯಾರಾಗದೇ ಹೋದರೆ ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಅಷ್ಟು ಉತ್ತಮವಾಗುವುದಿಲ್ಲ. ನೀವು ಅವರಿಗೆ ಸಹಾಯಕರಾಗಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಶ್ರೀ ಬಸವಲಿಂಗಪ್ಪನವರು ತಮ್ಮ ಭಾಷಣದಲ್ಲಿ ಕೆಲವು ಸಲಹೆಗಳನ್ನು ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ರಾಜ್ಯಪಾಲರ ಭಾಷಣದಲ್ಲಿ ಮಲೆನಾಡಿನಲ್ಲಿ ಬರಗಾಲ ಈ ವರ್ಷ ಜಾಸ್ತಿಯಾಗಿದೆ ಎಂದು ವ್ಯಕ್ತಪಡಿಸಿದ್ದಾರೆ. ಇದಕ್ಕೆ ತಮ್ಮ ಉತ್ತರ ಏನು ?

ಶ್ರೀ ಹೆಚ್. ಡಿ. ದೇವೇಗೌಡ.—ರಾಜ್ಯಪಾಲರ ಭಾಷಣದಲ್ಲಿ ಹಾಗೆ ಹೇಳಿರುವಾಗ, ಸರ್ಕಾರ ಅದನ್ನು ಗಮನಿಸಿಯೇ ರಾಜ್ಯಪಾಲರ ಬಾಯಿನಿಂದ ಹೇಳಿಸಿದ್ದೇವೆ, ಎನ್ನುವುದು ಅರ್ಥವಾಗುತ್ತದೆ. ಈಗ ನಾನು ಪ್ರತಿಯೊಂದಕ್ಕೂ ಉತ್ತರ ಕೊಡಲಿಕ್ಕೆ ಹೋಗುವುದಿಲ್ಲ. ತಮ್ಮ ಭಾಷಣವನ್ನು ನಾನು ಇಲ್ಲಿ ಕುಳಿತುಕೊಂಡು ಕೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಎಲ್ಲೆಲ್ಲಿ ಯಾವ್ಯಾವ ಪ್ರದೇಶಗಳಲ್ಲಿ ಇಂತಹ ಒಂದು ಪರಿಸ್ಥಿತಿ ಇದೆಯೋ ಆ ಪ್ರದೇಶಗಳಿಗೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನನ್ನ ಭಾಷಣದಲ್ಲಿ ೧೦-೧೨ ಪ್ರಶ್ನೆಗಳನ್ನು ಕೇಳಿದ್ದು ಮಾನ್ಯ ಮಂತ್ರಿಗಳವರು ನನ್ನ ಒಂದು ಪ್ರಶ್ನೆಗೂ ಉತ್ತರ ಕೊಟ್ಟಿಲ್ಲ. ಇಲ್ಲಿ ಯಾರು ಸೀನಿಯರ್ ಮೆಂಬರ್ಸ್ ಇದ್ದಾರೆ ಅವರಿಗೆ ಮಾತ್ರ ಉತ್ತರ ಹೇಳಿದ್ದಾರೆ. ಅದರಲ್ಲೂ ತಮ್ಮ ಡಿಪಾರ್ಟ್‌ಮೆಂಟಿನದ್ದು ಹೇಳಿದ್ದಾರೆ. ನಾನು ಇನ್ನೊಂದು ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನಾನು ಯಾವ್ಯಾವ ವಿಷಯದಲ್ಲಿ ಹೇಳಿದ್ದೇನೆಂದರೆ ಮಹಿಳಾ ಅಭಿವೃದ್ಧಿ ಸಂಸ್ಥೆ ರಚನೆ ಬಗ್ಗೆ, ನರ್ಸರಿ ಉಪಾಧ್ಯಾಯರ ಬಗ್ಗೆ, ಅವರು ಕಬ್ಬನ್ ಪಾರ್ಕ್‌ನಲ್ಲಿ ಸ್ಟ್ರೈಕ್ ಮಾಡಿದ್ದಾರೆ ಅದರ ಬಗ್ಗೆ, ರೂರಲ್ ಡೆವಲಪ್‌ಮೆಂಟ್ ಸ್ಕೀಂಸ್ ಬಗ್ಗೆ ವಿದ್ಯಾರ್ಥಿಗಳು ಹಂಗರ್ ಸ್ಟ್ರೈಕ್ ಏನು ಮಾಡುತ್ತಿದ್ದಾರೆ ಅದರ ಬಗ್ಗೆ, ಕೆ. ಆರ್. ಮಿಲ್ಸ್ ಬಗ್ಗೆ ಇಂಡಸ್ಟ್ರೀಸ್ ಬಗ್ಗೆ ಮತ್ತು ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಈ ರೀತಿಯಾಗಿ ೧೨ ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೊಂದಕ್ಕೂ ಅವರು ಉತ್ತರ ಕೊಟ್ಟಿಲ್ಲ, ಏತಕ್ಕೆ ಹೀಗೆ ಮಾಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯಪಾಲರ ಭಾಷಣದ ಮೇಲೆ ೩೭ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಪ್ರತಿಯೊಂದು ವಿಷಯದ ಬಗ್ಗೆಯೂ ಸರ್ಕಾರ ಉತ್ತರ ಕೊಡಬೇಕು ಎಂದು ಹೇಳಿದರೆ ಅದಕ್ಕೆ ಕಾಲ ಎಷ್ಟು ಬೇಕಾಗುತ್ತದೆ ಎನ್ನುವುದನ್ನು ನೋಡಿ. ನಾನು ಇದರಿಂದ ಜಾರಿಕೊಳ್ಳಬೇಕು ಎನ್ನುವ ಪ್ರಶ್ನೆ ಅಲ್ಲ. ಒಂದೊಂದು ಪ್ರಶ್ನೆಗೂ ಏನೇನು ಉತ್ತರ ಕೊಡಬೇಕೆನ್ನುವುದನ್ನು ನಾನು ನೋಟ್ ಮಾಡಿಕೊಂಡು ಹೇಳುವುದಕ್ಕೆ ತಯಾರಾಗಿದ್ದೇನೆ. ಇದಕ್ಕೆ ಇನ್ನೂ ಎರಡು ಗಂಟೆಗಳ ಕಾಲ ಕೊಡಬೇಕಾಗುತ್ತದೆ. ಮಾತನಾಡಲಿಕ್ಕೆ ಅವಕಾಶ ಇಲ್ಲವಾದ್ದರಿಂದ ಇದರ ಬಗ್ಗೆ ೩೭ ಜನ ಮಾನ್ಯ ಸದಸ್ಯರು ಯಾವ್ಯಾವ ವಿಷಯದಲ್ಲಿ ಮಾತನಾಡಿದ್ದಾರೆ ಅವರು ಹೇಳಿದಂಥಾ ಪ್ರತಿಯೊಂದು ವಿಷಯದಲ್ಲೂ ಸರ್ಕಾರ ಏನೇನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ನೋಡಿ ಅದರ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ ಎಂದು ನಾನು ಮೊದಲೇ ಈ ವಿಚಾರದಲ್ಲಿ ಉತ್ತರ ಕೊಟ್ಟಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ದೇವೇಗೌಡರು ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಕೊಡುತ್ತಾ, ಮೊದಲನೆಯದಾಗಿ, ಜನತಾ ಪಕ್ಷಕ್ಕೆ ಗ್ರಾಸ್‌ರೂಟ್ ಲೆವೆಲ್‌ನಲ್ಲಿ ಯಾರೂ ಇಲ್ಲವೇ ಇಲ್ಲ ಅವರ ಪಕ್ಷದ ಜನಗಳೇ ಇಲ್ಲ ಎಂದು ಜನ ಹೇಳುತ್ತಾ ಇದ್ದರು ಎಂದು ಹೇಳಿದರು. ಅವರು ಹೇಳಿದ್ದುದು ನಿಜ. ಇವರು ಮಾಡಿದ್ದುದು ನಿಜ. ಇವರ ಪಾರ್ಟಿಯವರನ್ನು ಗೆಲ್ಲಿಸುವುದಕ್ಕೋಸ್ಕರ ಊರೂರು ನಾಲ್ಕು ನಾಲ್ಕು ಭಾಗ ಮಾಡಿಬಿಟ್ಟರು, ಮನೆ ಮನೆ ನಾಲ್ಕು ಭಾಗ ಮಾಡಿದರು. ಬಹಳ ಚೆನ್ನಾಗಿ ಬದುಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಹಳ್ಳಿಯ ಜನಗಳನ್ನು, ಮುಗ್ಧ ಜನಗಳನ್ನು ಚಿಂದಿಚಿಂದಿ ಮಾಡಿ ಹಾಕಿಬಿಟ್ಟಿದ್ದಾರೆ. ಇದರಿಂದ ಅವರಿಗೆ ದುಃಖ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನನಗಂತೂ ಬಹಳ ದುಃಖವಾಗಿದೆ. ಎರಡನೆಯದಾಗಿ, ಈ ಪ್ರೋಗ್ರಾಂನಿಂದ ಬಡವರಿಗೆ ನ್ಯಾಯ ದೊರಕಬೇಕು ಸಹಾಯ ದೊರಕಬೇಕು ಎನ್ನುವುದರಲ್ಲಿ ಯಾರದೂ ತಪ್ಪಿಲ್ಲ. ಅದನ್ನು ಮಾಡಿದರೆ ತಪ್ಪು ಎಂದು ಹೇಳುವಂಥ ಮೂರ್ಖರು ಯಾರೂ ಇಲ್ಲ. ಆದರೆ ಹೋಗುತ್ತಾ ಇರುವ ದಾರಿ ವಕ್ರವಾಗಿದೆ. ಅದನ್ನು ಬಹಳಮಟ್ಟಿಗೆ ಸುಧಾರಿಸಿ ತಿದ್ದಿಕೊಳ್ಳಬೇಕು. ತಿದ್ದುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ಬಹಳ ಸಂತೋಷ. ಮೂರನೆಯದಾಗಿ, ಇದು ಸ್ಟ್ರೈಕಿಂಗ್ ಸೀಸನ್. ಒಂದು ಕಡೆ ಪೌರ ಕಾರ್ಮಿಕರು, ಒಂದು ಕಡೆ ಡೈಲಿ ವೇಜಸ್ ವರ್ಕರ್ಸ್, ಇನ್ನೊಂದು ಕಡೆ ನರ್ಸರಿ ಸ್ಕೂಲ್ ಟೀಚರ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ. ೭೫೦ ಹೆಣ್ಣುಮಕ್ಕಳಿಗೆ

೧೧ ತಿಂಗಳಿಂದ ಸಂಬಳ ಕೊಟ್ಟಿಲ್ಲ. ಅವರು ಉಪ್ಪು ತೆಗೆದುಕೊಳ್ಳಬೇಕೋ, ಬೇಳೆ ತೆಗೆದುಕೊಳ್ಳ ಬೇಕೋ. ಅಕ್ಕಿ ತೆಗೆದುಕೊಳ್ಳಬೇಕೋ ಖಾರದಪುಡಿ ತೆಗೆದುಕೊಳ್ಳಬೇಕೋ ಅವರಿಗೆ ೧೧ ತಿಂಗಳಿಂದ ಸಂಬಳ ಕೊಟ್ಟಿಲ್ಲ. ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ಆಮೇಲೆ ಸ್ಟೈಫಂಡರಿ ಗ್ರಾಜುಯೇಟ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ. ಪ್ರಾಪರ್ಟಿ ಟ್ಯಾಕ್ಸ್ ರಿಡಕ್ಷನ್ ಮಾಡಬೇಕು ಎಂದು ಸ್ಟ್ರೈಕ್ ಆಗುತ್ತಿದೆ, ಹೀಗೆ ಬರೀ ಉದ್ದಕ್ಕೂ ಸ್ಟ್ರೈಕ್‌ಗಳು. ಇದನ್ನು ಹೇಗೆ ಬಗೆಹರಿಸಬೇಕು. ನೀರಿನ ದರ ೧೦ ಪೈಸೆ, ೧೫ ಪೈಸೆ ಜಾಸ್ತಿಯಾಯಿತು ಎಂದು ಹೇಳುತ್ತಾರೆ. ಹೀಗಾದರೆ ಹೇಗೆ ಆಡಳಿತ ನಡೆಸಬೇಕು ಎಂದು ಮಾನ್ಯ ಲಕ್ಷ್ಮೀಸಾಗರ್‌ರವರು ದೊಡ್ಡ ಪ್ರಶ್ನೆ ಹಾಕಿದರು. ಮೊನ್ನೆ ಜಡ್ಜ್‌ಮೆಂಟ್ ಸಮೇತ ನಾನು ಮಾತನಾಡುವಾಗ ಹೇಳಿದೆ. ಒಬ್ಬ ಎಕ್ಸೈಜ್ ಕಂಟ್ರಾಕ್ಟರ್ ಒಂದು ದಿವಸಕ್ಕೆ ೩ ಲಕ್ಷ ರೂಪಾಯಿ ಗಳನ್ನು ಉಳಿಸಿಕೊಂಡಿದ್ದಾನೆ. ಈ ರೀತಿ ಎಕ್ಸೈಜ್ ಕಂಟ್ರಾಕ್ಟರ್ ಮಾಡಿರುವುದನ್ನು, ಕೋರ್ಟಿನ ಕೇಸ್, ಜಡ್ಜ್‌ಮೆಂಟ್ ಎಲ್ಲಾ ವಿವರವಾಗಿ ಹೇಳಿದೆ. ಮೊನ್ನೆ ೯ನೇ ತಾರೀಖು ಲಾಸ್ಟ್, ಅವನನ್ನು ರಿವರ್ಷನ್ ಮಾಡಲು ಫೈಲ್ ಮಾಡುವುದಕ್ಕೆ ಆಗಲಿಲ್ಲ. ದಿವಸಕ್ಕೆ ಮೂರು ಮೂರು ಲಕ್ಷ ರೂಪಾಯಿ ಎಲ್ಲಿಹೋಗುತ್ತಿದೆ. ಅವನನ್ನು ಹೇಗೆ ಬೆಳೆಸುತ್ತಾ ಇದ್ದೀರಿ. ಇವೆಲ್ಲಕ್ಕೂ ಉತ್ತರ ಇಲ್ಲ, ಒಂದಕ್ಕೂ ಉತ್ತರ ಇಲ್ಲ. ಶ್ರೀಮತಿ ನಾಗರತ್ನಮ್ಮನವರು ಎಲ್ಲಾ ಮಾತನಾಡಿದ್ದಾರೆ ಎಂದು ಪಟ್ಟಿ ತೋರಿಸಿದರು, ಉತ್ತರ ಇಲ್ಲ. ಮುಂದಕ್ಕೆ ಟೈಂ ಸಿಗುತ್ತದೆ, ದಯಮಾಡಿ ಇದಕ್ಕೆಲ್ಲಾ ಉತ್ತರ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಎಕ್ಸೈಜ್ ಕಂಟ್ರಾಕ್ಟರ್ ಮೇಲೆ ಚಾರ್ಜ್ ಮಾಡಿದ ಬಗ್ಗೆ ಪೂರ್ಣ ವರದಿ ಇಲ್ಲ, ವರದಿಯನ್ನು ನಾನು ತರಿಸಿಕೊಡುತ್ತೇನೆ. ಏಕೆಂದರೆ, ಸದನ ಇನ್ನೂ ಒಂದೂವರೆ ತಿಂಗಳು ಇರುತ್ತದೆ. ಸದನ ಇವತ್ತು ಅಡ್ಜರ್ನ್ ಆದರೂ ಮತ್ತೆ ೨೭ನೇ ತಾರೀಖು ಸೇರುತ್ತದೆ. ಸರ್ಕಾರದ ದೋಷ ಇದ್ದರೆ ಅದನ್ನು ಎತ್ತಿ ತೋರಿಸುವುದಕ್ಕೆ ಅವಕಾಶವಿದೆ. ವಿವರಣೆ ಕೊಡಲಿಕ್ಕೆ ಸಿದ್ಧನಿದ್ದೇನೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ದಿನಗೂಲಿ ನೌಕರರ ಸಮಸ್ಯೆ ಎಲ್ಲರಿಗೂ ಗೊತ್ತಿದೆ. ಸುಮಾರು ೨೫–೩೦ ವರ್ಷಗಳಿಂದ ಇರುವ ವಿಷಯ ಇದು. ಇದರ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಕ್ರಮ ತೆಗೆದುಕೊಂಡಿರುವುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಇನ್ನೂ ತೀವ್ರವಾದ ಸಮಸ್ಯೆ ಇದೆ. ಆ ಸಮಸ್ಯೆಗೆ ಒಂದೇ ಒಂದು ಹೆಜ್ಜೆಯಲ್ಲಿ ಉತ್ತರ ಹೇಳುವುದು ಕಷ್ಟವಿದೆ ಸುಪ್ರೀಂ ಕೋರ್ಟಿನಲ್ಲಿ ವಿವಾದ ಇದೆ, ಹೇಳುವುದು ಕಷ್ಟ. ಇನ್ನು ನರ್ಸರಿ ಸ್ಕೂಲ್ ಟೀಚರ್ಸ್‌ಗೆ ಸ್ಯಾಲರಿ ಆಗಿಲ್ಲ ಎಂದು ಹೇಳಿದರು. ಏಯ್ಡೆಡ್ ಸ್ಕೂಲ್ಸ್ ಗವರ್ನಮೆಂಟ್ ಸ್ಕೂಲ್ಸ್ ಬಗ್ಗೆ ಪೂರ್ಣ ವಾದ ಮಾಹಿತಿ ಇಲ್ಲ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿ, ಅದಕ್ಕೆ ಏನಾದರೂ ಪರಿಹಾರ ಹುಡುಕುತ್ತೇವೆ. ತಾವು ಹೇಳಿರುವ ವಿಷಯದ ಬಗ್ಗೆ ಗಮನಹರಿಸಿ ಸಂಬಂಧಪಟ್ಟ ಇಲಾಖೆಯವರನ್ನು ಕರೆಯಿಸಿ ಚರ್ಚೆ ಮಾಡುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಸಚಿವರಿಗೆ ನೀರಾವರಿ ಯೋಜನೆಗಳ ಬಗ್ಗೆ ಬಹಳ ಆಸಕ್ತಿ ಇದೆ. ಇವರು ವಿರೋಧಪಕ್ಷದಲ್ಲಿದ್ದಾಗಲೂ ಇದರ ಬಗ್ಗೆ ಆಸಕ್ತಿ ಹೊಂದಿದ್ದರು. ಈ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಿಗೆ ಬರುವ ಸಾಲಿನಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ, ೨೦೦ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ ಒಂದು ಹನಿ ನೀರು ಸಹ ಹಾಳಾಗುವುದಕ್ಕೆ ಬಿಡುವು ದಿಲ್ಲವೆಂದು ತಮಟೆ ಭಾರಿಸಿದರೆ ಕೆಲಸವಾಗುವುದಿಲ್ಲ. ಮಂತ್ರ ಹಾಕಿದರೆ ಮಾವಿನಕಾಯಿ ಉದುರುವುದಿಲ್ಲ. ಏಪ್ರಿಲ್‌ನಿಂದ ಕೆಲಸ ಪ್ರಾರಂಭ ಮಾಡಲು ನೀವು ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ತಯಾರಿಸಿದ್ದೀರಾ ಮತ್ತು ನಿಮ್ಮಲ್ಲಿ ಸಾಕಷ್ಟು ಸಿಬ್ಬಂದಿವರ್ಗ ಇದೆಯೇ ? ಬಡ್ಜೆಟ್‌ನಲ್ಲಿ ಹಣ ಒದಗಿಸಿದ್ದೀರಾ ? ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಏನು ಮಾಡಿದ್ದೀರೆಂಬುದನ್ನು ತಾವು ಈ ಸದನಕ್ಕೆ ನಿರ್ಧಿಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ ಈ ರಾಜ್ಯದ ಜನತೆಯನ್ನು ತಾವು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ.

ಇನ್ನು ಗಂಗಾ ಕಲ್ಯಾಣ ಯೋಜನೆ ಬಗ್ಗೆ ಹೇಳಿದಿರಿ. ಈಗ ಎಲ್ಲೆಲ್ಲಿ ನದಿ ಮೂಲ ಇಲ್ಲ, ಕೆರೆಕಟ್ಟೆ ಗಳ ಮೂಲಕ ನೀರನ್ನು ಒದಗಿಸಲು ಶಕ್ಯವಿಲ್ಲ. ಅಂಥ ಕಡೆಗಳಲ್ಲಿ ಈ ಯೋಜನೆಗಳನ್ನು ಹೆಚ್ಚಿನ ರೀತಿ ಯಲ್ಲಿ ಕೈಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್.ಡಿ.ದೇವೇಗೌಡ.—ನಾವು ಅಧಿಕಾರಕ್ಕೆ ಬರಲು ಜನರು ಆಶೀರ್ವಾದ ಮಾಡಿ ಕಳುಹಿಸಿದ ಸಂದರ್ಭದಲ್ಲಿ ನೀರಾವರಿಗೆ ೮೯ ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ ಇದು ೧೭೩ಕೋಟಿರೂಪಾಯಿಗಳಿಗೆಹೆಚ್ಚಿದೆ.ಆದ್ದರಿಂದ ನಾವು ಈದಿಸೆಯಲ್ಲಿಪ್ರಾಮಾಣಿಕಪ್ರಯತ್ನ ಮಾಡಿದ್ದೇವೆಂದು ಸನ್ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ನಾವು ಶಕ್ತಿಮೀರಿ ಪ್ರಯತ್ನ ಮಾಡಿದ್ದೇವೆ. ಮುಂದೆ ಹಣ ಖರ್ಚು ಮಾಡುವ ಬಗ್ಗೆ ನಾವು ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ತಯಾರಿಸಿದ್ದೇವೆ. ಈಗ ನಾವು ಖರ್ಚು ಮಾಡುತ್ತಿರುವ ಹಣ ಮುಂದೆ ೨೦೦ ಕೋಟಿಗೆ ಹೆಚ್ಚಬಹುದು. ಅದಕ್ಕೂ ಹೆಚ್ಚು ಹಣ ಖರ್ಚು ಮಾಡಬೇಕೆಂದರೆ ಹಣವಿರುವ ಜೇಬಿಗೆ ಕೈಹಾಕಬೇಕಾಗುತ್ತದೆ.

ಶ್ರೀ ಎಸ್.ಎಸ್. ಕಡಪಟ್ಟಿ.—ಮಾನ್ಯ ಮಂತ್ರಿಗಳು ಜೇಬಿಗೆ ಕೈಹಾಕಬೇಕೆಂದು ಹೇಳುತ್ತಿದ್ದಾರೆ. ಈಗ ರಿಸೋರ್ಸಸ್ ಮೊಬಿಲೈಜೇಷನ್ ಕಮಿಟಿ ಎಂದು ಮಾಡಿದ್ದಾರೆ. ಆದರೆ ಇದು ಕೇವಲ ಕಾಗದದ ಮೇಲೆ ಇದೆಯೇ ಹೊರತು ಇದರ ಸಭೆಯನ್ನು ಇಲ್ಲಿಯವರೆಗೆ ಕರೆದಿಲ್ಲ. ಇದರ ಸಭೆಯನ್ನು ಕರೆದು ಹಣ ಸಂಗ್ರಹಣದ ಬಗ್ಗೆ ಸಮಿತಿಯವರ ಸಲಹೆ ಮತ್ತು ಸಹಕಾರವನ್ನು ತಾವು ತೆಗೆದುಕೊಳ್ಳಬೇಕು. ಈ ಬಗ್ಗೆ ತಾವು ಪ್ರಯತ್ನ ಮಾಡಿದ್ದೀರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಈಗಲಾದರೂ ಅವರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅಭಿವೃದ್ಧಿ ಕಾರ್ಯಗಳಿಗೆ ಅದರಲ್ಲಿಯೂ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಿಗೆ ಹಣ ಖರ್ಚು ಮಾಡಲು ಯಾರೂ ಸಹ ವಿರೋಧ ಮಾಡುವುದಿಲ್ಲ. ಈ ವಿಚಾರದಲ್ಲಿ ನೀವು ಯಾರ ಕಿಸೆಗೆ ಕೈಹಾಕಿದರೂ ಸಹ ಕರ್ನಾಟಕದ ಜನತೆ ಹಣ ಕೊಡಲು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸಂಪನ್ಮೂಲ ಸಂಗ್ರಹದ ಬಗ್ಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆಂದು ಮಾನ್ಯ ಸದಸ್ಯರು ಹೇಳಿದ್ದಕ್ಕೆ ತುಂಬಾ ಧನ್ಯವಾದಗಳು.

ಶ್ರೀ ಎಂ.ಎಲ್. ಉಸ್ತಾದ್.—ಮುಳವಾಡ್ ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಈ ಕೆಲಸವನ್ನು ಮುಗಿಸುತ್ತೀರಿ ಎಂಬುದನ್ನು ತಿಳಿಸಬೇಕು. ೧೯೮೭–೮೮ನೇ ಸಾಲಿಗೆ ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕೆಲಸ ಪ್ರಾರಂಭ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅಪ್ಪರ್–ಕೃಷ್ಣಾ ಯೋಜನೆಯ ಕೆಲಸಕ್ಕೆ ೫೫೦ ಕೋಟಿ ರೂಪಾಯಿಗಳ ನೆರವನ್ನು ನೀಡಬೇಕೆಂದು ವಿಶ್ವಬ್ಯಾಂಕ್‌ನವರನ್ನು ಕೇಳಿದ್ದೇವೆ. ಈ ಯೋಜನೆಯನ್ನು ಪೂರ್ಣ ಮಾಡಲು ನಮಗೆ ಮೂರುವರೆ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ೩೦೨ ಟಿ.ಎಂ.ಸಿ. ಎಫ್.ಟಿ. ನೀರನ್ನು ಬಳಸಿಕೊಳ್ಳಲು ಇಷ್ಟು ಹಣ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂಥ ಮುಳವಾಡ್ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಸಹ ಇದರಲ್ಲಿ ಒಂದು ಘಟಕವಾಗಿ ಸೇರಿಸಲಾಗಿದೆ. ಪ್ರಥಮ ಹಂತದ ಎರಡನೇ ಘಟ್ಟದಲ್ಲಿ ಇದೂ ಬರುತ್ತದೆ. ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿದೆ ನಮ್ಮ ಪಾಲಿಗೆ ೭೩೬ ಟಿ.ಎಂ.ಸಿ. ಎಫ್.ಟಿ.ಯಷ್ಟು ನೀರನ್ನು ಏನು ಕೊಟ್ಟಿದ್ದಾರೆ, ಅದರ ಒಂದು ವ್ಯಾಪ್ತಿಯಲ್ಲಿಯೇ ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ. ಪೌರ ಕಾರ್ಮಿಕರ ವಿಚಾರದಲ್ಲಿ ಮಾನ್ಯ ಬಸವಲಿಂಗಪ್ಪನವರೂ, ತಾವು ಕೂಡ ಹೇಳಿದ್ದೀರಿ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ :

" ಜನವರಿ ೨೯, ೧೯೮೭ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯ ಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ. "

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

ಸಭೆಯು ಈಗ ಮುಕ್ತಾಯವಾಗಿ ದಿನಾಂಕ: ೨೭ನೇ ಫೆಬ್ರುವರಿ ೧೯೮೭ರಂದು ಮಧ್ಯಾಹ್ನ ಒಂದು ಗಂಟೆಗೆ ಸಮಾವೇಶಗೊಳ್ಳುವುದು.

ಸಭೆಯು ಮಧ್ಯಾಹ್ನ ೧-೫೨ಕ್ಕೆ ಮುಕ್ತಾಯವಾಗಿ ಪುನಹ ೨೭ನೇ ಫೆಬ್ರುವರಿ ೧೯೮೭ ರಂದು ಮಧ್ಯಾಹ್ನ ಒಂದು ಗಂಟೆಗೆ ಸೇರಲು ನಿಶ್ಚಯಿಸಿತು.